# ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮಗಳು ಮತ್ತು ನಿಯಮಗಳು 1961-2019



ಕರ್ನಾಟಕ ವೈದ್ಯಕೀಯ ಪರಿಷತ್ತು

16/6 ಮಿಲ್ಲರ್‌ಟ್ಯಾಂಕ್ ಬಂಡ್ ಏರಿಯಾ, ವಸಂತನಗರ

ಬೆಂಗಳೂರು 560 052

# ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮಗಳು ಮತ್ತು ನಿಯಮಗಳು

## ೧೯೬೧-೨೦೧೯


**ಕರ್ನಾಟಕ ವೈದ್ಯಕೀಯ ಪರಿಷತ್ತು**

**16/6 ಮಿಲ್ಲರ್‌ಟ್ಯಾಂಕ್ ಬಂಡ್ ಏರಿಯ, ವಸಂತನಗರ**

**ಬೆಂಗಳೂರು 560 052**

**ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮಗಳು**
**ಮತ್ತು ನಿಯಮಗಳು ೧೯೬೧–೨೦೧೯**
ಅನುವಾದಕ : **ನಾಡೋಜ ಡಾ. ಪಿ.ಎಸ್.ಶಂಕರ**

ಹಕ್ಕು ಸ್ವಾಮ್ಯ : ಕರ್ನಾಟಕ ವೈದ್ಯಕೀಯ ಪರಿಷತ್ತು
೨೦೨೦

ಪ್ರಕಾಶಕರು
**ರಿಜಿಸ್ಟ್ರಾರ್**
**ಕರ್ನಾಟಕ ವೈದ್ಯಕೀಯ ಪರಿಷತ್ತು**
**ಬೆಂಗಳೂರು**

ಮುದ್ರಕರು
ವಿಶ್ವಾಸ ಪ್ರಿಂಟ್ಸ್

# ಅಧ್ಯಕ್ಷರ ನುಡಿ

ಕರ್ನಾಟಕ ವೈದ್ಯಕೀಯ ಪರಿಷತ್ತು ಒಂದು ಸ್ವಾಯುತ್ತ ಸಂಸ್ಥೆ. ಇದು ಕರ್ನಾಟಕ ಸರಕಾರ ಅಧಿನಿಯಮದ ಅಡಿ ಸ್ಥಾಪಿತವಾದ ಸಂಸ್ಥೆ.

ಕನ್ನಡವನ್ನು ಆಡಳಿತ ಭಾಷೆಯಾಗಿ ನಮ್ಮ ಸರಕಾರ ಅಂಗೀಕಾರ ಮಾಡಿದೆ. ಕನ್ನಡ ಪ್ರಾಧಿಕಾರ ಕೂಡ ಎಲ್ಲಾ ಆಡಳಿತ ವ್ಯವಹಾರಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಆಗ್ರಹ ಮಾಡುತ್ತಿದೆ. ಕರ್ನಾಟಕ ಸರಕಾರದ E-Governance ಕೂಡ ಕನ್ನಡೀಕರಣಗೊಳಿಸುತ್ತಿದೆ. ನ್ಯಾಯಾಂಗ ಹಾಗೂ ಇತರ ಸಂಸ್ಥೆಗಳು ಪೂರ್ಣ ರೂಪದಲ್ಲಿ ಕನ್ನಡದಲ್ಲಿ ವ್ಯವಹರಿಸುತ್ತಿಲ್ಲ. ಕನ್ನಡವನ್ನು ನಮ್ಮ ದೈನಂದಿನ ಆಡಳಿತದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಕರ್ನಾಟಕ ವೈದ್ಯಕೀಯ ಪರಿಷತ್ ಕೂಡ ಈ ನಿಟ್ಟಿನಲ್ಲಿ ಪ್ರಯತ್ನ ಕೈಗೊಂಡಿದೆ.

ನಾಡೋಜ ಡಾ॥ ಪಿ. ಎಸ್. ಶಂಕರ್‌ರವರು ಒಬ್ಬ ಮೇಧಾವಿ ಲೇಖಕರು. ಅವರ ಪ್ರಯತ್ನದಿಂದಾಗಿ ಪರಿಷತ್‌ನ ನಿಬಂಧನೆಗಳನ್ನು ಕನ್ನಡದಲ್ಲಿ ಅನುವಾದ ಮಾಡಲಾಗಿದೆ. ಅವರಿಗೆ ವೈದ್ಯಕೀಯ ಪರಿಷತ್ತಿನ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಜೈ ಕರ್ನಾಟಕ, ಜೈ ಭಾರತ

**ಡಾ. ವೀರಭದ್ರಪ್ಪ**

ಅಧ್ಯಕ್ಷರು,

ಕರ್ನಾಟಕ ವೈದ್ಯಕೀಯ ಪರಿಷತ್

# ಪ್ರಸ್ತಾವನೆ

ಮೈಸೂರು ರಾಜ್ಯದಲ್ಲಿ ರಾಜ್ಯ ಮೆಡಿಕಲ್ ಕೌನ್ಸಿಲ್, ಮೈಸೂರು ವೈದ್ಯಕೀಯ ಪರಿಷತ್ತು ಎಂದು ೧೯೩೧ರಲ್ಲಿ ಇಂಗ್ಲೆಂಡಿನ ಜನರಲ್ ಮೆಡಿಕಲ್ ಕೌನ್ಸಿಲ್ ಮಾದರಿಯಲ್ಲಿ ಸ್ಥಾಪಿಸಲ್ಪಟ್ಟಿತು. ಕನ್ನಡ ಮಾತನಾಡುವ ಹಳೆಯ ಮದ್ರಾಸ್ ರಾಜ್ಯದ ಬಳ್ಳಾರಿ ಜಿಲ್ಲೆ ೧೯೫೩ರಲ್ಲಿ, ಮತ್ತು ಹಳೆಯ ಮುಂಬಯಿ ಪ್ರಾಂತ್ಯ, ಹೈದರಾಬಾದ್ ರಾಜ್ಯ, ಮದರಾಸು ಪ್ರಾಂತ್ಯದ ದಕ್ಷಿಣ ಕನ್ನಡ ಮತ್ತು ಕೊಡಗು ಪ್ರದೇಶಗಳು ೧೯೫೬ರಲ್ಲಿ ರಾಜ್ಯ ಪುನರ್ಘಟನೆಯ ಫಲವಾಗಿ ರಾಜ್ಯ ವಿಸ್ತಾರಗೊಂಡಿತು. ಹೀಗಾಗಿ ರಾಜ್ಯದ ಬೇರೆ ಬೇರೆ ಕಡೆಯ ಕಾನೂನುಗಳ ಪ್ರಕಾರ ಅಧುನಿಕ ವೈದ್ಯಕೀಯ ವ್ಯವಸ್ಥೆಗೆ ಸೇರಿದ ವೃತ್ತಿಪರ ವೈದ್ಯರ ನೋಂದಣಿ ಪ್ರಕ್ರಿಯೆ ಪ್ರಚಲಿತವಿದ್ದಿತು. ರಾಜ್ಯದ ಬೇರೆ ಬೇರೆ ಕಡೆ ಪ್ರಚಲಿತವಿದ್ದ ಕಾನೂನುಗಳನ್ನು ಮೈಸೂರು ಮೆಡಿಕಲ್ ರಿಜಿಸ್ಟ್ರೇಷನ್ ಅಧಿನಿಯಮ ೧೯೩೧ಕ್ಕೆ ಹೊಂದಿಸಬೇಕಾಯಿತು. ಇಡೀ ರಾಜ್ಯಕ್ಕೆ,. ರಾಜ್ಯದಾದ್ಯಂತ ಅಧುನಿಕ ವೈದ್ಯ ಪದ್ಧತಿಯ ವೃತ್ತಿ ಕೈಕೊಂಡಿರುವ ವೈದ್ಯರ ನೋಂದಣಿಗೆ ಏಕ ರೀತಿಯ ಕಾನೂನು ಹೊಂದುವ ಅವಶ್ಯಕತೆ ಯಿದ್ದಿತು.

ಮೆಡಿಕಲ್ ಕೌನ್ಸಿಲ್, ಮೆಡಿಕಲ್ ರಿಜಿಸ್ಟರ್‌ಗಳನ್ನು ಕಾಯ್ದಿರಿಸುವ ಮತ್ತು ಅವುಗಳನ್ನು ನಿಯಮಿತವಾಗಿ ನವೀಕರಿಸುವ ಉದ್ದೇಶವನ್ನು ಹೊಂದಿದೆ; ನೋಂದಣಿಯಾದ ವೃತ್ತಿಪರ ವೈದ್ಯರ ನಡವಳಿಕೆಯ ನಿಯಮಾವಳಿಯನ್ನು ಕಾಪಾಡುವುದು; ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಉಂಟಾದ ಮುನ್ನಡೆಯ ಜ್ಞಾನವನ್ನು ವೈದ್ಯರಲ್ಲಿಉನ್ನತೀಕರಿಸುವ ಮತ್ತು ಸಿಎಂಇ ಮಾನ್ಯತಾ ಅಂಕಗಳನ್ನು ಕೊಡಮಾಡುವ ಗುರಿಯನ್ನು ಹೊಂದಿದೆ.

ಅಧುನಿಕ ವೈದ್ಯ ವ್ಯವಸ್ಥೆಯ ವೃತ್ತಿಪರ ವೈದ್ಯರ ನೋಂದಣಿಗೆ ಇರುವ ಎಲ್ಲ ಕಾನೂನುಗಳನ್ನು ಕರ್ನಾಟಕ ಮೆಡಿಕಲ್ ರಿಜಿಸ್ಟ್ರೇಷನ್ ಅಧಿನಿಯಮ ೧೯೬೧ ಮತ್ತು ೧೯೬೩ರ ಪ್ರಕಟಣೆಯಲ್ಲಿ ಸಂಗ್ರಹಿಸಲಾಗಿದೆ. ಅದನ್ನು ನಂತರ ೧೯೭೦, ೧೯೭೯, ೨೦೦೩ ಮತ್ತು ೨೦೧೯ರಲ್ಲಿ

ನಿಯಮಗಳಿಗೆ ತಿದ್ದುಪಡಿ ಮೂಲಕ ಆದ್ಯತನಗೊಳಿಸಲಾಗಿದೆ. ಅಲ್ಲದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ೨೦೧೨ ಮತ್ತು ೨೦೧೯ರಲ್ಲಿ ಮಾಡಿದ ಪ್ರಕಟಣೆಗಳೂ ಸೇರ್ಪಡೆಯಾಗಿವೆ.

ಈ ಎಲ್ಲ ನಿಯಮಾವಳಿ ಮತ್ತು ಅದರ ತಿದ್ದುಪಡಿಗಳ ಬಗೆಗಿನ ಮಾಹಿತಿ ಒಂದೇ ಕಡೆ ದೊರೆಯುವುದರ ಕಷ್ಟವನ್ನು ನೋಡಿ, ಈ ಎಲ್ಲ ಅಂಶಗಳನ್ನು ಒಗ್ಗೂಡಿಸಿ ಒಂದು ಪುಸ್ತಿಕೆಯಲ್ಲಿ ಸಂಗ್ರಹಿಸಬೇಕೆಂಬ ವಿಚಾರ ಮೊಳೆಯಿತು. ಇದು ಬೇರೆ ಬೇರೆ ಅಧಿನಿಯಮಗಳು ಮತ್ತು ನಿಯಮಗಳ ಮತ್ತು ಅದರ ತಿದ್ದುಪಡಿಗಳ ಮಾಹಿತಿಯನ್ನು ನೀಡುತ್ತದೆ.

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ಮತ್ತು ನಿಯಮಗಳು ೧೯೬೧–೨೦೧೯ರ ಪ್ರಕಟಣೆ ಅನುವಾದಿಸಿ ಕನ್ನಡದಲ್ಲಿ ಹೊರತರಲು ಅವಕಾಶ ಮಾಡಿಕೊಟ್ಟ ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಧ್ಯಕ್ಷರಾದ ಡಾ. ಹೆಚ್. ವೀರಭದ್ರಪ್ಪ ಅವರಿಗೆ ಕೃತಜ್ಞತೆಗಳು. ಈ ಕಾರ್ಯದಲ್ಲಿ ಸಹಕಾರ ನೀಡಿದ ಡಾ. ಪ್ರಾಣೇಶ ಗುಡೂರ, ಡಾ. ಎಸ್.ಎ. ಮಾಲೀ ಪಾಟೀಲ್, ಡಾ. ರವೀಂದ್ರ ಕೊಂಡಾ ಮತ್ತು ಶ್ರೀ ಟಿ.ಎಲ್. ವೆಂಕಟೇಶ ಅವರಿಗೆ ಆಭಾರಿ.

**ಪಿ.ಎಸ್. ಶಂಕರ**

# ಪರಿವಿಡಿ


| | | |
|---|---|---|
| ಅಧ್ಯಕ್ಷರ ನುಡಿ | | ೩ |
| ಪ್ರಸ್ತಾವನೆ | | ೪ |
| ೧. | ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧ | ೭ |
| ೨. | ಕರ್ನಾಟಕ ವೈದ್ಯಕೀಯ ನೋಂದಣಿ ನಿಯಮಗಳು, ೧೯೬೩ | ೨೯ |
| ೩. | ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ನಿಯಮಗಳು ೧೯೭೦ | ೭೯ |
| ೪. | ಕರ್ನಾಟಕ ಮೆಡಿಕಲ್ ನೋಂದಣಿ (ತಿದ್ದುಪಡಿ) ನಿಯಮಗಳು, ೧೯೭೯ | ೯೮ |
| ೫. | ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ನಿಯಮಗಳು ೨೦೦೩ | ೧೦೦ |
| ೬. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಪ್ರಕಟಣೆ, ೨೦೧೨ | ೧೦೬ |
| ೭. | ಕರ್ನಾಟಕ ರಾಜ್ಯ ಪತ್ರ ೨೦೧೭ | ೧೦೭ |
| ೮. | ಕರ್ನಾಟಕ ರಾಜ್ಯ ಪತ್ರ, ೨೦೧೯ | ೧೧೧ |

# ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961
## (ಕರ್ನಾಟಕ ಅಧಿನಿಯಮ ಸಂಖ್ಯೆ. 1961ರ 34)

## ಪರಿವಿಡಿ


**ಉದ್ದೇಶ ಮತ್ತು ಕಾರಣಗಳ ವಿವರಣೆ** ೧೧

**ವಿಭಾಗಗಳು**

೧. ಸಂಕ್ಷಿಪ್ತ ಶಿರೋನಾಮೆ, ವ್ಯಾಪ್ತಿ ಮತ್ತು ಪ್ರಾರಂಭ ೧೨

೨. ಪದ ವಿವರಣೆ ೧೩

ಎ) ಕೌನ್ಸಿಲ್ ಅಥವಾ ಮೆಡಿಕಲ್ ಕೌನ್ಸಿಲ್

ಬಿ) ಪ್ರಕಟಣೆ

ಸಿ) ನೊಂದಾಯಿತ ವೃತ್ತಿಪರ ವೈದ್ಯ

ಡಿ) ನಿಬಂಧನೆ

ಇ) ನಿಯಮ

೩. ಕೌನ್ಸಿಲ್ ಸ್ಥಾಪನೆ, ಸೇರ್ಪಡೆ ಮತ್ತು ರಚನೆ ೧೩

೪. ಕರ್ತವ್ಯ ಲೋಪವಾದ ಚುನಾವಣೆಯಲ್ಲಿ ಸದಸ್ಯರ ನಾಮಕರಣ ೧೪

೫. ಅಧಿಕಾರ ಅವಧಿ ೧೫

೬. ಸ್ಥಳ ತೆರವಾಗಿರುವುದು ೧೫

೭. ಅನರ್ಹತೆ ೧೫

೮. ಸದಸ್ಯನಾಗಿ ಮುಂದುವರೆಯುವುದಕ್ಕೆ ಅಸಮರ್ಥತೆ ೧೬

೯. ಸಭೆಯ ಸಮಯ ಮತ್ತು ಸ್ಥಳ ಹಾಗೂ ಕೌನ್ಸಿಲ್ ಸಭೆಯ ಕಾರ್ಯವಿಧಾನ ೧೬

೧೦. ನಡವಳಿಗಳ ಮಾನ್ಯತೆ ೧೭
೧೧. ರಿಜಿಸ್ಟ್ರಾರ್ ಮತ್ತು ಅಧಿಕಾರಿಗಳು ೧೭
೧೨. ದಾಖಲೆ ೧೮
೧೩. ವೃತ್ತಿಪರ ವೈದ್ಯರ ನೋಂದಾವಣೆ ೧೮
೧೪. ರಿಜಿಸ್ಟ್ರಾರರ ನಿರ್ಣಯದ ವಿರುದ್ಧ ಮನವಿ ೧೯
೧೫. ದುರ್ವರ್ತನೆಗಾಗಿ ವೃತ್ತಿಪರ ವೈದ್ಯನ ಹೆಸರನ್ನು ರಿಜಿಸ್ಟರ್‌ನಿಂದ ತೆಗೆದು ಹಾಕುವುದು ೧೯
೧೬. ಮೆಡಿಕಲ್ ಕೌನ್ಸಿಲ್ ಸಿವಿಲ್ ಕೋರ್ಟಿನ ಅಧಿಕಾರ ಹೊಂದಿರುವುದು ೨೦
೧೭. ತನಿಖೆಗಳನ್ನು ನ್ಯಾಯಾಂಗ ನಡವಳಿಯೆಂದು ಪರಿಗಣನೆ ೨೧
೧೮. ಮೆಡಿಕಲ್ ಕೌನ್ಸಿಲ್‌ಗೆ ಮೌಲ್ಯಮಾಪಕರು ೨೧
೧೯. ನೋಂದಣಿ ನವೀಕರಣಗೊಳಿಸುವುದು ೨೨
೨೦. ವಿದ್ಯಾರ್ಹತೆಯ ವೃತ್ತಿಪರ ವೈದ್ಯರ ಪ್ರಮಾಣ ಪತ್ರ ೨೨
೨೧. ಕೆಲವೊಂದು ನೇಮಕಾತಿಗಳನ್ನು ಹೊಂದಿರಬಲ್ಲ ವ್ಯಕ್ತಿಗಳು ೨೩
೨೨. ಮರಣದ ಪ್ರಕಟಣೆ ೨೩
೨೩. ಪಂಚನಾಮೆ, ಇತರ ಕಡೆ ಕೆಲಸ ಮಾಡುವುದಕ್ಕೆ ವಿನಾಯಿತಿ ೨೩
೨೪. ಸದಸ್ಯರಿಗೆ ಕೊಡಬೇಕಾದ ಶುಲ್ಕ ೨೩
೨೫. ಶುಲ್ಕದ ವಿಲೇವಾರಿ ೨೪
೨೬. ವೃತ್ತಿಪರ ವೈದ್ಯರ ಪಟ್ಟಿಯ ಪ್ರಕಟಣೆ ೨೪
೨೭. ಹಂಚಲ್ಪಡುವ ಮತಗಳಿಂದ ಚುನಾವಣೆ ಆಯೋಜನೆ ೨೪
೨೮. ದಂಡ ೨೫
೨೯. ಒಳ್ಳೆಯ ನಂಬುಗೆಯಿಂದ ತೆಗೆದುಕೊಂಡ ಕಾರ್ಯದ ರಕ್ಷಣೆ ೨೫
೩೦. ಸಿವಿಲ್ ನ್ಯಾಯಾಲಯಗಳ ಕಾರ್ಯವ್ಯಾಪ್ತಿ ೨೫

೩೧. ನಿಯಮಗಳನ್ನು ರೂಪಿಸಲು ಅಧಿಕಾರ ೨೫
೩೨. ನಿಬಂಧನೆಗಳು ೨೬
೩೩. ನಿಯಂತ್ರಣ ೨೬
೩೪. ರದ್ದು ಮಾಡುವುದು ಮತ್ತು ಸಂಚಯ ೨೭
೩೫. ತೊಂದರೆಗಳನ್ನು ತೆಗೆದು ಹಾಕುವ ಅಧಿಕಾರ ೨೮

# ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧
## (ಕರ್ನಾಟಕ ಅಧಿನಿಯಮ ಸಂಖ್ಯೆ. ೧೯೬೧ರ ೩೪)

### ಕರ್ನಾಟಕ ರಾಜ್ಯ ಪತ್ರ ದಿನಾಂಕ : ೧೪.೦೪.೧೯೬೦ರ

### ಕರ್ನಾಟಕ ಅಧಿನಿಯಮ ಸಂಖ್ಯೆ ೩೪ರ ಉದ್ದೇಶ ಮತ್ತು ಕಾರಣಗಳ ವಿವರಣೆ

ಆಧುನಿಕ ವೈದ್ಯಕೀಯ ವ್ಯವಸ್ಥೆಗೆ ಸಂಬಂಧಿಸಿದ ವೈದ್ಯರ ನೊಂದಣಿ ಮಾಡುವ ಪ್ರಕ್ರಿಯೆಗೆ ರಾಜ್ಯದ ಅನೇಕ ಕಡೆ ಬೇರೆ ಬೇರೆ ಕಾನೂನುಗಳು ಪ್ರಚಲಿತದಲ್ಲಿವೆ. ಈ ಕಾನೂನುಗಳನ್ನು ಅನುಸರಿಸುವುದರ ಪರಿಣಾಮವಾಗಿ ಮೈಸೂರು ಮೆಡಿಕಲ್ ನೊಂದಣಿ ಅಧಿನಿಯಮ, ೧೯೩೧ರ ಪ್ರಕಾರ ಮೈಸೂರು ಮೆಡಿಕಲ್ ಕೌನ್ಸಿಲ್ ರಚಿಸಲ್ಪಟ್ಟಿದೆ. ಅದರನ್ವಯ ಅದು ಇಡೀ ರಾಜ್ಯದಲ್ಲಿ ಮೆಡಿಕಲ್ ಕೌನ್ಸಿಲ್‌ನ ಕಾರ್ಯವನ್ನು ಕೈಕೊಳ್ಳಲು ಅಧಿಕಾರ ಹೊಂದಿದೆ. ಅದು ಅನೇಕ ಕಾನೂನು ಕ್ರಿಯೆಗಳಿಗೆ ಅನ್ವಯಿಸುತ್ತದೆ. ಅದರಂತೆ ಪ್ರತಿಯೊಂದು ಕಾನೂನಿನ ಪ್ರಕಾರ ವೈದ್ಯಕೀಯ ದಾಖಲೆಗಳು ಬೇರೆ ಬೇರೆ ದಾಖಲೆ ಪುಸ್ತಕಗಳನ್ನು ಬೇರೆ ಬೇರೆಯಾಗಿ ಇರಿಸಲಾಗಿದೆ. ಹೀಗೆ ಒಂದು ಮೆಡಿಕಲ್ ಕೌನ್ಸಿಲ್ ಇದ್ದರೂ, ಅನೇಕ ದಾಖಲೆ ಪುಸ್ತಕಗಳಿವೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಧಿನಿಯಮ, ೧೯೫೬ರ ಪ್ರಕಾರ (೧೯೫೬ರ ಕೇಂದ್ರ ಅಧಿನಿಯಮ ೧೦೨) ರಾಜ್ಯದ ವೈದ್ಯಕೀಯ ದಾಖಲೆ ಪುಸ್ತಕದಲ್ಲಿ ಸೇರ್ಪಡೆಯಾದ ಸದಸ್ಯರಿಂದ ಒಬ್ಬ ಸದಸ್ಯನನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಕ್ಕೆ ಚುನಾಯಿಸಬೇಕು. ಹೀಗಾಗಿ ಇಡೀ ರಾಜ್ಯಕ್ಕೆ ಒಂದು ಮೆಡಿಕಲ್ ದಾಖಲೆ ಪುಸ್ತಕ (ರಿಜಿಸ್ಟರ್) ಇರಬೇಕಾದುದು ಆವಶ್ಯಕವಾಗಿದೆ. ಈ ಸನ್ನಿವೇಶದ ಹಿನ್ನಲೆಯಲ್ಲಿ, ರಾಜ್ಯಾದ್ಯಂತ ಆಧುನಿಕ ವೈದ್ಯಕೀಯ ವ್ಯವಸ್ಥೆಯಲ್ಲಿ ವೃತ್ತಿ ಕೈ ಕೊಂಡಿರುವ ವೈದ್ಯರ ನೊಂದಣಿಗೆ ಒಂದೇ ತೆರನಾದ ಕಾನೂನನ್ನು ಹೊಂದಿರಬೇಕೆಂದು ಪ್ರಸ್ತಾಪಿಸಲಾಗಿದೆ.

(೧೯೬೧ರ ಡಿಸೆಂಬರ್ ಮೂವತ್ತನೇ ತಾರೀಖು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿದ್ದಿತು. ಅದಕ್ಕೆ ರಾಷ್ಟ್ರಾಧ್ಯಕ್ಷರಿಂದ ೧೯೬೧ ಡಿಶೆಂಬರ್ ಇಪ್ಪತ್ತೈದರಂದು ಒಪ್ಪಿಗೆ ಲಭಿಸಿತು.)

ಇದು ಕರ್ನಾಟಕ ರಾಜ್ಯದಲ್ಲಿ ಅಧುನಿಕ ವೈದ್ಯ ವಿಜ್ಞಾನ ವೃತ್ತಿ ಕೈ ಕೊಂಡಿರುವ ವೈದ್ಯರ ನೊಂದಣಿಗೆ ಸಂಬಂಧಿಸಿದಂತೆ ಒಗ್ಗೂಡಿಸಿದ ಅಧಿನಿಯಮ ನಿಬಂಧನೆ.

ಕರ್ನಾಟಕ ರಾಜ್ಯದಲ್ಲಿ ಪಶು ವೈದ್ಯ ಮತ್ತು ಶಸ್ತ್ರ ವೈದ್ಯರನ್ನು ಹೊರತುಪಡಿಸಿ, ಆಧುನಿಕ ವೈದ್ಯ ವಿಜ್ಞಾನ ವೃತ್ತಿಪರ ವೈದ್ಯರ ನೊಂದಣಿಗೆ ಸಂಬಂಧಿಸಿದಂತೆ ಕಾನೂನನ್ನು ಒಗ್ಗೂಡಿಸುವುದು ಸಮಯೋಚಿತವಾಗಿದೆ.

ಅದು ಭಾರತ ಗಣರಾಜ್ಯದ ಹನ್ನೆರಡನೇ ವರುಷ ಕರ್ನಾಟಕ ರಾಜ್ಯದ ವಿಧಾನ ಮಂಡಲದಲ್ಲಿ ಈ ಕೆಳಕಂಡಂತೆ ಕಾನೂನು ಮಾಡಿದೆ:

**೧. ಸಂಕ್ಷಿಪ್ತ ಶಿರೋನಾಮೆ, ವ್ಯಾಪ್ತಿ ಮತ್ತು ಪ್ರಾರಂಭ–**

೧. ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ನೊಂದಣಿ ಅಧಿನಿಯಮ, ೧೯೬೧ ಎಂದು ಕರೆಯಬೇಕು.

೨. ಅದು ಇಡೀ ಕರ್ನಾಟಕ ರಾಜ್ಯದಾದ್ಯಂತ ವ್ಯಾಪ್ತಿ ಹೊಂದಿದೆ.

೩. ಅದು ಕರ್ನಾಟಕ ಸರಕಾರ ಪ್ರಕಟಣೆ ಮಾಡಿದ ದಿನದಿಂದ ಕಾರ್ಯರೂಪಕ್ಕೆ ಬರುತ್ತದೆ.

## ಪ್ರಕಟಣೆ

ಸಂಖ್ಯೆ. ಪಿಎಲ್‌ಎಂ ೨೫೧ ಎಂಡಿಎ ೬೧, ದಿನಾಂಕ ೧೯.೦೮.೧೯೬೩

ಕರ್ನಾಟಕ ರಾಜ್ಯ ಪತ್ರ ದಿನಾಂಕ ೫.೦೯.೧೯೬೩

ಕರ್ನಾಟಕ ವೈದ್ಯಕೀಯ ನೊಂದಣಿ ಅಧಿನಿಯಮ ೧೯೬೧ (ಕರ್ನಾಟಕ ೧೯೬೧ರ ೩೪ನೇ ಅಧಿನಿಯಮ)ರ ವಿಭಾಗ ೧ರ ಉಪವಿಭಾಗ(೩)ಕ್ಕೆ ಕೊಡಮಾಡಿರುವ ಅಧಿಕಾರದನ್ವಯ ಕರ್ನಾಟಕ ಸರಕಾರವು ಕೆಳಕಂಡಂತೆ ಮೇಲ್ಕಂಡ ಅಧಿನಿಯಮ ಕಾರ್ಯರೂಪಕ್ಕೆ ಬರುವಂತೆ ದಿನಾಂಕ ೨೨ ಆಗಸ್ಟ್ ೧೯೬೩ ರಂದು ನಾಮ ನಿರ್ದೇಶನ ಮಾಡಿರುತ್ತದೆ.

೨. **ಪದ ವಿವರಣೆ:** ಬೇರೊಂದು ಸಂದರ್ಭಕ್ಕೆ ಅನ್ವಯಿಸದಿದ್ದರೆ ಈ ಅಧಿನಿಯಮದಲ್ಲಿ

ಎ) "ಕೌನ್ಸಿಲ್" ಅಥವಾ "ಮೆಡಿಕಲ್ ಕೌನ್ಸಿಲ್ ಎಂದರೆ ಅಧಿನಿಯದ ಅನ್ವಯ ಸ್ಥಾಪಿತಗೊಂಡ ಕರ್ನಾಟಕ ಮೆಡಿಕಲ್ ಕೌನ್ಸಿಲ್.

ಬಿ) "ಪ್ರಕಟಣೆ" ಎಂದರೆ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟ ಗೊಂಡಿರುವ ಪ್ರಕಟಣೆ

ಸಿ) "ನೋಂದಾಯಿತ ವೃತ್ತಿಪರ ವೈದ್ಯ" ಎಂದರೆ ಅಧಿನಿಯಮಕ್ಕೆ ಅನುಗುಣವಾಗಿ ನೋಂದಾಯಿತನಾದ ವ್ಯಕ್ತಿ

ಡಿ) "ನಿಬಂಧನೆ" ಎಂದರೆ ವಿಭಾಗ ೩ರ ಅಡಿಯಲ್ಲಿ ಮಾಡಿದ ನಿಬಂಧನೆಗಳು

ಇ) "ನಿಯಮ"ಎಂದರೆ ವಿಭಾಗ ೩೧ರ ಅಡಿಯಲ್ಲಿ ರೂಪಿಸಿದ ನಿಯಮಗಳು

**೩. ಕೌನ್ಸಿಲ್ ಸ್ಥಾಪನೆ, ಸೇರ್ಪಡೆ ಮತ್ತು ರಚನೆ :**

೧) ಈ ಅಧಿನಿಯಮ ಕೊಡ ಮಾಡಿದ ಅಧಿಕಾರವನ್ನು ಬಳಸಿಕೊಂಡು 'ಕರ್ನಾಟಕ ಮೆಡಿಕಲ್ ಕೌನ್ಸಿಲ್' ಎಂಬ ಹೆಸರಿನಿಂದ ಕರೆಯಲ್ಪಡುವ ಕೌನ್ಸಿಲ್‌ನ್ನು ಪ್ರಕಟಣೆಯ ಮೂಲಕ ರಾಜ್ಯ ಸರಕಾರವು ಸ್ಥಾಪಿಸಿದೆ. ಅಂತಹ ಕೌನ್ಸಿಲ್ ನಿರಂತರ ಪರಂಪರಾಗತವಾಗಿ ಕಾರ್ಯ ನಿರ್ವಹಿಸುವ ಸಂಸ್ಥೆ ಯಾಗಿರುತ್ತದೆ. ಅದಕ್ಕೆ ಅಧಿಕಾರ ಹೊಂದಿದ ಸಾಮಾನ್ಯ ಮೊಹರು ಇರುತ್ತದೆ. ಅಧಿನಿಯಮ ಕೊಡಮಾಡಿದ ಕಟ್ಟಳೆಯ ಪ್ರಕಾರ ಅದು ಆಸ್ತಿಯನ್ನು ಪಡೆದುಕೊಳ್ಳಬಹುದು; ಕಾಯ್ದಿರಿಸಿ ಕೊಳ್ಳಬಹುದು; ಮಾರಾಟ ಮಾಡಬಹುದು ಮತ್ತು ಒಡಂಬಡಿಕೆ ಮಾಡಿಕೊಳ್ಳ ಬಹುದು. ಅದೇ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೊಳಪಡ ಬಹುದು.

೨) ಕೌನ್ಸಿಲ್ ಕೆಳಕಂಡಂತೆ ಹದಿನೈದು ಜನ ಸದಸ್ಯರನ್ನು ಹೊಂದಿರು ತ್ತದೆ.

ಎ) ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾದ ವೃತ್ತಿಪರ ವೈದ್ಯರು ಆರು ಜನ ಸದಸ್ಯರನ್ನು ತಮ್ಮೊಳಗಿನಿಂದಲೇ ಆಯ್ಕೆ ಮಾಡುತ್ತಾರೆ.

ಬಿ) ಕರ್ನಾಟಕ ರಾಜ್ಯದಲ್ಲಿ ಆ ಕಾಲದಲ್ಲಿ ಪ್ರಚಲಿತದಲ್ಲಿರುವ

ಕಾನೂನಿನ್ವಯ ಸ್ಥಾಪಿತಗೊಂಡಿರುವ ವಿಶ್ವವಿದ್ಯಾಲಯಗಳ ವೈದ್ಯಕೀಯ ಶಿಕ್ಷಕ ವರ್ಗದ ಸದಸ್ಯರು ತಮ್ಮೊಳಗಿನಿಂದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡುವರು.

ಸಿ) ಕರ್ನಾಟಕ ರಾಜ್ಯದ ಮೆಡಿಕಲ್ ಕಾಲೇಜುಗಳಲ್ಲಿರುವ, ಈ ಅಧಿನಿಯಮದ ಅಧೀನ ನೋಂದಾಯಿತ ವೃತ್ತಿ ವೈದ್ಯರಾದ, ಶಿಕ್ಷಕ ವೃಂದ, ತಮ್ಮೊಳಗಿನಿಂದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡುವರು.

ಡಿ) ರಾಜ್ಯ ಸರಕಾರ ಐದು ಜನ ಸದಸ್ಯರನ್ನು ನಾಮ ನಿರ್ದೇಶನ ಮಾಡುತ್ತಾರೆ. ಅವರಲ್ಲಿ ಒಬ್ಬರಿಗಿಂತ ಹೆಚ್ಚಿಲ್ಲದಿರುವಂತೆ ಈ ಅಧಿನಿಯಮದ ಅಧೀನದಲ್ಲಿ ನೋಂದಾಯಿತರಾಗಿಲ್ಲದಿರುವವರಾಗಿರಬೇಕು

೩) ಉಪವಿಭಾಗ (೨)ರ ಕಲಂ (ಡಿ)ಅಡಿಯಲ್ಲಿ ನಾಮಕರಣ ಮಾಡುವಾಗ, ರಾಜ್ಯ ಸರಕಾರವು ಸ್ತ್ರೀಯರ ಮತ್ತು ಇತರ ವೃತ್ತಿ ವೈದ್ಯರ ಗುಂಪುಗಳ ಹಕ್ಕು ಕೋರಿಕೆಯ ಬಗ್ಗೆ ಗಮನ ಕೊಡಬೇಕು. ಅವರ ಪ್ರತಿನಿಧಿಗಳು ಕಲಂ(ಎ) (ಬಿ) ಮತ್ತು (ಸಿ) ಅಡಿಯಲ್ಲಿ ಆಯ್ಕೆಯಾಗಿಲ್ಲವೆಂಬುದನ್ನು ಖಚಿತ ಮಾಡಿಕೊಳ್ಳಬೇಕು.

೪) ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸದಸ್ಯರು ತಮ್ಮೊಳಗಿನವರಿಂದ ಆಯ್ಕೆಮಾಡುವರು.

೫) ಅಧಿನಿಯಮ ಕೊಡಮಾಡಿದ ಕರಾರಿನ ಪ್ರಕಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ಇತರ ಸದಸ್ಯರ ಚುನಾವಣೆಯನ್ನು ನಿಯಮಗಳು ಸೂಚಿಸಿದ ಪ್ರಕಾರ ನಿಗದಿ ಪಡಿಸಿದ ಸಮಯ ಮತ್ತು ಸ್ಥಳದಲ್ಲಿ ನಡೆಸಲಾಗುವುದು.

**೪. ಕರ್ತವ್ಯ ಲೋಪವಾದ ಚುನಾವಣೆಯಲ್ಲಿ ಸದಸ್ಯರ ನಾಮಕರಣ:**

ಸೆಕ್ಷನ್ ೩ರಲ್ಲಿ ಉಲ್ಲೇಖಿಸಿರುವ ಯಾವುದೇ ಚುನಾವಣೆ ನಿಯಮಗಳು ಸೂಚಿಸಿರುವಂತೆ ನಿಗದಿಯಾದ ದಿನಾಂಕ ಯಾವುದೇ ವ್ಯಕ್ತಿಯನ್ನು ಕೌನ್ಸಿಲ್‌ನ ಸದಸ್ಯನೆಂದು ಆಯ್ಕೆ ಮಾಡಲಾಗದಿದ್ದರೆ, ರಾಜ್ಯ ಸರಕಾರವು ಪ್ರಕಟಣೆಯ ಮೂಲಕ, ಖಾಲಿ ಇರುವ ಸ್ಥಳಕ್ಕೆ ಚುನಾವಣೆಗೆ ಅರ್ಹನಾದ ವ್ಯಕ್ತಿಯನ್ನು ನಾಮ ನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮ ನಿರ್ದೇಶನಗೊಂಡ ವ್ಯಕ್ತಿ, ಆತ ಮೇಲ್ಕಂಡಂತೆ ಮತದಾರರಿಂದ ಕೌನ್ಸಿಲ್‌ನಲ್ಲಿ ಆಯ್ಕೆಯಾಗಿರುವ ರೀತಿಯಲ್ಲಿಯೇ ಸದಸ್ಯನೆಂದು ಪರಿಗಣಿಸಲಾಗುತ್ತದೆ.

**೫. ಅಧಿಕಾರ ಅವಧಿ :**

ಕೌನ್ಸಿಲ್‌ನ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರು ಈ ಅಧಿನಿಯಮದ ಸೂಚನೆಯ ಪ್ರಕಾರ, ಅವರು ನಾಮನಿರ್ದೇಶನಗೊಂಡ ಅಥವಾ ಆಯ್ಕೆಯಾದ ದಿನದಿಂದ ಐದು ವರುಷಗಳ ಕಾಲದ ಒಂದು ಅವಧಿಗೆ ಇಲ್ಲವೆ ಅವರ ಉತ್ತರಾಧಿಕಾರಿಗಳನ್ನು ನಾಮಕರಣ ಮಾಡುವ ಅಥವಾ ಆಯ್ಕೆ ಮಾಡುವ ಯಾವುದು ಮೊದಲೋ ಅಷ್ಟು ಕಾಲ ಇರುತ್ತಾರೆ ಮತ್ತು ಅವರು ಪುನರ್ನಾಮಕರಣ ಅಥವಾ ಪುನಃ ಚುನಾವಣೆಗೆ ಅರ್ಹರಾಗಿರುತ್ತಾರೆ.

**೬. ಸ್ಥಳ ತೆರವಾಗಿರುವುದು:**

ಮೆಡಿಕಲ್ ಕೌನ್ಸಿಲ್‌ನ ಯಾವುದೇ ಸದಸ್ಯನ ಸಾವು, ರಾಜೀನಾಮೆ ಅಥವಾ ಸ್ಥಳ ತೆರವಾಗಿದ್ದ ಸನ್ನಿವೇಶದಲ್ಲಿ ಮೆಡಿಕಲ್ ಕೌನ್ಸಿಲ್ ನಾಮಕರಣ ಅಥವಾ ಚುನಾವಣೆ ಮೂಲಕ ಯಾವುದು ಸಾಧ್ಯವೋ ಆ ರೀತಿ ವಿಭಾಗ(೩)ರ ಉಪವಿಭಾಗ(೨) ಕೊಡಮಾಡಿರುವ ಕರಾರಿನ ಪ್ರಕಾರ ಮಾಡಲಾಗುವುದು. ಅಂತಹ ವ್ಯಕ್ತಿ ಯಾರ ಸ್ಥಳಕ್ಕೆ ನಾಮ ನಿರ್ದೇಶನ ಅಥವಾ ಚುನಾವಣೆಯ ಮೂಲಕ ನಿಯೋಜಿಸಲ್ಪಟ್ಟಿದ್ದಾನೆಯೇ ಆ ಸದಸ್ಯನ ಉಳಿದ ಕಾಲಾವಧಿಗೆ ಮಾತ್ರ ಅಧಿಕಾರ ಹೊಂದಿರುತ್ತಾನೆ.

**೭. ಅನರ್ಹತೆ:**

ಮೆಡಿಕಲ್ ಕೌನ್ಸಿಲ್ ಸದಸ್ಯನಾಗಿ ಆರಿಸಲ್ಪಟ್ಟ ವ್ಯಕ್ತಿಯು ಅನರ್ಹ ಗೊಳ್ಳಬಹುದು.

ಎ) ಆತ ಅನೈತಿಕ ಚಟುವಟಿಕೆಗಳಲ್ಲಿ ಭಾಗಿಯಾಗಿ ಮಾಡಿದ ಅಪರಾಧಕ್ಕೆ ಕ್ರಿಮಿನಲ್ ಕೋರ್ಟಿನಿಂದ ಶಿಕ್ಷೆಗೊಳಗಾಗಿದ್ದು, ಮೂರು ತಿಂಗಳಿಗಿಂತಲೂ ಹೆಚ್ಚು ಕಾಲ ಸೆರೆಮನೆ ವಾಸಕ್ಕೊಳಗಾಗಿದ್ದರೆ ಮತ್ತು ಅಂತಹ ಶಿಕ್ಷೆ ನಂತರದ ಕಾಲದಲ್ಲಿ ಹಿಂತೆಗೆಯಲ್ಪಡದಿದ್ದಲ್ಲಿ ಅಥವಾ ವಜಾಗೊಳಿಸಲ್ಪಡ ದಿದ್ದಲ್ಲಿ ಇಲ್ಲವೆ ಖುಲಾಸೆಯಾಗದಿದ್ದಲ್ಲಿ, ಅಂತಹ ಶಿಕ್ಷೆಯಿಂದ ಉದ್ಭವಿಸಿದ ಅನರ್ಹತೆಯಿಂದ ಬಿಡುಗಡೆಯಾದುದರ ಬಗ್ಗೆ ಆತ ಆದೇಶ ಹೊಂದಿದ್ದರೆ ರಾಜ್ಯ ಸರಕಾರಕ್ಕೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವಿದೆ.

ಬಿ) ಆತ ಬಿಡುಗಡೆಯಾಗದೆ ದಿವಾಳಿಯಾಗಿದ್ದರೆ

ಸಿ) ಆತನ ಮನಸ್ಥಿತಿ ಸರಿಯಾಗಿಲ್ಲದಿರುವುದನ್ನು ಅರ್ಹ ನ್ಯಾಯಲಯ ದೃಢಪಡಿಸಿದ್ದರೆ

ಡಿ) ಆತ ಕೌನ್ಸಿಲ್‌ನ ಪೂರ್ಣಕಾಲದ ಅಧಿಕಾರಿ ಅಥವಾ ಸೇವಕನಾಗಿದ್ದರೆ

**೮. ಸದಸ್ಯನಾಗಿ ಮುಂದುವರೆಯುವುದಕ್ಕೆ ಅಸಮರ್ಥತೆ :**

ಯಾವುದೇ ಸದಸ್ಯ ತಾನು ನಾಮನಿರ್ದೇಶನಗೊಂಡ ಅಥವಾ ಆಯ್ಕೆಯಾದ ಕಾಲಾವಧಿಯಲ್ಲಿ

ಎ) ಕೌನ್ಸಿಲ್‌ನ ಒಂದರ ನಂತರ ಮತ್ತೊಂದರಂತೆ ಕೌನ್ಸಿಲ್‌ನ ಮೂರು ಸಾಧಾರಣ ಸಭೆಗಳಿಗೆ, ಮೆಡಿಕಲ್ ಕೌನ್ಸಿಲ್‌ನ ಅಭಿಪ್ರಾಯದಲ್ಲಿ ಸಾಕೆನಿಸಿದರೆ ಯಾವುದೇ ವಿನಾಯತಿಯಿಲ್ಲದೆ ಅನುಪಸ್ಥಿತನಾಗಿರುವುದು ಅಥವಾ

ಬ) ವಿಭಾಗ ೩ರ ಉಪವಿಭಾಗ(೨)ರ ಕಲಂ(ಬಿ)ಯ ಅಡಿಯಲ್ಲಿ ಸದಸ್ಯ ಸಂಬಂಧಿಸಿದ ವಿಶ್ವವಿದ್ಯಾಲಯದ ಮೆಡಿಕಲ್ ಫ್ಯಾಕಲ್ಟಿಯ ಸದಸ್ಯನಾಗಿ ಮುಂದುವರೆಯದಿದ್ದರೆ ಅಥವಾ

ಸಿ) ವಿಭಾಗ ೩ ಉಪವಿಭಾಗ(೨)ರ ಕಲಂ(ಎ) ಅಥವಾ (ಬಿ) ಅಡಿಯಲ್ಲಿ ಆಯ್ಕೆಯಾದ ಸದಸ್ಯ ನೋಂದಾಯಿತ ವೃತ್ತಿ ವೈದ್ಯನಾಗಿ ಮುಂದುವರೆಯದಿದ್ದರೆ ಅಥವಾ

ಡಿ) ವಿಭಾಗ ೭ರಲ್ಲಿ ನಮೂದಿಸಿದಂತೆ ಯಾವುದೇ ಅನರ್ಹತೆಗೆ ಒಳಪಟ್ಟಿದ್ದಲ್ಲಿ

ರಾಜ್ಯ ಸರಕಾರವು ಆತನ ಸ್ಥಾನ ಖಾಲಿಯಗಿದೆ ಎಂದು ಸಾರುತ್ತದೆ.

**೯. ಸಭೆಯ ಸಮಯ ಮತ್ತು ಸ್ಥಳ ಹಾಗೂ ಕೌನ್ಸಿಲ್ ಸಭೆಯ ಕಾರ್ಯ ವಿಧಾನ:**

ಮೆಡಿಕಲ್ ಕೌನ್ಸಿಲ್, ತಾನು ಆಯೋಜಿಸುವ ಸಭೆಯ ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಮತ್ತು ಅದನ್ನು ಕರೆಯುವ ವಿಧಾನದ ಬಗ್ಗೆ ಅಗತ್ಯವೆನಿಸಿದ ನಿಯಮಾವಳಿಗಳನ್ನು ರೂಪಿಸಬೇಕು. ಮೆಡಿಕಲ್ ಕೌನ್ಸಿಲ್‌ನ ಸಭೆಗಳನ್ನು ಕರೆಯಲು ಯಾವುದೇ ನಿಯಮಗಳು ಇಲ್ಲದಿದ್ದಲ್ಲಿ, ಅದರ

ಅಧ್ಯಕ್ಷ ಸಭೆಯ ಸಮಯ ಮತ್ತು ಸ್ಥಳವನ್ನು ನಿಗದಿಪಡಿಸಿ ಪ್ರತಿಯೊಬ್ಬ ಸದಸ್ಯನಿಗೂ ಪತ್ರಮುಖೇನ ಆಹ್ವಾನಿಸಲ್ಪಡುತ್ತಾರೆ. ಶಾಸನ ಸಮ್ಮತ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ, ಉಪಾಧ್ಯಕ್ಷರು ಮತ್ತು ಇಬ್ಬರ ಅನುಪಸ್ಥಿತಿಯಲ್ಲಿ, ಹಾಜರಿರುವ ಸದಸ್ಯರ ಪೈಕಿ ಒಬ್ಬರು ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಾರೆ.

ಮೆಡಿಕಲ್ ಕೌನ್ಸಿಲ್‌ನ ಎಲ್ಲಾ ಅಧಿನಿಯಮಗಳು ಆ ಸಭೆಯಲ್ಲಿ ಹಾಜರಿದ್ದ ಸದಸ್ಯರು ನೀಡಿದ ಅಧಿಕ ಮತದಿಂದ ನಿರ್ಧರಿಸಲ್ಪಡುತ್ತವೆ. ಹಾಗೆ ಮಾಡುವಾಗ ಹಾಜರಿರುವವರ ಒಟ್ಟು ಸಂಖ್ಯೆ ಎಂಟಕ್ಕಿಂತ ಕಡಿಮೆಯಿರಬಾರದು. ಅಂತಹ ಎಲ್ಲ ಸಭೆಗಳಲ್ಲಿನ ಸಮಯದಲ್ಲಿ ಅಧ್ಯಕ್ಷನಾದ ವ್ಯಕ್ತಿಗೆ, ಮೆಡಿಕಲ್ ಕೌನ್ಸಿಲ್‌ನ ಸದಸ್ಯನಾಗಿ ತಾನು ಹೊಂದಿರುವ ಮತದೊಡನೆ, ಒಂದು ವೇಳೆ ಸಮನಾದ ಮತಗಳು ದೊರಕಿದ್ದಲ್ಲಿ ನಿರ್ಣಾಯಕ ಮತ ನೀಡುವ ಅಧಿಕಾರ ಹೊಂದಿರುತ್ತಾನೆ.

**೧೦. ನಡವಳಿಗಳ ಮಾನ್ಯತೆ:**

೧. ಮೆಡಿಕಲ್ ಕೌನ್ಸಿಲ್‌ನ ಸದಸ್ಯನಾಗಿ ಅಥವಾ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಇಲ್ಲವೆ ಸಭೆಯ ಅಧ್ಯಕ್ಷ ಹುದ್ದೆ ನಿರ್ವಹಿಸುವ ಯಾವುದೇ ವ್ಯಕ್ತಿ ಚುನಾವಣೆ ಅಥವಾ ನಾಮಕರಣದಲ್ಲಿ ಅನರ್ಹತೆ ಅಥವಾ ನ್ಯೂನ್ಯತೆ ಹೊಂದಿದ್ದು ಮೆಡಿಕಲ್ ಕೌನ್ಸಿಲ್‌ನಲ್ಲಿ ಅಂತಹ ವ್ಯಕ್ತಿ ಭಾಗವಹಿಸಿದ್ದಲ್ಲಿ ಮೆಡಿಕಲ್ ಕೌನ್ಸಿಲ್‌ನ ಯಾವುದೇ ಕಾರ್ಯ ಅಥವಾ ನಡವಳಿಕೆಯನ್ನು ಹಾಳುಮಾಡುತ್ತದೆ ಎಂದು ಪರಿಗಣಿಸಲಾಗುವುದು.

೨. ಕೌನ್ಸಿಲ್ ಕೈಗೊಂಡ ಕಾರ್ಯದಲ್ಲಿ ಕೌನ್ಸಿಲ್‌ನ ಯಾವುದೇ ಹುದ್ದೆ ಖಾಲಿಯಿದೆಯೆಂದು ಅಥವಾ ಅದರ ಸಂವಿಧಾನದಲ್ಲಿ ನ್ಯೂನ್ಯತೆಯಿದೆ ಎಂಬ ಕಾರಣದಿಂದ ಪ್ರಶ್ನಿಸಲಾಗದು.

**೧೧. ರಿಜಿಸ್ಟ್ರಾರ್ ಮತ್ತು ಅಧಿಕಾರಿಗಳು :**

೧. ಮೆಡಿಕಲ್ ಕೌನ್ಸಿಲ್ ಒಬ್ಬ ರಿಜಿಸ್ಟ್ರಾರ್‌ನ್ನು ನೇಮಕಮಾಡುತ್ತದೆ. ಮತ್ತು ಕಾಲಕಾಲಕ್ಕೆ ರಜೆಯನ್ನು ನೀಡಿ ಅವರ ಸ್ಥಾನದಲ್ಲಿ ಮತ್ತೊಬ್ಬರು ಕಾರ್ಯ ನಿರ್ವಹಿಸಲು ನಿಯೋಜಿಸಬಹುದು. ಮೆಡಿಕಲ್ ಕೌನ್ಸಿಲ್ ರಿಜಿಸ್ಟ್ರಾರ್‌ರನ್ನು ನಿಯೋಜಿಸುವ ಅಥವಾ ತೆಗೆದು ಹಾಕುವ ಅಥವಾ ರಾಜ್ಯ ಸರಕಾರ ಕಾಲ ಕಾಲಕ್ಕೆ ನೀಡುವ ನಿರ್ದೇಶನಕ್ಕನುಗುಣವಾಗಿ ಕಾಲಾವಧಿಯನ್ನು ದಾಟುವ ಅಥವಾ ದಾಟಬಹುದಾದ ಸಂದರ್ಭದಲ್ಲಿ ರಿಜಿಸ್ಟ್ರಾರ್‌ರನ್ನು ಕೆಲಸ

ನಿರ್ವಹಿಸಲು ನಿಯೋಜಿಸುವ ಕಾರ್ಯ ರಾಜ್ಯ ಸರಕಾರದ ಹಿಂದೆ ನೀಡಿದ ಒಪ್ಪಿಗೆಗೆ ಒಳಪಡುತ್ತದೆ. ರಿಜಿಸ್ಟ್ರಾರ್ ಆಗಿ ಕಾರ್ಯನಿರ್ವಹಿಸಲು ನಿಯೋಜಿಸಿದ ಯಾವುದೇ ವ್ಯಕ್ತಿಗೆ ಮೆಡಿಕಲ್ ಕೌನ್ಸಿಲ್ ಸಂಬಳ ಮತ್ತು ಕಾಲಕಾಲಕ್ಕೆ ಗೊತ್ತು ಮಾಡಲ್ಪಟ್ಟ ಭತ್ಯೆಗಳನ್ನು ನೀಡುತ್ತದೆ. ರಿಜಿಸ್ಟ್ರಾರ್ ಆಗಿ ನಿಯೋಜಿಸಲ್ಪಟ್ಟ ಯಾವುದೇ ವ್ಯಕ್ತಿ ಈ ಅಧಿನಿಯಮದ ಪ್ರಕಾರ ಎಲ್ಲ ಉದ್ದೇಶಗಳಿಗೆ ರಿಜಿಸ್ಟ್ರಾರ್ ಎಂದು ಪರಿಗಣಿಸಲ್ಪಡುತ್ತಾರೆ. ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಿದ್ದ ಬೇರೆ ಅಧಿಕಾರಿಗಳನ್ನು ಮತ್ತು ನೌಕರರನ್ನು ಮೆಡಿಕಲ್ ಕೌನ್ಸಿಲ್ ನಿಯೋಜಿಸಬಹುದು.

೨. ಈ ವಿಭಾಗದ ಅಡಿಯಲ್ಲಿ ನಿಯೋಜಿಸಲ್ಪಟ್ಟ ರಿಜಿಸ್ಟ್ರಾರ್ ಅಥವಾ ನೌಕರ ಯಾವುದೇ ಅಧಿಕಾರಿ ಅಥವಾ ಇಂಡಿಯನ್ ಪೀನಲ್ ಕೋಡ್‌ನ ೨೧ನೇ ವಿಭಾಗದ ಅರ್ಥದಲ್ಲಿ ಸಾರ್ವಜನಿಕ ನೌಕರ' ಎಂದು ಪರಿಗಣಿಸ ಲಾಗುತ್ತದೆ.

**೧೨. ದಾಖಲೆ :**

ನಿಯಮಗಳ ಅನ್ವಯ ಸೂಚಿಸಿದ ರೀತಿಯಲ್ಲಿ ಅಧಿನಿಯಮ ಕೊಡ ಮಾಡಿದ ಷರತ್ತಿನ ಪ್ರಕಾರ ರಿಜಿಸ್ಟ್ರಾರ್ ವೃತ್ತಿ ಪರ ವೈದ್ಯರ ದಾಖಲೆಯನ್ನು ಇರಿಸುತ್ತಾರೆ.

ಮೆಡಿಕಲ್ ಕೌನ್ಸಿಲ್ ಆಜ್ಞೆಯ ಪ್ರಕಾರ ಈ ದಾಖಲೆಯನ್ನು ಸರಿಯಾಗಿ ಕಾಯ್ದಿರಿಸುವುದು ರಿಜಿಸ್ಟ್ರಾರ್ ಅವರ ಜವಾಬ್ದಾರಿ. ನೋಂದಣಿ ಮಾಡಿದ ವ್ಯಕ್ತಿಗಳ ವಿಳಾಸದಲ್ಲಿ ಯಾವುದೇ ಬದಲಾವಣೆಯಾದರೆ ಮತ್ತು ನೋಂದಣಿ ಮಾಡಿದ ನಂತರ ನೋಂದಾಯಿತ ವ್ಯಕ್ತಿ ಹೆಚ್ಚಿನ ವಿದ್ಯಾರ್ಹತೆಯನ್ನು ಪಡೆದರೆ ಅವುಗಳನ್ನು ಸೇರಿಸಬೇಕು ಮತ್ತು ಮರಣ ಹೊಂದಿದ ನೋಂದಾಯಿತ ವ್ಯಕ್ತಿಗಳ ಹೆಸರುಗಳನ್ನು ತೆಗೆದುಹಾಕಬೇಕು.

**೧೩. ವೃತ್ತಿ ಪರ ವೈದ್ಯರ ನೋಂದಾವಣೆ;**

೧. ೧೯೫೬ರ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಧಿನಿಯಮ (೧೯೫೬ ಸೆಂಟ್ರಲ್ ಅಧಿನಿಯಮದ ೧೦೨) ಅನುಸೂಚನೆಯಂತೆ ಸೇರ್ಪಡೆಯಾದ ವೈದ್ಯಕೀಯ ವಿದ್ಯಾರ್ಹತೆ ಹೊಂದಿದ್ದರೆ, ವಿದ್ಯಾರ್ಹತೆಯ ಸಮರ್ಪಕ ವಿವರಣೆ, ಅದನ್ನು ನೀಡಿದ ದಿನಾಂಕಗಳನ್ನು ನೀಡಿ ರಿಜಿಸ್ಟರಾರ್ ಅವರಿಗೆ ಅರ್ಜಿ ಸಲ್ಲಿಸಬೇಕು. ಅದರ ಜೊತೆಯಲ್ಲಿ ಪಡೆದ ಡಿಗ್ರಿ, ಡಿಪ್ಲೊಮಾ, ಅಥವ ಸನ್ನದನ್ನು ಹದಿನೈದು ರೂಪಾಯಿಗಳ ಶುಲ್ಕದೊಡನೆ ಅಧಿನಿಯಮದ

ಅಡಿಯಲ್ಲಿ ನೋಂದಾವಣೆಗೊಳ್ಳಲು ಸಲ್ಲಿಸಬೇಕು. ರಿಜಿಸ್ಟ್ರಾರ್, ಅರ್ಜಿದಾರ ನೊಂದಣಿಗೊಳ್ಳಲು ಅರ್ಹನಾಗಿದ್ದಾನೆಂದು ಮನಗೊಂಡರೆ, ಆತನ ಹೆಸರನ್ನು ರಿಜಿಸ್ಟರ್‌ನಲ್ಲಿ ಸೇರಿಸಬೇಕು. ಅರ್ಜಿಯನ್ನಾಧರಿಸಿ ಮತ್ತು ಎರಡು ರೂಪಾಯಿ ಶುಲ್ಕವನ್ನು ಸಲ್ಲಿಸಿದ ಮೇಲೆ ವೃತ್ತಿಪರ ವೈದ್ಯರ ಹೆಸರುಗಳನ್ನು ದಾಖಲೆಯಲ್ಲಿ ಸೇರಿಸಲಾಗುತ್ತದೆ. ಈ ನೊಂದಣಿಯು ವಿಭಾಗ ೩೪ ರಿಂದ ರದ್ದು ಮಾಡದ ಅಧಿನಿಯಮದಲ್ಲಿ ಮಾಡಲಾಗುತ್ತದೆ. ಇದು ಕರ್ನಾಟಕಕ್ಕೆ ಹೊಂದಿಕೊಳ್ಳುವ ನಿಯಮಗಳ ಆಜ್ಞೆ ೧೯೫೬ರಲ್ಲಿ ಸೇರಿಕೊಂಡಿದೆ. ಅದು ಮೇಲ್ಕಂಡ ಹಿಂತೆಗೆದುಕೊಂಡ ಅಧಿನಿಯಮಗಳ ಕರಾರಿಗೆ ಅನುಗುಣವಾಗಿದೆ.

೨. ಮೆಡಿಕಲ್ ಕೌನ್ಸಿಲ್ ಕೆಲವು ವ್ಯಕ್ತಿಗಳಿಗೆ ನೊಂದಣಿ ಮಾಡುವುದಕ್ಕೆ ಅನುಮತಿ ನೀಡದಿರಬಹುದು. ಅವರುಗಳೆಂದರೆ ೧೮೯೮ರ ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್ (೧೮೯೮ರ ಸೆಂಟ್ರಲ್ ಅಧಿನಿಯಮಗಿ) ನಲ್ಲಿ ವ್ಯಾಖ್ಯಾನಿಸಿದಂತೆ ಕಾನೂನುಬಾಹಿರ ಚಟುವಟಿಕೆಗಾಗಿ ಶಿಕ್ಷೆಗೊಳಗಾದ ವ್ಯಕ್ತಿ ಅಥವಾ ಆ ಕಾಲದಲ್ಲಿ ಚಾಲ್ತಿಯಲ್ಲಿರುವ ಬೇರೆ ಯಾವುದೇ ಕಾನೂನು ಅಥವಾ ಸರಿಯಾದ ವಿಚಾರಣೆಯಾದ ನಂತರ ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಥವಾ ಭಾರತದ ಬೇರೆ ಯಾವುದೇ ರಾಜ್ಯದ ಮೆಡಿಕಲ್ ಕೌನ್ಸಿಲ್ ವೃತ್ತಿಗೌರವಕ್ಕೆ ಕೆಟ್ಟ ಹೆಸರು ತರುವ ನಡವಳಿಕೆ ಹೊಂದಿರುವುದಕ್ಕಾಗಿ ಅಪರಾಧಿಯೆಂದು ಪರಿಗಣಿಸಲ್ಪಟ್ಟಿರುವುದು.

**೧೪. ರಿಜಿಸ್ಟ್ರಾರರ ನಿರ್ಣಯದ ವಿರುದ್ಧ ಮನವಿ:**

೧. ಮೊದಲ ನೊಂದಣಿಗೆ ಅಥವಾ ನಂತರದ ಬದಲಾವಣೆಗೆ ಸಂಬಂಧಿಸಿದ ರಿಜಿಸ್ಟ್ರಾರರ ನಿರ್ಧಾರದ ವಿರುದ್ಧ ಮಾಡಿದ ಮನವಿಯನ್ನು ರಾಜ್ಯ ಸರಕಾರ ಮಾಡಿದ ನಿಯಮಗಳನ್ವಯ ಮೆಡಿಕಲ್ ಕೌನ್ಸಿಲ್ ಆಲಿಸಿ, ನಿರ್ಧರಿಸುವುದು.

೨. ರಿಜಿಸ್ಟರ್‌ನಲ್ಲಿ ಮಾಡಿದ ಉಲ್ಲೇಖ ಮೆಡಿಕಲ್ ಕೌನ್ಸಿಲ್‌ನ ಆದೇಶದ ಪ್ರಕಾರ ತೆಗೆದುಹಾಕಲಾಗುವುದು.

**೧೫. ದುರ್ವರ್ತನೆಗಾಗಿ ವೃತ್ತಿಪರ ವೈದ್ಯನ ಹೆಸರನ್ನು ರಿಜಿಸ್ಟರ್‌ನಿಂದ ತೆಗೆದು ಹಾಕುವುದು.**

೧. ಮೆಡಿಕಲ್ ಕೌನ್ಸಿಲ್‌ನಿಂದ ಮಾಡಿದ ವಿಚಾರಣೆಯಲ್ಲಿ ವೃತ್ತಿಪರ ವೈದ್ಯ ದುರ್ವತನೆಗಾಗಿ ತಪ್ಪಿತಸ್ಥ ಎಂದು ಕಂಡು ಬಂದರೆ ಮೆಡಿಕಲ್ ಕೌನ್ಸಿಲ್

ಎ) ಅಂತಹ ವೃತ್ತಿಪರ ವೈದ್ಯನಿಗೆ ಎಚ್ಚರಿಕೆ ಪತ್ರವನ್ನು ಕೊಡಬಹುದು.

ಬಿ) ಅಂತಹ ವೃತ್ತಿಪರ ವೈದ್ಯನ ಬಗ್ಗೆ ಕೆಳಕಂಡಂತೆ ನಿರ್ದೇಶಿಸಬಹುದು.

i) ಆ ದಿಶೆಯಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಗೆ ರಿಜಿಸ್ಟರ್ ನಿಂದ ತೆಗೆದುಹಾಕಬಹುದು

ii) ನಿರ್ದಿಷ್ಟ ಕಾಲಾವಧಿಯನ್ನು ನಮೂದಿಸದೆ ಅಥವಾ ಹಾಗೆ ತೆಗೆದುಹಾಕುವುದರ ಬಗ್ಗೆ ನಿರ್ದಿಷ್ಟವಾಗಿ ಬರೆಯದೆ ರಿಜಿಸ್ಟರ್‌ನಿಂದ ತೆಗೆದುಹಾಕಬಹುದು.

**ವಿವರಣೆ:**

ಅ) ಕ್ರಿಮಿನಲ್ ಕೇಸ್‌ನಿಂದ ಶಿಕ್ಷೆಗೊಳಗಾದ ವೃತ್ತಿಪರ ವೈದ್ಯ ದುವರ್ತನೆಗೆ ಸಂಬಂಧಿಸಿದ ಅಪರಾಧ ಮತ್ತು ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್, ೧೮೯೮ (ಸೆಂಟ್ರಲ್ ಅಧಿನಿಯಮ V, ೧೮೯೮) ಅನ್ವಯ ಅಥವಾ ಆ ಕಾಲದಲ್ಲಿ ಪ್ರಚಲಿತವಿದ್ದ ಬೇರೆ ಯಾವುದೇ ಕಾನೂನಿನ ಪ್ರಕಾರ ಅಪರಾಧಿಯೆಂದು ಗುರುತಿಸಲ್ಪಟ್ಟಲ್ಲಿ

ಬಿ) ಮೆಡಿಕಲ್ ಕೌನ್ಸಿಲ್‌ನ ಅಭಿಪ್ರಾಯದ ಪ್ರಕಾರ ವೈದ್ಯ ವೃತ್ತಿಗೆ ಸಂಬಂಧಿಸಿದಂತೆ ಅನುಚಿತ ವರ್ತನೆ ಎಂದು ಅಭಿಪ್ರಾಯಪಟ್ಟಲ್ಲಿ

೧. ಮೆಡಿಕಲ್ ಕೌನ್ಸಿಲ್, ಮುಂದೆ ಯಾವುದೇ ದಿನ ಸರಿ ಎನಿಸಿದ್ದಲ್ಲಿ, ಕೇಂದ್ರ ಸರಕಾರದ ವಿಭಾಗ ೨೪ ಉಪವಿಭಾಗ (೨) ಅಥವಾ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಧಿನಿಯಮ ೧೯೫೬ರ ಅನ್ವಯ ಹಾಗೆ ತೆಗೆದು ಹಾಕಿದ ಹೆಸರನ್ನು ಪುನಃ ಸೇರಿಸಬಹುದು ಎಂದು ನಿರ್ಧಾರ ತೆಗೆದುಕೊಳ್ಳ ಬಹುದು.

**೧೬. ಮೆಡಿಕಲ್ ಕೌನ್ಸಿಲ್ ಸಿವಿಲ್ ಕೋರ್ಟಿನ ಅಧಿಕಾರ ಹೊಂದಿರುವುದು :**

ಅಧಿನಿಯಮದ ಅಡಿಯಲ್ಲಿ ವಿಚಾರಣೆಯನ್ನು ನಡೆಸುವಾಗ ಮೆಡಿಕಲ್ ಕೌನ್ಸಿಲ್ ೧೯೦೮ರ ಕೋಡ್ ಆಫ್ ಸಿವಿಲ್ ಪ್ರೊಸೀಜರ್ (ಸೆಂಟ್ರಲ್ ಅಧಿನಿಯಮ V, ೧೯೦೮) ಸಿವಿಲ್ ಕೋರ್ಟುಗಳಿಗೆ ದತ್ತವಾಗಿರುವಷ್ಟೇ ಅಧಿಕಾರವನ್ನು ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ದಾವೆಯ ಚೌಕಶಿ ಮಾಡುತ್ತಿರುವಾಗ ಅಧಿಕಾರ ಹೊಂದಿರುತ್ತದೆ

ಎ) ಯಾವುದೇ ವ್ಯಕ್ತಿಯ ಹಾಜರಾತಿಯನ್ನು ಕಡ್ಡಾಯಗೊಳಿಸು ವಾಗ ಮತ್ತು ಆತನನ್ನು ಪ್ರತಿಜ್ಞೆಯ ಅಡಿಯಲ್ಲಿ ವಿಚಾರಿಸುವಾಗ

ಬಿ) ದಾಖಲೆಗಳನ್ನು ಹಾಜರುಪಡಿಸಲು ಒತ್ತಾಯಿಸುವಾಗ

ಸಿ) ಸಾಕ್ಷಿಯ ಚೌಕಶಿ ಮಾಡುವ ಕಾರ್ಯಕ್ಕೆ ಆದೇಶ ನೀಡುವಾಗ

**೧೭. ತನಿಖೆಗಳನ್ನು ನ್ಯಾಯಾಂಗ ನಡವಳಿಯೆಂದು ಪರಿಗಣನೆ :**

ಅಧಿನಿಯಮದ ಆಧೀನದಲ್ಲಿ ಕೈ ಕೊಳ್ಳುವ ಎಲ್ಲ ತನಿಖೆ, ಇಂಡಿಯನ್ ಪೀನಲ್ ಕೋಡ್‌ನ ೧೯೩ ಮತ್ತು ೨೨೮ನೇ ವಿಭಾಗದ ಅರ್ಥದಲ್ಲಿ ನ್ಯಾಯಾಂಗ ನಡವಳಿಯೆಂದು ಪರಿಗಣಿಸಲಾಗುತ್ತದೆ.

**೧೮. ಮೆಡಿಕಲ್ ಕೌನ್ಸಿಲ್‌ಗೆ ಮೌಲ್ಯಮಾಪಕರು:**

೧. ಮೆಡಿಕಲ್ ಕೌನ್ಸಿಲ್ ಮುಂದೆ ಬರುವ ತನಿಖೆಯಲ್ಲಿ ಉದ್ಭವಿಸುವ ನ್ಯಾಯಾಂಗ ಪ್ರಶ್ನೆಗಳಿಗೆ ಸಲಹೆ ನೀಡುವ ಉದ್ದೇಶ್ಯದಿಂದ, ಅಂತಹ ತನಿಖೆಗಳಲ್ಲಿ ಮೆಡಿಕಲ್ ಕೌನ್ಸಿಲ್‌ಗೆ ಮೌಲ್ಯಮಾಪಕರು ಇರಬೇಕು. ಅವರು ಉಚ್ಚನ್ಯಾಯಾಲಯದಲ್ಲಿ ಹತ್ತು ವರುಷಕ್ಕಿಂತ ಮೇಲ್ಪಟ್ಟು ಅಡ್ವೊಕೇಟ್ ಆಗಿ ಕಾರ್ಯ ಮಾಡಿರಬೇಕು.

೨. ಮೆಡಿಕಲ್ ಕೌನ್ಸಿಲ್‌ಗೆ ಯಾವುದೇ ನ್ಯಾಯಾಂಗ ಸಮಸ್ಯೆ ಬಗ್ಗೆ ಮೌಲ್ಯಮಾಪಕ ಸಲಹೆ ಮಾಡುವಾಗ ಅದನ್ನು ಪ್ರತಿಯೊಂದು ಪಕ್ಷದ ಎದುರು ಇಲ್ಲವೆ ತನಿಖೆಯಲ್ಲಿ ಪಕ್ಷದ ಪರವಾಗಿ ಪ್ರತಿನಿಧಿಯಾಗಿ ಭಾಗವಹಿಸುವ ಅಥವಾ ಅವರು ಕಂಡ ಅಂಶಗಳ ಬಗ್ಗೆ ಮೆಡಿಕಲ್ ಕೌನ್ಸಿಲ್ ಚರ್ಚೆಯನ್ನು ಆರಂಭಿಸಿದ ಮೇಲೆ ಸಲಹೆ ನೀಡಿದಲ್ಲಿ ಮೇಲ್ಕಾಣಿಸಿದ ಅಂತಹ ಪ್ರತಿಯೊಂದು ಪಕ್ಷ ಅಥವಾ ವ್ಯಕ್ತಿಗೆ ಮೌಲ್ಯಮಾಪಕರು ನೀಡಿದ ಸಲಹೆಯನ್ನು ಪ್ರಸ್ತುತಪಡಿಸಬೇಕು. ಅಂತಹ ಪಕ್ಷ ಅಥವಾ ವ್ಯಕ್ತಿಗೆ, ಮೇಲ್ಕಾಣಿಸಿದ ಅಂತಹ ಯಾವುದೇ ಪ್ರಶ್ನೆಗೆ ಮೌಲ್ಯಮಾಪಕ ನೀಡಿದ ಸಲಹೆಯನ್ನು ಮೆಡಿಕಲ್ ಕೌನ್ಸಿಲ್ ಒಪ್ಪದಿದ್ದರೆ ಅದನ್ನು ತಿಳಿಸತಕ್ಕದ್ದು.

೩. ಈ ವಿಭಾಗದ ಆಡಿಯಲ್ಲಿ ಯಾವುದೇ ಮೌಲ್ಯಮಾಪಕರನ್ನು ಒಟ್ಟಾಗಿ ಇಲ್ಲವೆ ಯಾವುದೇ ನಿರ್ದಿಷ್ಟ ತನಿಖೆಗೆ ಅಥವಾ ತನಿಖೆಗಳ ಒಂದು ನಿರ್ದಿಷ್ಟ ಗುಂಪಿಗೆ ನೇಮಿಸಬಹುದು. ರಾಜ್ಯ ಸರಕಾರದ ಒಪ್ಪಿಗೆಯಂತೆ, ಅಂತಹ ಪ್ರಶ್ನೆಗಳಿಗೆ ಮೌಲ್ಯಮಾಪಕ ನೀಡುವ ಸಲಹೆಗಳಿಗೆ ಗೌರವಧನವನ್ನು ಕೊಡಬೇಕು.

## ೧೯. ನೋಂದಣಿ ನವೀಕರಣಗೊಳಿಸುವುದು:

೧. ವಿಭಾಗ ೧೩ರಲ್ಲಿ ಸೂಚಿಸಿರುವುದಕ್ಕೆ ಅನುಗುಣವಾಗಿ ಪ್ರತಿಯೊಬ್ಬ ವೃತ್ತಿಪರ ವೈದ್ಯ ಮೆಡಿಕಲ್ ಕೌನ್ಸಿಲ್‌ಗೆ ಪ್ರತಿ ವರುಷ ೩೧ನೇ ಡಿಸೆಂಬರ್ ಅಥವಾ ಅದರ ಮೊದಲು ತಮ್ಮ ಹೆಸರನ್ನು ರಿಜಿಸ್ಟರ್‌ನಲ್ಲಿ ನವೀಕರಣ ಗೊಳಿಸಲು ಎರಡು ರೂಪಾಯಿಗಳನ್ನು ಕಟ್ಟತಕ್ಕದ್ದು.

೨. ನಿಗದಿಪಡಿಸಿದ ದಿನದೊಳಗೆ ನವೀಕರಣಗೊಳಿಕೆಯ ಶುಲ್ಕವನ್ನು ಕಟ್ಟದಿದ್ದರೆ, ರಿಜಿಸ್ಟ್ರಾರ್ ತಪ್ಪಿತಸ್ಥರ ಹೆಸರನ್ನು ರಿಜಿಸ್ಟರ್‌ನಿಂದ ತೆಗೆದು ಹಾಕುತ್ತಾರೆ.

ಆ ರೀತಿ ತೆಗೆದು ಹಾಕಿದ ಹೆಸರನ್ನು ಮತ್ತೆ ರಿಜಿಸ್ಟರ್‌ನಲ್ಲಿ ನವೀಕರಣಗೊಳಿಸುವ ಶುಲ್ಕವನ್ನು, ನಿಯಮ ಸೂಚಿಸಿದ ರೀತಿಯಲ್ಲಿ ರೂಪಿಸಿದ ರೀತಿ ಮತ್ತು ನಿಯಮಗಳಿಗನುಗುಣವಾಗಿ ಭರ್ತಿ ಮಾಡಿದಲ್ಲಿ ಪುನಃ ಸೇರಿಸಬಹುದು.

## ೨೦. ವಿದ್ಯಾರ್ಹತೆಯ ವೃತ್ತಿಪರ ವೈದ್ಯರ ಪ್ರಮಾಣ ಪತ್ರ:

೧. 'ಕಾನೂನು ಬದ್ಧವಾಗಿ ಅರ್ಹತೆ ಪಡೆದ ವೃತ್ತಿಪರ ವೈದ್ಯ 'ಅಥವಾ' ಯೋಗ್ಯ ರೀತಿಯಲ್ಲಿ ಅರ್ಹನಾದ ವೃತ್ತಿಪರ ವೈದ್ಯ' ಅಥವಾ ಕಾನೂನಾತ್ಮಕವಾಗಿ ವೃತ್ತಿಪರ ವೈದ್ಯ ಅಥವಾ ವೈದ್ಯಕೀಯ ವೃತ್ತಿಯ ಸದಸ್ಯ ಎಂದು ಗುರುತಿಸಲ್ಪಡುವ ಯಾವುದೇ ಶಬ್ದಗಳು ಈ ನಿರೂಪಣೆಯ ಅರ್ಥ. ಈ ಅಧಿನಿಯಮದ ಅಡಿ ರಿಜಿಸ್ಟರ್ ಆದ ವೃತ್ತಿಪರ ವೈದ್ಯ ಅಥವಾ ವೃತ್ತಿಪರ ವೈದ್ಯನೆಂದು ಆತನ ಹೆಸರು ಆ ಸಮಯದಲ್ಲಿ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಧಿನಿಯಮ, ೧೯೫೬ (ಸೆಂಟ್ರಲ್ ಅಧಿನಿಯಮ ೧೯೫೬ರ (೧೦೨) ಅಡಿಯಲ್ಲಿ ಕಾಪಾಡಿಕೊಂಡು ಬಂದಿರುವ ಇಂಡಿಯನ್ ಮೆಡಿಕಲ್ ರಿಜಿಸ್ಟರ್‌ನಲ್ಲಿ ದಾಖಲಾಗಿರುತ್ತದೆ.

೨. ಯಾವುದೇ ಅಧಿನಿಯಮದ ಪ್ರಕಾರ, ಸರ್ಟಿಫಿಕೇಟ್‌ನ್ನು ಯಾವುದೇ ವೃತ್ತಿಪರ ವೈದ್ಯ ಅಥವಾ ಮೆಡಿಕಲ್ ಆಫೀಸರ್ ಪಡೆದಿದ್ದರೆ, ಅದನ್ನು ಸಹಿಮಾಡುವ ವ್ಯಕ್ತಿ ಅಧಿನಿಯಮದ ಅಡಿಯಲ್ಲಿ ರಿಜಿಸ್ಟರ್ ಆಗಿದ್ದರೆ ಇಲ್ಲವೆ ಆತನ ಹೆಸರು ಇಂಡಿಯನ್ ಮೆಡಿಕಲ್ ರಿಜಿಸ್ಟರ್‌ನಲ್ಲಿ ಉಲ್ಲೇಖಿಸಿದ ಉಪವಿಭಾಗ(೧)ರಲ್ಲಿ ಇದ್ದರೆ ಅದು ಸಿಂಧು.

## ೨೧. ಕೆಲವೊಂದು ನೇಮಕಾತಿಗಳನ್ನು ಹೊಂದಿರಬಲ್ಲ ವ್ಯಕ್ತಿಗಳು :

ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಧಿನಿಯಮ ೧೯೫೬ (ಸೆಂಟ್ರಲ್ ಅಧಿನಿಯಮ ೧೯೫೬ರ ೧೦೨) ಅಡಿಯಲ್ಲಿ ರಕ್ಷಿಸಲ್ಪಟ್ಟಿರುವ ಇಂಡಿಯನ್ ಮೆಡಿಕಲ್ ರಿಜಿಸ್ಟರ್‌ನಲ್ಲಿ ಆ ಕಾಲದಲ್ಲಿ ವ್ಯಕ್ತಿಯೊಬ್ಬರ ಹೆಸರು ಇದ್ದರೆ, ಆತ ಫಿಜಿಷಿಯನ್, ಸರ್ಜನ್ ಅಥವಾ ಯಾವುದೇ ಡಿಸ್ಪೆನ್ಸರಿ, ಆಸ್ಪತ್ರೆ, ಇನ್‌ಫರ್ಮರಿ ಅಥವಾ ವಿಶ್ರಾಂತಿಗಾಗಿರುವ ಆಸ್ಪತ್ರೆ ಅಥವಾ ಆಧುನಿಕ ವೈಜ್ಞಾನಿಕ ವೈದ್ಯಕೀಯ ವ್ಯವಸ್ಥೆಯನ್ನು ಅನುಸರಿಸುತ್ತಿರುವ ಯಾವುದೇ ಸಾರ್ವಜನಿಕ ಸಂಸ್ಥೆ, ಸಂಘ ಅಥವಾ ಪ್ರತಿಷ್ಠಾನದಲ್ಲಿ ನೇಮಕವಾಗಲು ಅರ್ಹ.

## ೨೨. ಮರಣದ ಪ್ರಕಟಣೆ:

ಪ್ರತಿಯೊಂದು ಮರಣದ ರಿಜಿಸ್ಟ್ರಾರ್ ಅಧಿನಿಯಮದ ಅಡಿಯಲ್ಲಿ ವೃತ್ತಿಪರ ವೈದ್ಯರ ಸಾವಿನ ವರದಿ ಬಂದ ನಂತರ ಕೂಡಲೇ ಆತ ಮರಣದ ಸಮಯ ಮತ್ತು ಸ್ಥಳದ ವಿವರಗಳನ್ನು ತಾನೇ ಬರೆದ ಪ್ರಮಾಣ ಪತ್ರವನ್ನು ಈ ಅಧಿನಿಯಮದ ಅನುಸಾರ ಅಂಚೆಯ ಮೂಲಕ ರಿಜಿಸ್ಟ್ರಾರ್ ಅವರಿಗೆ ಕಳುಹಿಸಿಕೊಡುತ್ತಾರೆ.

ಅಂತಹ ಪ್ರಮಾಣಪತ್ರಗಳಿಗೆ ಮತ್ತು ಅದನ್ನು ಕಳುಹಿಸಲು ಆದ ವೆಚ್ಚವನ್ನು ತನ್ನ ಕಛೇರಿಯ ವೆಚ್ಚವೆಂದು ಅದಕ್ಕೆ ಶುಲ್ಕ ವಿಧಿಸಬಹುದು.

## ೨೩. ಪಂಚನಾಮೆ, ಇತರ ಕಡೆ ಕೆಲಸ ಮಾಡುವುದಕ್ಕೆ ವಿನಾಯಿತಿ :

ಈ ಕಾಲದಲ್ಲಿ ಪ್ರಚಲಿತವಿರುವ ಯಾವುದೇ ಕಾನೂನಿನ ಪ್ರಕಾರ ಈ ಅಧಿನಿಯಮದ ಅಡಿ ನೋಂದಣಿಯಾದ ಎಲ್ಲಾ ವ್ಯಕ್ತಿಗಳು, ಅವರು ಬಯಸಿದರೆ, ಅವರು ಯಾವುದೇ ಪಂಚನಾಮೆಯಲ್ಲಿ ಅಥವಾ ೧೮೯೮ರ ಕ್ರಿಮಿನಲ್ ಪ್ರೊಸೀಜರ್ ಕೋಡ್ (ಸೆಂಟ್ರಲ್ ಅಧಿನಿಯಮ V ೧೮೯೮) ಅಡಿಯಲ್ಲಿ ನ್ಯಾಯದರ್ಶಿಯಾಗಿ ಕಾರ್ಯ ನಿರ್ವಹಿಸಲು ವಿನಾಯ್ತಿ.

## ೨೪. ಸದಸ್ಯರಿಗೆ ಕೊಡಬೇಕಾದ ಶುಲ್ಕ:

ಮೆಡಿಕಲ್ ಕೌನ್ಸಿಲ್ ಸದಸ್ಯರಿಗೆ ಹಾಜರಾತಿಯ ಶುಲ್ಕ ಮತ್ತು ನ್ಯಾಯೋಚಿತ ಪ್ರಯಾಣ ವೆಚ್ಚಗಳನ್ನು ಮೆಡಿಕಲ್ ಕೌನ್ಸಿಲ್ ಕಾಲಕಾಲಕ್ಕೆ ನೀಡಿ ರಾಜ್ಯಸರ್ಕಾರದ ಒಪ್ಪಿಗೆಯನ್ನು ಪಡೆಯುತ್ತದೆ.

**೨೫. ಶುಲ್ಕದ ವಿಲೇವಾರಿ :**

ಅಧಿನಿಯಮದ ಅಡಿಯಲ್ಲಿ ಮೆಡಿಕಲ್ ಕೌನ್ಸಿಲ್ ಪಡೆದ ಎಲ್ಲಾ ಶುಲ್ಕವನ್ನು ಈ ಅಧಿನಿಯಮಕ್ಕಾಗಿ ರಾಜ್ಯ ಸರಕಾರ ಇದರ ಬಗ್ಗೆ ರೂಪಿಸಿದ ನಿಯಮಗಳಿಗೆ ಒಳಪಡುತ್ತದೆ.

**೨೬. ವೃತ್ತಿಪರ ವೈದ್ಯರ ಪಟ್ಟಿಯ ಪ್ರಕಟಣೆ:**

೧. ರಿಜಿಸ್ಟ್ರಾರ್ ಪ್ರತಿ ವರುಷ, ಜೂನ್ ಮೂವತ್ತರಂದು ಅಥವಾ ಅದಕ್ಕೂ ಮೊದಲು ಅಧಿಕೃತ ಗೆಜೆಟ್‌ನಲ್ಲಿ ಆ ವರುಷ ಜನವರಿಯ ಮೊದಲ ದಿನ ರಿಜಿಸ್ಟರ್‌ನಲ್ಲಿ ಸೇರ್ಪಡೆಯಾದ ಎಲ್ಲಾ ವೃತ್ತಿಪರ ವೈದ್ಯರ ಹೆಸರು ಮತ್ತು ವಿದ್ಯಾರ್ಹತೆಗಳ ಪಟ್ಟಿಯನ್ನು ಪ್ರಕಟಿಸುತ್ತಾರೆ.

೨. ಉಪವಿಭಾಗ(೧)ರ ಅಡಿಯಲ್ಲಿ ಪ್ರಕಟಣೆಗೊಂಡ ಪಟ್ಟಿಯ ಒಂದು ಪ್ರತಿ ಎಲ್ಲ ನ್ಯಾಯಾಲಯಗಳಲ್ಲಿ ನ್ಯಾಯಾಂಗ ಅಥವಾ ಅರೆನ್ಯಾಯಾಲಯದ ನಡೆವಳಿಗಳಲ್ಲಿ ಸಾಕ್ಷಿಯಾಗುತ್ತದೆ. ಅಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳು ಈ ಅಧಿನಿಯಮ ಕೊಡ ಮಾಡುವ ಷರತ್ತುಗಳ ಪ್ರಕಾರ ರಿಜಿಸ್ಟರ್ ಆಗಿರುತ್ತಾರೆ. ಯಾವುದೇ ವ್ಯಕ್ತಿಯ ಹೆಸರು ಅಂತಹ ಪ್ರತಿಯಲ್ಲಿ ಇಲ್ಲವಾಗಿದ್ದರೆ, ಅದರ ವಿರುದ್ಧ ಸಾಬೀತುಪಡುವವರೆಗೂ, ಅಂತಹ ವ್ಯಕ್ತಿ ಈ ಅಧಿನಿಯಮದ ಪ್ರಕಾರ ನೋಂದಣಿ ಆಗಿಲ್ಲವೆಂದು ತಿಳಿಯತಕ್ಕದ್ದು.

ಅಂತಹ ಪ್ರತಿಯಲ್ಲಿ ಯಾವುದೇ ವ್ಯಕ್ತಿಯ ಹೆಸರು ಇಲ್ಲವಾಗಿದ್ದರೆ, ರಿಜಿಸ್ಟ್ರಾರ್ ಕೈಯಿಂದ ಪ್ರಮಾಣೀಕೃತವಾದ ಪ್ರತಿಯಲ್ಲಿ ಆ ವ್ಯಕ್ತಿಯ ಹೆಸರು ರಿಜಿಸ್ಟರ್‌ನಲ್ಲಿ ಸೇರ್ಪಡೆಯಾಗಿರುವುದು ಕಂಡು ಬಂದರೆ ಆ ವ್ಯಕ್ತಿ ಈ ಅಧಿನಿಯಮದ ಪ್ರಕಾರ ನೋಂದಣಿ ಆದ ವ್ಯಕ್ತಿಯೆಂಬುದಕ್ಕೆ ಪುರಾವೆ ಯಾಗುತ್ತದೆ.

**೨೭. ಹಂಚಲ್ಪಡುವ ಮತಗಳಿಂದ ಚುನಾವಣೆ ಆಯೋಜನೆ:**

ಅಧಿನಿಯಮದ ಅಡಿ ಎಲ್ಲ ಚುನಾವಣೆಗಳನ್ನು ಹಂಚಲ್ಪಡುವ ವ್ಯವಸ್ಥೆಯ ಮತಚಲಾವಣೆಯ ಮೂಲಕ ಜರುಗುತ್ತದೆ.

**ವಿವರಣೆ :** ಹಂಚಲ್ಪಡುವ ವ್ಯವಸ್ಥೆಯ ಚುನಾವಣೆಯೆಂದರೆ ಪ್ರತಿಯೊಬ್ಬ ಮತದಾರ ಅಲ್ಲಿ ತುಂಬಬೇಕಾದ ಸ್ಥಳಗಳಿಗೆ ಎಲ್ಲಾ ಮತಗಳನ್ನು ನೀಡಬಲ್ಲ.

ಯಾವುದೇ ಮತದಾರ ಒಂದಕ್ಕಿಂತ ಹೆಚ್ಚು ಮತಗಳನ್ನು ಯಾವುದೇ ಅಭ್ಯರ್ಥಿಗೆ ಕೊಡಲಾಗದು. ಅಲ್ಲದೆ ಪ್ರತಿಯೊಬ್ಬ ಮತದಾರ ತಾನು ಕೊಡಬಹುದಾದ ಎಲ್ಲ ಮತಗಳನ್ನು ದಾಖಲಿಸಿದ್ದರೆ ಮಾತ್ರ ಅಂತಹ ಮತಪತ್ರ ಸಿಂಧು.

**೨೮. ದಂಡ:**

ಅಧಿನಿಯಮದ ಪ್ರಕಾರ ತಾನು ನೋಂದಣಿ ಆಗಿದ್ದೇನೆ ಎಂದು ಸುಳ್ಳು ತೋರಿಕೆದಾದರು ಅಥವಾ ಅಧಿನಿಯಮದ ಪ್ರಕಾರ ನೋಂದಣಿ ಆಗದೆ ತನ್ನ ಹೆಸರು ಅಥವಾ ಪದವಿಯ ಮುಂದೆ ತಾನು ನೋಂದಣಿ ಆಗಿದ್ದೇನೆಂದು ಯಾವುದೇ ಶಬ್ಧಗಳನ್ನು ಅಥವಾ ಅಕ್ಷರಗಳನ್ನು ಬಳಸಿದರೆ, ಯಾವುದೇ ವ್ಯಕ್ತಿ ನಿಜಕ್ಕೂ ಅಂತಹ ಸೋಗಿನಿಂದ ಅಥವಾ ವಿಜ್ಞಾಪನೆ ಇರಲಿ ಇಲ್ಲದಿರಲಿ ಶಿಕ್ಷೆಗೆ ಒಳಗಾಗುತ್ತಾರೆ. ಮೊದಲ ಶಿಕ್ಷೆಯಾಗಿದ್ದರೆ ದಂಡ ಹಾಕಲಾಗುತ್ತಿದ್ದು, ಅದು ಮುನ್ನೂರು ರೂಪಾಯಿಗಳಾಗಿರಬಹದು. ನಂತರ ಶಿಕ್ಷೆಗಳಿಗೆ ಹಾಕುವ ದಂಡ ಒಂದು ಸಾವಿರ ರೂಪಾಯಿಗಳಾದರೂ ಆಗಬಹುದು.

**೨೯. ಒಳ್ಳೆಯ ನಂಬುಗೆಯಿಂದ ತೆಗೆದುಕೊಂಡ ಕಾರ್ಯದ ರಕ್ಷಣೆ :**

ಈ ಅಧಿನಿಯಮದ ಪ್ರಕಾರ ಒಳ್ಳೆಯ ನಿಷ್ಠೆಯಿಂದ ಕೈಕೊಂಡಿದ್ದನ್ನು ಇಲ್ಲವೆ ಕೈಕೊಳ್ಳಬೇಕೆಂದಿರುವುದನ್ನು ತೆಗೆದುಕೊಂಡ ಬಗ್ಗೆ ರಾಜ್ಯ ಸರಕಾರ ಇಲ್ಲವೆ ಮೆಡಿಕಲ್ ಕೌನ್ಸಿಲ್ ಅಥವಾ ರಾಜ್ಯ ಸರಕಾರದ ಇಲ್ಲವೆ ಮೆಡಿಕಲ್ ಕೌನ್ಸಿಲ್‌ನ ಯಾವುದೇ ಅಧಿಕಾರಿ ಅಥವಾ ನೌಕರನ ಎದುರಿನಲ್ಲಿ ಯಾವುದೇ ದಾವೆ ಅಥವಾ ಕಾನೂನಾತ್ಮಕ ಚಟುವಟಿಕೆಯನ್ನು ಮಾಡುವಂತಿಲ್ಲ.

**೩೦. ಸಿವಿಲ್ ನ್ಯಾಯಾಲಯಗಳ ಕಾರ್ಯವ್ಯಾಪ್ತಿ:**

ಈ ಅಧಿನಿಯಮದಿಂದ ದತ್ತವಾದ ಯಾವುದೇ ಅಧಿಕಾರವನ್ನು ಬಳಸಿ ಅಥವಾ ಅಡಿಯಲ್ಲಿ ಕೈಕೊಂಡ ಕಾರ್‍ಯದ ಮೇಲೆ ರಾಜ್ಯ ಸರಕಾರ ಅಥವಾ ಕೌನ್ಸಿಲ್ ಅಥವಾ ರಿಜಿಸ್ಟ್ರಾರ್ ಅವರನ್ನು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.

**೩೧. ನಿಯಮಗಳನ್ನು ರೂಪಿಸಲು ಅಧಿಕಾರ :**

(೧) ಹಿಂದೆ ಮಾಡಿದ ಪ್ರಕಟಣೆಯ ನಂತರ ರಾಜ್ಯ ಸರಕಾರ ಪ್ರಕಟಣೆಯ ಮೂಲಕ ಈ ಅಧಿನಿಯಮವನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರೂಪಿಸಬಹುದು.

(೨) ಈ ವಿಭಾಗದ ಕೆಳಗೆ ರೂಪಿಸಿದ ಪ್ರತಿಯೊಂದು ನಿಯಮವನ್ನು ನಂತರ ಸಮಯ ಕಳೆಯದೆ ಎರಡೂ ರಾಜ್ಯ ವಿಧಾನ ಮಂಡಲಗಳ ಮುಂದೆ ಅದರ ಮೂವತ್ತು ದಿನಗಳ ಕಾಲಾವಧಿಯ ಅಧಿವೇಶನ ಇದ್ದ ಕಾಲದಲ್ಲಿ ಇರಿಸಲಾಗುವುದು. ಅಧಿವೇಶನ ಒಂದು ಬಾರಿ ಇಲ್ಲವೆ ಒಂದರ ನಂತರ ಮತ್ತೊಂದರಂತೆ ಜರುಗಬಹುದು. ಅಧಿವೇಶನ ಮುಗಿಯುವ ಮೊದಲು ಅಥವಾ ಒಂದು ಅಧಿವೇಶನ ಮುಗಿದು ಮುಂದಿನದರಲ್ಲಿ ಅದನ್ನು ಮಂಡಿಸುವುದು ಇಲ್ಲವೆ ಎರಡೂ ಸಭೆಗಳು ನಿಯಮದಲ್ಲಿ ಯಾವುದಾದರೂ ಬದಲಾವಣೆಯನ್ನು ತರಲು ಒಪ್ಪಬಹುದು. ಅಥವಾ ಎರಡೂ ಸಭೆಗಳು ನಿಯಮವನ್ನು ಮಾಡುವುದು ಅಗತ್ಯವಿಲ್ಲವೆಂದು ನಿರ್ಧರಿಸಬಹುದು. ಹಾಗಾಗಿ ಆನಂತರ ನಿಯಮ ಮಾರ್ಪಾಟುಗೊಂಡ ರೂಪದಲ್ಲಿ ಮಾತ್ರ ಕಾರ್ಯರೂಪಕ್ಕೆ ಬರಬಹುದು ಅಥವಾ ಯಾವುದೇ ಪರಿಣಾಮವನ್ನು ಉಂಟುಮಾಡದಿರ ಬಹುದು. ಅದು ಯಾವ ರೀತಿ ಬೇಕಾದರೂ ಆಗಿರಬಹುದು. ಆದರೂ ಹಾಗೆ ಮಾಡಿದ ಯಾವುದೇ ಮಾರ್ಪಾಟು ಅಥವಾ ಅನೂರ್ಜಿತಗೊಳಿಕೆಯನ್ನು ನಿಯಮದಡಿ, ಹಿಂದೆ ಅದರ ಸಿಂಧುತ್ವದ ಬಗ್ಗೆ ಮಾಡಿದ ಯಾವುದೇ ಪೂರ್ವಗ್ರಹ ಅಭಿಪ್ರಾಯವಿಲ್ಲದೆ ಕೈಕೊಳ್ಳಲಾಗುತ್ತದೆ.

**೩೨. ನಿಬಂಧನೆಗಳು:**

೧. ಈ ಅಧಿನಿಯಮ ಕೊಡಮಾಡಿದ ಅಧಿಕಾರಕ್ಕೊಳಪಟ್ಟ ಮತ್ತು ಮೆಡಿಕಲ್ ಕೌನ್ಸಿಲ್ ವಿಭಾಗ ೩೧ರ ಅಡಿ ಮಾಡಿದ ನಿಯಮಗಳನ್ನು, ರಾಜ್ಯ ಸರಕಾರದಿಂದ ಮೊದಲೇ ಒಪ್ಪಿಗೆ ಪಡೆದು, ಈ ಅಧಿನಿಯಮದ ಕರಾರುಗಳನ್ನು ಕಾರ್ಯರೂಪಕ್ಕೆ ತರಲು ನಿಬಂಧನೆಗಳನ್ನು ರೂಪಿಸಲಾಗುತ್ತದೆ.

೨. ಆ ಅಧಿನಿಯಮದ ಅಡಿ ಮೆಡಿಕಲ್ ಕೌನ್ಸಿಲ್ ರೂಪಿಸಿದ ನಿಬಂಧನೆ ಗಳನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲಾಗುವುದು.

೩. ಈ ಅಧಿನಿಯಮದ ಅಡಿಯಲ್ಲಿ ರೂಪಿಸಿದ ಯಾವುದೇ ನಿಬಂಧನೆಗಳನ್ನು ಪ್ರಕಟಣೆಯ ಮೂಲಕ ರದ್ದುಗೊಳಿಸುವ ಅಥವಾ ಬದಲಾವಣೆ ಮಾಡುವ ರಾಜ್ಯ ಸರಕಾರದ ಕ್ರಮ ಕಾನೂನು ಬದ್ಧವಾಗಿರುತ್ತದೆ.

**೩೩. ನಿಯಂತ್ರಣ :**

೧. ಯಾವುದೇ ಸಮಯದಲ್ಲಿ, ರಾಜ್ಯ ಸರಕಾರಕ್ಕೆ ಕೌನ್ಸಿಲ್ ಈ ಅಧಿನಿಯಮದ ಅಧೀನದಲ್ಲಿ ಕ್ರಮ ಕೈಕೊಳ್ಳುವಲ್ಲಿ ವಿಫಲವಾಗಿದೆ ಅಥವಾ ತನ್ನ ಮಿತಿಯನ್ನು ದಾಟಿದೆ ಅಥವಾ ಅಧಿಕಾರದ ದುರುಪಯೋಗ

ಮಾಡಿದೆಯೆಂದು ತೋರಿದರೆ ಅಥವಾ ಅದು ಅಧಿನಿಯಮದ ಅಧೀನದಲ್ಲಿ ಕೊಡವಾಡಿದ ಕರ್ತವ್ಯವನ್ನು ನಿರ್ವಹಿಸುವಲ್ಲಿ ತಪ್ಪಿದೆಯೆಂದು ಮನವರಿಕೆಯಾದರೆ ರಾಜ್ಯ ಸರಕಾರ ಅಂತಹ ವಿಫಲತೆ, ಮಿತಿಮೀರಿದ ಅಥವಾ ದುರುಪಯೋಗ ತೀವ್ರ ಸ್ವರೂಪದ್ದೆಂದು ತಿಳಿದರೆ ಅದರ ವಿವರಗಳನ್ನು ಕೌನ್ಸಿಲ್‌ಗೆ ಸೂಚಿಸುತ್ತದೆ. ಒಂದು ವೇಳೆ ಕೌನ್ಸಿಲ್ ಅಂತಹ ತಪ್ಪುಗಳನ್ನು ಅತಿರೇಕ ಅಥವಾ ದುರುಪಯೋಗವನ್ನು ನಿವಾರಿಸಲು ವಿಫಲವಾದರೆ, ರಾಜ್ಯ ಸರಕಾರ ಅದರ ಬಗ್ಗೆ ನಿರ್ಧರಿಸಿದ ಕಾಲಾವಧಿಯೊಳಗೆ ರಾಜ್ಯ ಸರಕಾರ ಕೌನ್ಸಿಲ್ ಅನ್ನು ವಿಸರ್ಜಿಸಬಹುದು. ಕೌನ್ಸಿಲ್‌ಗಿರುವ ಅಧಿಕಾರ ಮತ್ತು ಕರ್ತವ್ಯವನ್ನು ತಾನು ನಿಗದಿಪಡಿಸಿದ ಕಾಲದಲ್ಲಿ ನಿಭಾಯಿಸಲು ವ್ಯಕ್ತಿಯೊಬ್ಬರಿಗೆ ಕೊಡಬಹುದು. ವಿಭಾಗ ೩ರ ಅಡಿಯಲ್ಲಿ ಹೊಸ ಕೌನ್ಸಿಲ್ ರಚನೆಯಾಗುವವರೆಗೆ, ಈ ಅಧಿನಿಯಮದ ಉದ್ದೇಶ್ಯಕ್ಕನುಗುಣವಾಗಿ ರಾಜ್ಯ ಸರಕಾರ ಕೌನ್ಸಿಲ್‌ನ ನಿಧಿ ಮತ್ತು ಸ್ವತ್ತನ್ನು ತನ್ನ ಸುಪರ್ದಿನಲ್ಲಿಟ್ಟುಕೊಳ್ಳುವುದು.

೨. ಉಪವಿಭಾಗ(೧)ರ ಅಡಿಯಲ್ಲಿ ರಾಜ್ಯ ಸರಕಾರವು ಕೌನ್ಸಿಲ್ ಅನ್ನು ರದ್ದುಪಡಿಸಿದಾಗ, ಅದು ಕೂಡಲೇ ತನಗೆ ಅನುಕೂಲವಾದಾಗ ವಿಭಾಗ ೩ರ ಅಡಿಯಲ್ಲಿ ಹೊಸ ಕೌನ್ಸಿಲ್‌ನ್ನು ರಚನೆ ಮಾಡುತ್ತದೆ. ಅದರ ನಂತರ ಉಪವಿಭಾಗ(೧)ರಲ್ಲಿ ಉಲ್ಲೇಖಿಸಿದಂತೆ ಅದರ ಸ್ವತ್ತುಗಳು ಮತ್ತು ಧನವನ್ನು ಹಾಗೆ ರಚಿಸಿದ ಕೌನ್ಸಿಲ್‌ಗೆ ಮರಳಿಸುತ್ತದೆ.

೩. ಈ ಅಧಿನಿಯಮ, ನಿಯಮ ಅಥವಾ ನಿಬಂಧನೆಗಳು ಒಳಗೊಂಡ ಯಾವುದೇ ಅಂಕೆ ತಾಳಿಕೆಯಾಗದಿದ್ದರೆ, ಯಾವುದೇ ಕಾಲದಲ್ಲಿ, ರಾಜ್ಯ ಸರಕಾರಕ್ಕೆ ಕೌನ್ಸಿಲ್ ಅಥವಾ ಬೇರೆ ಯಾವುದೇ ಪ್ರಾಧಿಕಾರ ಯಾವುದೇ ಅಧಿಕಾರವನ್ನು ಚಲಾಯಿಸುವುದಕ್ಕೆ ಇಲ್ಲವೆ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಕಾರ್ಯಮಾಡುವಲ್ಲಿ ನ್ಯಾಯಸಮ್ಮತವಾಗಿ ರಚನೆಗೊಂಡಿಲ್ಲ ಅಥವಾ ನೇಮಕಗೊಂಡಿಲ್ಲವೆಂದು ರಾಜ್ಯ ಸರಕಾರಕ್ಕೆ ತೋರಿಬಂದರೆ, ರಾಜ್ಯ ಸರಕಾರವು ಅಂತಹ ಅಧಿಕಾರ ಅಥವಾ ಕಾರ್ಯವನ್ನು ಚಲಾಯಿಸುವ ಅಥವಾ ಕಾರ್ಯಮಾಡುವ ಅಧಿಕಾರವನ್ನು ಅಂತಹ ವ್ಯಕ್ತಿಗೆ, ಆರು ತಿಂಗಳಿಗಿಂತಲೂ ಹೆಚ್ಚು ಕಾಲಾವಧಿಯಾಗದಂತೆ ಕೊಡುವುದು ರಾಜ್ಯ ಸರಕಾರದ ವಿವೇಚನೆಗೆ ಒಳಪಡುತ್ತದೆ.

**೩೪. ರದ್ದು ಮಾಡುವುದು ಮತ್ತು ಸಂಚಯ:**

ಬಾಂಬೆ ಪ್ರದೇಶದಲ್ಲಿ ಪ್ರಚಲಿತವಿರುವ ಬಾಂಬೆ ಮೆಡಿಕಲ್ ಅಧಿನಿಯಮ, ೧೯೧೨ (ಬಾಂಬೆ ಅಧಿನಿಯಮ ೧೯೧೨ರ VI) ಹೈದ್ರಾಬಾದ ಪ್ರದೇಶದಲ್ಲಿ

ಪ್ರಚಲಿತವಿರುವ ಮೆಡಿಕಲ್ ರಿಜಿಸ್ಟ್ರೇಷನ್ ಅಧಿನಿಯಮ ೧೩೪೮–ಎಫ್ (ಹೈದ್ರಾಬಾದ್ ಅಧಿನಿಯಮ ೧೩೪೮ ಫಸ್ಲಿಯ ೧) ಮದರಾಸು ಪ್ರದೇಶದಲ್ಲಿ ಪ್ರಚಲಿತವಿರುವ ಮದರಾಸು ರಿಜಿಸ್ಟ್ರೇಷನ್ ಅಧಿನಿಯಮ, ೧೯೧೪ (ಮದ್ರಾಸ್ ಅಧಿನಿಯಮ, ೧೯೧೪ರ IV) ಮತ್ತು ಕರ್ನಾಟಕ ಮೆಡಿಕಲ್ ರಿಜಿಸ್ಟ್ರೇಷನ್ ಅಧಿನಿಯಮ, ೧೯೩೧ (ಕರ್ನಾಟಕ ಅಧಿನಿಯಮ, V, ೧೯೩೧) ಕರ್ನಾಟಕದಲ್ಲಿ ಪ್ರಚಲಿತವಿದ್ದು, ಅವುಗಳನ್ನು ಈ ಮೂಲಕ ರದ್ದು ಮಾಡಲಾಗಿದೆ.

ಈ ಅಧಿನಿಯಮ ಕೊಡಮಾಡಿದ ಕರಾರಿನ ಪ್ರಕಾರ ಮೆಡಿಕಲ್ ಕೌನ್ಸಿಲ್ ರಚನೆಯಾಗುವ ಕಾಲದವರೆಗೂ, ಈ ಅಧಿನಿಯಮ ಕಾರ್ಯಾಚರಣೆಗೆ ಬರುವುದಕ್ಕಿಂತ ಮೊದಲು ಕರ್ನಾಟಕ ಮೆಡಿಕಲ್ ಕೌನ್ಸಿಲ್ ಎಂದು ಕಾರ್ಯ ಮಾಡುತ್ತಿದ್ದು, ಅದು ಈ ಅಧಿನಿಯಮದ ಮೂಲಕ ಕೊಡಮಾಡಿದ ಕರಾರಿನಂತೆ ದತ್ತವಾದ ಅಧಿಕಾರ ಮತ್ತು ಕಾರ್ಯವನ್ನು ಮೆಡಿಕಲ್ ಕೌನ್ಸಿಲ್ ನೆರವೇರಿಸುತ್ತದೆ ಮತ್ತು ಮೆಡಿಕಲ್ ಕೌನ್ಸಿಲ್ ಸದಸ್ಯರ ಸ್ಥಳದಲ್ಲಿ ಸಾಂದರ್ಭಿಕವಾಗಿ ತೆರವಾದ ಸ್ಥಳಗಳನ್ನು ಅಂತಹ ಖಾಲಿ ಸ್ಥಳಗಳನ್ನು ಭರ್ತಿಮಾಡುವುದಕ್ಕೆ ಇರುವ ಷರತ್ತುಗಳನ್ವಯ ಮತ್ತು ಅಂತಹ ವಿಷಯಗಳ ಬಗ್ಗೆ ರಾಜ್ಯ ಸರಕಾರ ಪ್ರಕಟಣೆ ಮಾಡುವುದಕ್ಕೆ ಮೊದಲು ಇರುವ ಮಾರ್ಪಾಟುಗಳನ್ನು ಅನುಸರಿಸಬೇಕು.

ಕರ್ನಾಟಕ ಜನರಲ್ ಕಲಂ ಅಧಿನಿಯಮ\೧೮೯(ಕರ್ನಾಟಕ ೧೧೧, ೧೮೯೮)ರ ವಿಭಾಗ ೬ ಅಂತಹ ರದ್ದು ಮಾಡುವ ಪ್ರಕ್ರಿಯೆಗೆ, ಅನ್ವಯವಾಗುತ್ತದೆ ಮತ್ತು ವಿಭಾಗ ೮ ಮತ್ತು ೨೪ರ ಮೇಲೆ ಮಾಡಿದ ಅಧಿನಿಯಮ ಮೇಲ್ಕಂಡ ಅಧಿನಿಯಮ ಷರತ್ತುಗಳನ್ನು ರದ್ದು ಮಾಡುವುದಕ್ಕೆ ಮತ್ತು ಪುನಃ ರೂಢಿಗೆ ತರುವುದಕ್ಕೆ ಅನ್ವಯಿಸುತ್ತದೆ.

**೩೫. ತೊಂದರೆಗಳನ್ನು ತೆಗೆದು ಹಾಕುವ ಅಧಿಕಾರ :**

೧. ಈ ಅಧಿನಿಯಮ ಷರತ್ತುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಏನಾದರೂ ತೊಂದರೆಯಿದ್ದಲ್ಲಿ ಮೊದಲು ರೂಢಿಯಲ್ಲಿದ್ದ ಅಧಿನಿಯಮ ಷರತ್ತುಗಳನ್ನು ಪರಿವರ್ತನೆಯ ಸಂಕ್ರಮಣ ಕಾಲದಲ್ಲಿ ರಾಜ್ಯ ಸರಕಾರವು ಪ್ರಕಟಣೆಯ ಮೂಲಕ ಅಂತಹ ಷರತ್ತುಗಳು ಅಗತ್ಯವೆಂದು ತೋರಿ ಬಂದಾಗ ಅಥವಾ ಯಾವುದೇ ತೊಂದರೆಯನ್ನು ಯಥೋಚಿತವಾಗಿ ನಿವಾರಣೆ ಮಾಡಬಹುದು.

೨. ಉಪವಿಭಾಗ (೧)ರಅಡಿಯಲ್ಲಿ ನೀಡಿದ ಪ್ರತಿಯೊಂದು ಪ್ರಕಟಣೆಯನ್ನು ನೀಡಿದ ಕೂಡಲೇ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಇರಿಸಬೇಕು.

# ಕರ್ನಾಟಕ ವೈದ್ಯಕೀಯ ನೋಂದಣಿ ನಿಯಮಗಳು, ೧೯೬೩

## ಪರಿವಿಡಿ

### ಭಾಗ ೧ ಸಾಮಾನ್ಯ

**ನಿಯಮಗಳು**


೧. ಶಿರೋನಾಮೆ ೩೩

೨. ವ್ಯಾಖ್ಯಾನ ೩೩

(ಎ) ಅಧಿನಿಯಮ

(ಬಿ) ನಮೂನೆ

(ಸಿ) ಸರಕಾರ

(ಸಿಸಿ) ಸದಸ್ಯ

(ಡಿ) ಅಧ್ಯಕ್ಷ

(ಇ) ರಿಜಿಸ್ಟರ್ ಅಥವಾ ವೈದ್ಯಕೀಯ ದಾಖಲೆ

(ಎಫ್) 'ರಿಜಿಸ್ಟ್ರಾರ್'

(ಜಿ) ವಿಭಾಗ


### ಭಾಗ–೨

### ಕೌನ್ಸಿಲ್‌ನ ನೇಮಕಾತಿ


೩. ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ೩೪

೩–ಎ ನಾಮಪತ್ರ ಸಲ್ಲಿಕೆ ಮುಂತಾದವುಗಳಿಗೆ ತಾರೀಖುಗಳ ನಿರ್ಧಾರ :– ೩೪

೩–ಬಿ ಅಭ್ಯರ್ಥಿಯ ನಾಮಪತ್ರ ೩೫

೩–ಸಿ. ನಾಮಪತ್ರ ಕೈ ಸೇರಿದ ನಂತರದ ಕಾರ್ಯ ೩೬

೩–ಡಿ. ನಾಮಪತ್ರ ಪರಿಶೀಲನೆ ೩೬

೩–ಇ. ನಾಮಪತ್ರ ಹಿಂತೆಗೆದುಕೊಳ್ಳುವಿಕೆ ೩೭

೩–ಎಫ್. ಸ್ಪರ್ಧೆ ಮತ್ತು ಸ್ಪರ್ಧೆಯಿಲ್ಲದ ಚುನಾವಣೆಯ ಕಾರ್ಯ ವಿಧಾನ ೩೮

೩–ಜಿ. ಮತದಾನವನ್ನು ಮೆಡಿಕಲ್ ಕೌನ್ಸಿಲ್ ಕಛೇರಿಯಲ್ಲಿ ಮಾಡುವುದು ೩೯

೩–ಹೆಚ್. ಚುನಾವಣೆ ನಡೆಸುವ ವಿಧಾನ ೩೯

೩–ಐ ಮತಗಳ ಎಣಿಕೆ ೪೧

೩–ಜೆ. ನಡವಳಿಯ ದಾಖಲಾತಿ ೪೩

೩–ಕೆ. ಸೀಲ್ ಮಾಡುವುದು ಮತ್ತು ಚುನಾವಣಾ ಪತ್ರಗಳ ಸುಪರ್ದು ೪೩

೩–ಎಲ್. ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಂದ ತಮ್ಮ ಅಧಿಕಾರ ಸ್ವೀಕಾರ ೪೪

೩–ಎಂ ಚುನಾವಣೆ ಬಗ್ಗೆ ತಕರಾರು ೪೪

೩–ಎನ್. ಚುನಾವಣಾ ಅಹವಾಲನ್ನು ಸ್ವೀಕರಿಸಿದ ನಂತರದ ಕಾರ್ಯ ವಿಧಾನ ೪೫

೩–ಒ. ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆಯಾದುದನ್ನು ಅನೂರ್ಜಿತ ಎಂದು ಘೋಷಿಸಲು ಆಧಾರ ೪೫

೩–ಪಿ. ಗೆದ್ದ ಅಭ್ಯರ್ಥಿಯ ಬದಲು ಬೇರೆ ಅಭ್ಯರ್ಥಿಗಳು ಜಯಶಾಲಿಯಾಗಿದ್ದಾರೆ ಎಂದು ಘೋಷಿಸಲು ಆಧಾರ ಅಂಶಗಳು ೪೬

೪ ರಿಜಿಸ್ಟರ್ ಆದ ವೃತ್ತಿಪರ ವೈದ್ಯರಿಂದ ಸದಸ್ಯರ ಆಯ್ಕೆ ಮಾಡಲು ಮತದಾರರ ಪಟ್ಟಿ ೪೭

೫. ವಿಶ್ವವಿದ್ಯಾಲಯಗಳ ಮೆಡಿಸಿನ್ ಫ್ಯಾಕಲ್ಟಿಗಳ ಸದಸ್ಯರ ಆಯ್ಕೆಗಾಗಿ ಮತದಾರರ ಪಟ್ಟಿ. ೪೮

೬. ಸದಸ್ಯರನ್ನು ಆಯ್ಕೆ ಮಾಡುವ ಮೆಡಿಕಲ್ ಕಾಲೇಜುಗಳ ಶಿಕ್ಷಕ ಮತದಾರರ ಪಟ್ಟಿ. ೪೮

೭. ಚುನಾವಣೆಯ ಕಾರ್ಯಕ್ರಮ : ೪೯

೮. ಸದಸ್ಯರೆಂದು ಆಯ್ಕೆ ಮಾಡುವುದಕ್ಕೆ ಬೇಕಾದ ಅರ್ಹತೆ ೫೦
೯. ಅಭ್ಯರ್ಥಿಗಳ ನಾಮಪತ್ರ ೫೦
೧೦ ಠೇವಣಿ ಇಡಬೇಕಾದ ಹಣ ೫೧
೧೧. ನಾಮಪತ್ರಗಳ ಪರಿಶೀಲನೆ ೫೨
೧೨. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು ೫೨
೧೩. ಸ್ವೀಕೃತವಾದ ನಾಮಪತ್ರಗಳ ಪ್ರಕಟಣೆ ೫೩
೧೪. ಮತದಾರರಿಗೆ ಮತಪತ್ರಗಳ ರವಾನೆ ೫೩
೧೫. ಚುನಾವಣಾಧಿಕಾರಿಗೆ ಮತಪತ್ರಗಳನ್ನು ಕಳುಹಿಸಿಕೊಡುವುದು ೫೫
೧೬. ಮತಗಳ ಎಣಿಕೆ ೫೫
೧೭. ಚುನಾವಣೆಯ ಫಲಿತಾಂಶ ಘೋಷಣೆ ೫೮
೧೮. ಚುನಾವಣೆಯ ಪರಿಣಾಮದ ಪ್ರಕಟಣೆ ೫೮
೧೯. ಚುನಾವಣೆ ಬಗ್ಗೆ ವ್ಯಾಜ್ಯ ೫೮
೨೦. ಚುನಾವಣಾ ಅಹವಾಲಿನ ಬಗ್ಗೆ ಸರಕಾರದ ಆದೇಶ ೫೯
೨೧. ಸಾಂದರ್ಭಿಕ ಖಾಲಿ ಹುದ್ದೆ ೫೯

## ಭಾಗ–೩

## ರಿಜಿಸ್ಟ್ರಾರ್ (ಕುಲಸಚಿವ)

೨೨ ರಿಜಿಸ್ಟ್ರಾರ್ ನೋಂದಾಯಿತ ವೈದ್ಯರಾಗಿರುವುದು ೬೨
೨೩. ರಾಜ್ಯ ಮೆಡಿಕಲ್ ರಿಜಿಸ್ಟರ್ ಮತ್ತಿತರ ರಿಜಿಸ್ಟರ್‌ಗಳನ್ನು ರಕ್ಷಿಸುವುದು ೬೨
೨೪. ಕೌನ್ಸಿಲ್ ಸಭೆಗಳಲ್ಲಿ ರಿಜಿಸ್ಟ್ರಾರ್ ಹಾಜರಿರುವುದು ೬೨
೨೫. ಕೌನ್ಸಿಲ್‌ನ ಪತ್ರ ವ್ಯವಹಾರವನ್ನು ರಿಜಿಸ್ಟ್ರಾರ್ ಕೈಕೊಳ್ಳುವುದು ೬೨
೨೬. ರಿಜಿಸ್ಟ್ರಾರ್ ಎಲ್ಲ ಕಾರ್ಯಗಳನ್ನು ಅಧಿನಿಯಮದಡಿಯಲ್ಲಿ ನಿರ್ವಹಿಸುವುದು ೬೨
೨೭. ದಾಖಲೆಗಳ ರಕ್ಷಣೆ ೬೨
೨೮. ಕೌನ್ಸಿಲ್ ಸದಸ್ಯರ ಹೆಸರುಗಳು ಮತ್ತು ಜಾಗ ಖಾಲಿಯಾದುದರ ಮಾಹಿತಿಯ ದಾಖಲೆಯನ್ನಿರಿಸುವುದು ೬೩
೨೯. ಕೌನ್ಸಿಲ್ ಪರವಾಗಿ ಖಾತೆ ತೆರೆಯುವುದು ೬೩

೩೦. ಹಣದ ಜಮೆ ೬೩
೩೧. ಜಮಾ ಮತ್ತು ಖರ್ಚಿನ ಲೆಕ್ಕ ವಿವರ ೬೩
೩೨. ಪ್ರತಿ ವರುಷದ ಲೆಕ್ಕ ಪತ್ರ ತಯಾರಿಕೆ ೬೩
೩೩. ಮುಂಗಡ ಪತ್ರ ೬೩
೩೪. ಮುಂಗಡ ಪತ್ರದ ಪರಿಶೀಲನೆ ೬೪
೩೫. ಬಿಲ್ಲುಗಳ ಪಾವತಿ ೬೪
೩೬. ಹಣದ ದಾಖಲೆ ೬೪
೩೭. ಚೆಕ್‌ಗಳ ಸಹಿ ೬೪
೩೮. ಲೆಕ್ಕ ಪತ್ರ ತಪಾಸಣೆ ೬೪


## ಭಾಗ – ೪

## ವೃತ್ತಿಪರ ವೈದ್ಯರ ನೋಂದಣಿ


೩೯ ವಿಭಾಗ ೧೩ರ ಉಪ ವಿಭಾಗ (೧)ರಅಡಿಯಲ್ಲಿ ವೃತ್ತಿ ಪರ ವೈದ್ಯರ ನೋಂದಣಿ ೬೫
೪೦. ತಾತ್ಕಾಲಿಕವಾಗಿ ನೋಂದಣಿಯಾದ ವೃತ್ತಿಪರ ವೈದ್ಯರ ಪಟ್ಟಿಯನ್ನು ಕಾಪಾಡುವುದು ೬೬
೪೧. ವಿಭಾಗ ೧೩ರ ಅಡಿಯಲ್ಲಿ ರಿಜಿಸ್ಟರ್ ಮಾಡಲು ಬೇಕಾದ ವಿದ್ಯಾರ್ಹತೆ ೬೬
೪೨. ನೋಂದಣಿ ಪ್ರಮಾಣ ಪತ್ರ ೬೬
೪೩. ನೋಂದಣಿಯ ನವೀಕರಣ ೬೭
೪೪. ವಿಳಾಸದ ಬದಲಾವಣೆ ೬೭
೪೫. ರಿಜಿಸ್ಟರ್ ಆದ ವ್ಯಕ್ತಿಗಳ ಸಂಖ್ಯೆಗೆ ಸಂಬಂಧಿಸಿದಂತೆ ಕರ್ನಾಟಕ ಮೆಡಿಕಲ್ ರಿಜಿಸ್ಟರ್‌ನಲ್ಲಿ ನಮೂದಿಸುವುದು ೬೭
೪೬. ರಿಜಿಸ್ಟ್ರಾರರ ನಿರ್ಣಯದ ವಿರುದ್ಧ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೆ ಮನವಿ– ೬೭
೪೭ ಶುಲ್ಕ ೬೮
ಅನುಬಂಧ ೭೦
ಫಾರಂ ಎ, ಬಿ, ಸಿ, ಡಿ, ಇ, ಎಫ್ ೭೧
ಫಾರಂ II ರಿಂದ IV ೭೬

# ಕರ್ನಾಟಕ ಮೆಡಿಕಲ್‌ಕೌನ್ಸಿಲ್ ನೋಂದಣಿ ನಿಯಮಗಳು, ೧೯೬೩

## (ಜಿಎಸ್‌ಆರ್‌ತಿದ್ದುಪಡಿ ಮಾಡಿದಂತೆ ೩೧೬, ತಾರೀಖು ೩೧-೮-೧೯೭೦ ಮತ್ತು ಜಿಎಸ್‌ಆರ್ ೧೭೩ ತಾರೀಖು ೨೧-೬-೧೯೭೯)

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧ (ಕರ್ನಾಟಕ ಅಧಿನಿಯಮ ಸಂಖ್ಯೆ ೧೯೬೧ರ ೩೪)ರ ವಿಭಾಗ ೩೧ ಕೊಡಮಾಡಿರುವ ಅಧಿಕಾರವನ್ನು ಬಳಸಿ, ಕರ್ನಾಟಕ ಸರಕಾರ ಕೆಳಕಂಡ ನಿಯಮಗಳನ್ನು ರೂಪಿಸಿದೆ. ಅದರ ಕರಡನ್ನು ಹಿಂದೆ ಪ್ರಕಟಣೆ ಸಂಖ್ಯೆ ಪಿಎಲ್‌ಎಂ ೨೫೧ ಎಂಡಿಎ ೬೧ ತಾರೀಖು ೨೨ ಮೇ ೧೯೬೩ ಭಾಗ IV ವಿಭಾಗ ೨-ಸಿ(೧)ರ ಕರ್ನಾಟಕ ರಾಜ್ಯ ಪತ್ರ ತಾರೀಖು ೧೪ ಜೂನ್ ೧೯೬೩ರಲ್ಲಿ ಮೇಲ್ಕಂಡ ಅಧಿನಿಯಮದ ವಿಭಾಗ ೩೧ ರ ಉಪವಿಭಾಗ (೧) ಸೂಚಿಸಿದಂತೆ ಪ್ರಕಟಿಸಲಾಗಿದ್ದಿತು-

### ಭಾಗ ೧ ಸಾಮಾನ್ಯ

೧. **ಶಿರೋನಾಮೆಗಳು** - ಈ ನಿಯಮಗಳನ್ನು ಕರ್ನಾಟಕ ಮೆಡಿಕಲ್ ಕೌನ್ಸಿಲ್ ನೋಂದಣಿ ನಿಯಮಗಳು ೧೯೬೩ ಎಂದು ಕರೆಯಬಹುದು.

೨. **ವ್ಯಾಖ್ಯಾನ**- ಬೇರೊಂದು ಸಂದರ್ಭ ಅಪೇಕ್ಷಿಸದಿದ್ದರೆ ನಿಯಮಗಳಲ್ಲಿ

(ಎ) 'ಅಧಿನಿಯಮ' ಎಂದರೆ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧

(ಬಿ) 'ನಮೂನೆ' ಎಂದರೆ ಈ ನಿಯಮಗಳ ಅನುಬಂಧವಾಗಿ ಸೇರಿಸಿದ (ಅರ್ಜಿಯ) ನಮೂನೆಗಳು.

(ಸಿ) 'ಸರಕಾರ' ಎಂದರೆ ಕರ್ನಾಟಕ ಸರಕಾರ

(ಸಿಸಿ) ಸದಸ್ಯ ಎಂದರೆ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಸದಸ್ಯ

(ಡಿ) 'ಅಧ್ಯಕ್ಷ' ಎಂದರೆ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷ

(ಇ) 'ರಿಜಿಸ್ಟರ್' ಅಥವಾ 'ರಾಜ್ಯ ಮೆಡಿಕಲ್ ರಿಜಿಸ್ಟರ್' ಎಂದರೆ ೧೨ರ ವಿಭಾಗ ಅಡಿಯಲ್ಲಿ ಇರಿಸಿದ ದಾಖಲಾತಿ

(ಎಫ್) 'ರಿಜಿಸ್ಟ್ರಾರ್' ಎಂದರೆ ಸೆಕ್ಷನ್ ೧೧ರ ಅಡಿಯಲ್ಲಿ ನೇಮಕ ಮಾಡಿದ ಕುಲಸಚಿವ

(ಜಿ) 'ವಿಭಾಗ' ಎಂದರೆ ಅಧಿನಿಯಮದ ಒಂದು ಭಾಗ

## ಭಾಗ–II

## ಕೌನ್ಸಿಲ್‌ನ ನೇಮಕಾತಿ

**೩. ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ–**

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ, ಚುನಾವಣಾಧಿಕಾರಿಯಾಗುವ ರಿಜಿಸ್ಟ್ರಾರ್‌ರಿಂದ ಮೆಡಿಕಲ್ ಕೌನ್ಸಿಲ್ ಕಛೇರಿಯಲ್ಲಿ ನಡೆಸಲಾಗುವುದು

**೩–ಎ ನಾಮಪತ್ರ ಸಲ್ಲಿಕೆ ಮುಂತಾದವುಗಳಿಗೆ ತಾರೀಖುಗಳ ನಿರ್ಧಾರ:–**

ರಿಜಿಸ್ಟ್ರಾರ್ ಅವರು ಅಧ್ಯಕ್ಷ ಅಥವಾ ಉಪಾಧ್ಯಕ್ಷ–ಯಾವುದಾದರೂ ಸ್ಥಾನಕ್ಕೆ ನೇಮಕ ಮಾಡಲು ಅರ್ಜಿ ನಮೂನೆ 'ಎ'ಯ ಪ್ರಕಟಣೆಯನ್ನು ಮೆಡಿಕಲ್ ಕೌನ್ಸಿಲ್ ಕಛೇರಿಯ ಸೂಚನಾ ಫಲಕದ ಮೇಲೆ ಅಂಟಿಸುತ್ತಾರೆ.

(ಎ) ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದ ನಂತರ ಎಂಟು ದಿನಕ್ಕಿಂತ ಹೆಚ್ಚಿರಬಾರದು

---

೧. ಪ್ರಕಟಣೆ ನಂ. ಪಿ.ಎಲ್‌ಎಂ ೨೫ ಎಂಡಿಸಿ ೬೧ ತಾರೀಖು ೧೯.೮.೧೯೬೩ರಲ್ಲಿ ಉಲ್ಲೇಖಿಸಿದಂತೆ, ಕರ್ನಾಟಕ ರಾಜ್ಯ ಪತ್ರದಲ್ಲಿ ತಾರೀಖು ೨೨–೮–೧೯೬೩ರಲ್ಲಿ ಪ್ರಕಟಿತ.

೨. ಕಲಂ (ಸಿಸಿ) ಯನ್ನು ೩೧೬ ತಾರೀಖು ೩೧–೮–೧೯೭೦ರಲ್ಲಿ ಸೇರಿಸಲಾಗಿದ್ದು ಅದು ೧೦–೯–೧೯೭೦ ರಿಂದ ಚಾಲ್ತಿಗೆ

೩. ೩, ೩–ಎ ಯಿಂದ ೩–ಪಿವರೆಗಿನ ನಿಯಮಗಳನ್ನು ೧೦.೯.೧೯೭೦ರಿಂದ ಚಾಲ್ತಿಗೆ ಬರುವಂತೆ ನಿಯಮ ೩ ಜಿಎಸ್‌ಆರ್ ೩೧೬, ತಾರೀಖು ೩೧.೮.೧೯೭೦ ಬದಲು ಮಾಡಲಾಗಿದೆ.

(ಬಿ) ನಾಮಪತ್ರಗಳ ಪರಿಶೀಲನೆ ದಿನಾಂಕ ನಾಮ ಪತ್ರ ಸಲ್ಲಿಸಿದ ತಾರೀಖಿನ ನಂತರ ಮೂರು ದಿನಗಳಿಗಿಂತ ಹೆಚ್ಚಿರಬಾರದು.

(ಸಿ) ಸದಸ್ಯರ ಮತ ಪಡೆಯಲು ಅಗತ್ಯವಾದರೆ ಆ ತಾರೀಖು ನಾಮಪತ್ರ ಸಲ್ಲಿಕೆಯ ಕೊನೆಯ ದಿನದಿಂದ ಏಳು ದಿನಗಳ ಒಳಗೆ ಇರಬಾರದು.

(೨) ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಕಾಲಾವಧಿ ಮುಗಿದು ಖಾಲಿಯಾದ ಆ ಸ್ಥಾನಕ್ಕೆ ಚುನಾವಣೆ ಕೈಕೊಳ್ಳಬೇಕಾದರೆ, ಉಪ ನಿಯಮ (೧)ರ ಅಡಿಯಲ್ಲಿ ನಿರ್ಗಮಿಸುತ್ತಿರುವ ಅಧ್ಯಕ್ಷ ಅಥವಾ ಉಪಾಧ್ಯಕ್ಷ, ಯಾರೇ ಆದರೂ ಅವರ ಅಧಿಕಾರಾವಧಿ ಮುಗಿಯುವ ಆರು ದಿನ ಮೊದಲು ಪ್ರಕಟಣೆಯನ್ನು ಅಂದು ಅಥವಾ ಬೇಗನೆ ಅನುಕೂಲಕ್ಕೆ ತಕ್ಕಂತೆ ಕೊಡಲಾಗುವುದು. ಹೀಗೆ ಮೇಲ್ಕಂಡ ಉಪನಿಯಮದ ಅಡಿಯಲ್ಲಿ ಚುನಾವಣೆಗೆ ನಿರ್ಧರಿಸುವ ತಾರೀಖು, ನಿರ್ಗಮಿಸುವ ಅಧ್ಯಕ್ಷ ಅಥವಾ ಉಪಾಧ್ಯಕ್ಷ, ಯಾವುದಾದರೂ ಅದು ಅವರ ಅಧಿಕಾರಾವಧಿ ಮುಕ್ತಾಯವಾಗುವ ತಾರೀಖಿನೊಳಗೆ ಹೊಸದಾಗಿ ಚುನಾಯಿತರಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷರು ಅಧಿಕಾರ ಸ್ವೀಕರಿಸುವುದಕ್ಕೆ ಅನುಕೂಲಕರವಾಗಿರುತ್ತದೆ.

(೩) ಸಾವು, ರಾಜೀನಾಮೆ, ಉಚ್ಛಾಟನೆ ಇಲ್ಲವೆ ಬೇರೆ ಕಾರಣ ಗಳಿಂದಾಗಿ ತೆರವಾಗುವ ಅಧ್ಯಕ್ಷ, ಅಥವಾ ಉಪಾಧ್ಯಕ್ಷರ ಸ್ಥಾನವನ್ನು ಭರ್ತಿಮಾಡಲು ನಡೆಸುವ ಚುನಾವಣೆ ಉಪನಿಯಮ (೧)ರ ಅಡಿಯಲ್ಲಿ ಅಂತಹ ಸ್ಥಾನ ತೆರವು ಉಂಟಾದ ನಂತರ ಸಾಧ್ಯವಿದ್ದಷ್ಟು ಬೇಗ ಪ್ರಕಟಣೆಯನ್ನು ಮಾಡಲಾಗುವುದು.

(೪) ಉಪ ನಿಯಮ (೧)ರ ಅಡಿಯಲ್ಲಿ ಪ್ರಕಟವಾದ ಪ್ರಕಟಣೆಯ ಪ್ರತಿಯನ್ನು ಪ್ರತಿಯೊಬ್ಬ ಸದಸ್ಯರಿಗೂ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಲಾಗುವುದು.

(೫) ಉಪ ನಿಯಮ (೧)ರ ಅಡಿಯಲ್ಲಿ ಚುನಾವಣೆ ನಡೆಸಬೇಕಾದರೆ, ಚುನಾವಣೆಯನ್ನು ಮೇಲ್ಕಂಡ ಉಪ ನಿಯಮ (೩)ರಲ್ಲಿ ಉಲ್ಲೇಖಿಸಿದಂತೆ, ಖಾಲಿ ಹುದ್ದೆ ಉಂಟಾದ ತಾರೀಖಿನಿಂದ ನಾಲ್ಕು ವಾರ ಮುಗಿಯುವ ಮೊದಲು ನಡೆಸಲಾಗುವುದು.

**೩–ಬಿ. ಅಭ್ಯರ್ಥಿಯ ನಾಮಪತ್ರ :**

(೧) ಪ್ರತಿಯೊಬ್ಬ ಅಭ್ಯರ್ಥಿ ಫಾರಂ ಬಿ ಯನ್ನು ಭರ್ತಿಮಾಡಿ

ನಾಮಪತ್ರವನ್ನು ಸಲ್ಲಿಸುತ್ತಾನೆ. ನಾಮಕರಣಕ್ಕೆ ಆತನ ಒಪ್ಪಿಗೆಯನ್ನು ಕೊಡುತ್ತಾನೆ. ಅದಕ್ಕೆ ಸೂಚಕ ಮತ್ತು ಅನುಮೋದಕರು ಇರುತ್ತಾರೆ.

(೨) ನಿಯಮ ೩ರ ಉಪ ನಿಯಮ (೧)ರ ಕಲಂ (ಎ) ಅಡಿಯಲ್ಲಿ ನಿಶ್ಚಯಿಸಿದ ತಾರೀಖು ಅಥವಾ ಅದರ ಮೊದಲು ಪ್ರತಿಯೊಬ್ಬ ಅಭ್ಯರ್ಥಿ ಸ್ವತಃ ಇಲ್ಲವೆ ಅವರ ಸೂಚಕ ಅಥವಾ ಅನುಮೊದಕ ಅಪರಾಹ್ನ ೧೧.೦೦ ಘಂಟೆ ಮತ್ತು ಮಧ್ಯಾಹ್ನ ೩.೦೦ ಘಂಟೆ ಮಧ್ಯೆ ನಾಮಪತ್ರವನ್ನು ಪ್ರಕಟಣೆಯಲ್ಲಿ ನಮೂದಿಸಿರುವ ಸ್ಥಳದಲ್ಲಿ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು.

(೩) ನಿಯಮ (೩)ರ ಉಪನಿಯಮ (೧)ರ ಕಲಂ (ಎ) ಅಡಿಯಲ್ಲಿ ನಿರ್ಧರಿಸಿದ ಕೊನೆಯ ದಿನದ ಮಧ್ಯಾಹ್ನ ೩.೦೦ ಘಂಟೆಯೊಳಗೆ ಯಾವುದೇ ನಾಮಪತಪ್ರವನ್ನು ಸಲ್ಲಿಸದಿದ್ದಲ್ಲಿ ಅದನ್ನು ತಿರಸ್ಕರಿಸಲಾಗುವುದು.

(೪) ಯಾವುದೇ ಚುನಾವಣೆಯಲ್ಲಿ ಒಬ್ಬ ಸದಸ್ಯ ಸೂಚಕನಾಗಿ ಇಲ್ಲವೆ ಅನುಮೋದಕನಾಗಿ ಒಂದಕ್ಕಿಂತ ಹೆಚ್ಚು ನಾಮಪತ್ರವನ್ನು ಸಮರ್ಥಿಸಲಾಗದು.

(೫) ಚುನಾವಣೆಗಾಗಿ ಒಂದಕ್ಕಿಂತ ಹೆಚ್ಚು ನಾಮಪತ್ರಗಳನ್ನು ಯಾವುದೇ ಅಭ್ಯರ್ಥಿ ಸಲ್ಲಿಸುವುದಕ್ಕೆ ಈ ನಿಯಮದಲ್ಲಿ ಯಾವುದೇ ಅಡ್ಡಿಯಿಲ್ಲ.

**೩-ಸಿ. ನಾಮಪತ್ರವ ಕೈ ಸೇರಿದ ನಂತರದ ಕಾರ್ಯ :**

ನಾಮಪತ್ರವನ್ನು ನೀಡಿದ ಮೇಲೆ ಚುನಾವಣಾಧಿಕಾರಿಯು

(ಎ) ನಾಮಪತ್ರವನ್ನು ಸಲ್ಲಿಸಿದ ತಾರೀಖು ಮತ್ತು ಸಮಯವನ್ನು ನಮೂದಿಸಿ ಪ್ರಮಾಣಪತ್ರಕ್ಕೆ ಸಹಿ ಮಾಡಿ, ಅನುಕ್ರಮ ಸಂಖ್ಯೆಯನ್ನು ದಾಖಲಿಸುತ್ತಾರೆ.

(ಬಿ) ನಾಮಪತ್ರ ಸಲ್ಲಿಸುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ನಾಮಪತ್ರದ ಪರಿಶೀಲನೆಗೆ ನಿಗದಿಪಡಿಸಿದ ದಿನ, ಕಾಲ ಮತ್ತು ಸ್ಥಳದ ಬಗ್ಗೆ ಸೂಚನೆ ನೀಡುತ್ತಾರೆ.

**೩-ಡಿ. ನಾಮಪತ್ರ ಪರಿಶೀಲನೆ:**

(೧) ನಾಮಪತ್ರಗಳ ಪರಿಶೀಲನೆಯ ಕಾಲದಲ್ಲಿ ಅಭ್ಯರ್ಥಿಗಳು ಮತ್ತು ಪ್ರತಿಯೊಬ್ಬ ಅಭ್ಯರ್ಥಿಯ ಸೂಚಕ ಮತ್ತು ಅನುಮೋದಕ ಅಲ್ಲಿ ಹಾಜರಿರುವುದಕ್ಕೆ ಅವಕಾಶ ಪಡೆದಿರುತ್ತಾರೆ ಮತ್ತು ಚುನಾವಣಾಧಿಕಾರಿಯು ನಿಯಮ ೩-ಬಿ ಮತ್ತು ೩-ಸಿ ಉಲ್ಲೇಖ ಮಾಡಿರುವ ರೀತಿಯಲ್ಲಿ ನಿಗದಿತ ಸಮಯದೊಳಗೆ ಸಲ್ಲಿಸಲಾದ ಎಲ್ಲ ಅಭ್ಯರ್ಥಿಗಳ ನಾಮಪತ್ರಗಳನ್ನು ಅವರು ಪರಿಶೀಲನೆ ಮಾಡುವ ಎಲ್ಲ ಸಮುಚಿತ ಅನುಕೂಲತೆಗಳನ್ನು ಒದಗಿಸಿ ಕೊಡುತ್ತಾರೆ.

(೨) ಅನಂತರ ಚುನಾವಣಾಧಿಕಾರಿಯು ನಾಮಪತ್ರಗಳ ಪರಿಶೀಲನೆ ಮಾಡುತ್ತಾರೆ ಮತ್ತು ಅವುಗಳಲ್ಲಿ ಯಾವುದಕ್ಕಾದರೂ ಮಾಡಿದ ಎಲ್ಲ ಆಕ್ಷೇಪಣೆಗಳ ಬಗ್ಗೆ ನಿರ್ಧಾರ ಕೈಕೊಳ್ಳುತ್ತಾರೆ.

(೩) ಚುನಾವಣಾಧಿಕಾರಿಯು ಅಂತಹ ಅಕ್ಷೇಪಣೆಗಳಿಗೆ ಇಲ್ಲವೆ ತನ್ನದೇ ನಿರ್ಣಯದಂತೆ ಮತ್ತು ಅಗತ್ಯವೆಂದು ತಾನು ಪರಿಗಣಿಸಿದುದಕ್ಕೆ ವಿವರವಾದ ತನಿಖೆ ಮಾಡಿ ಕೆಳಕಾಣಿಸಿದ ಯಾವುದೇ ಆಧಾರದ ಮೇಲೆ ನಾಮಪತ್ರವನ್ನು ತಿರಸ್ಕರಿಸಬಹುದು.

(ಎ) ನಿಯಮ ೩ ರ ಉಪ ನಿಯಮ (೧) ರ ಅಡಿಯಲ್ಲಿ ನಾಮಪತ್ರವನ್ನು ಸಮರ್ಥಿಸುವ ಸೂಚಕ ಅಥವಾ ಅನುಮೋದಕ ಅರ್ಹತೆ ಹೊಂದಿಲ್ಲದಿದ್ದರೆ ಅಥವಾ

(ಬಿ) ಅಭ್ಯರ್ಥಿ, ಸೂಚಕ ಅಥವಾ ಅನುಮೋದಕನ ಸಹಿ ಅಸಲಿಯಲ್ಲವಾಗಿದ್ದರೆ ಇಲ್ಲವೆ ಕುಯುಕ್ತಿಯಿಂದ ಪಡೆದಿದ್ದರೆ, ಅಥವಾ

(ಸಿ) ನಾಮ ಪತ್ರವನ್ನು ಸರಿಯಾಗಿ ಭರ್ತಿ ಮಾಡಿರದಿದ್ದರೆ ಮತ್ತು ಗಣನೀಯ ರೀತಿಯಲ್ಲಿ ದೋಷಪೂರಿತವಾಗಿದ್ದರೆ ಅಥವಾ ಕ್ರಮಬದ್ಧವಾಗಿಲ್ಲದಿದ್ದರೆ ಅಥವಾ

(ಡಿ) ಸೂಚಕ ಇಲ್ಲವೆ ಅನುಮೋದಕ ಬೇರೊಂದು ನಾಮಪತ್ರಕ್ಕೆ ಸೂಚಕ ಇಲ್ಲವೆ ಅನುಮೋದಕನಾಗಿ ಅದೇ ಚುನಾವಣೆಗೆ ಸಮರ್ಥಿಸಿದ ನಾಮಪತ್ರವನ್ನು ಚುನಾವಣಾಧಿಕಾರಿ ಪಡೆದಿದ್ದರೆ

(೪) ನಿಯಮ ೩ ಎ ಉಪ ನಿಯಮ (೧) ಕಲಂ (ಬಿ) ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು, ಕಾರ್ಯಕಲಾಪಕ್ಕೆ ತನ್ನ ನಿಯಂತ್ರಣಕ್ಕೆ ಬಾರದಂತೆ ಭಂಗ ಅಥವಾ ಅಡ್ಡಿಯುಂಟಾಗುವ ಸನ್ನಿವೇಶವನ್ನು ಹೊರತುಪಡಿಸಿ, ಚುನಾವಣಾಧಿಕಾರಿಯು ಪರಿಶೀಲನೆ ಮಾಡುತ್ತಾರೆ.

(೫) ಪ್ರತಿಯೊಂದು ನಾಮಪತ್ರದ ಮೇಲೂ ತಾನು ಸ್ವೀಕರಿಸುವ ಅಥವಾ ತಿರಸ್ಕರಿಸುವುದರ ಬಗ್ಗೆ ತನ್ನ ನಿರ್ಣಯವನ್ನು ದಾಖಲಿಸುತ್ತಾರೆ ಮತ್ತು ನಾಮಪತ್ರ ತಿರಸ್ಕರಿಸಲ್ಪಟ್ಟರೆ ಅದಕ್ಕೆ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಬರಹದ ಮೂಲಕ ದಾಖಲಿಸುತ್ತಾರೆ.

**೩–ಇ. ನಾಮಪತ್ರ ಹಿಂತೆಗೆದುಕೊಳ್ಳುವಿಕೆ–**

(೧) ಯಾವುದೇ ಅಭ್ಯರ್ಥಿ ತನ್ನ ಉಮೇದುವಾರಿಕೆಯನ್ನು ಫಾರಂ'ಸಿ'ಯಲ್ಲಿ ಬರಹದಿಂದ ದಾಖಲಿಸಿ ಹಿಂತೆಗೆದು ಕೊಳ್ಳಬಹುದು. ಅದನ್ನು ನಿಯಮ (೩) ಉಪ ನಿಯಮ

(೧) ಕಲಂ (ಸಿ)ಯ ಅಡಿಯಲ್ಲಿ ಮಧ್ಯಾಹ್ನ ೩ ಘಂಟೆಯೊಳಗೆ ಹಿಂದೆ ನಿಗದಿ ಪಡಿಸಿದ ತಾರೀಖು ಚುನಾವಣಾಧಿಕಾರಿಗೆ ತಾನೇ ಖುದ್ದಾಗಿ ಇಲ್ಲವೇ ತನ್ನ ಪರವಾಗಿ ಉಮೇದುವಾರ ಬರವಣಿಗೆಯಲ್ಲಿ ಅಧಿಕಾರ ನೀಡಿರುವ ಸೂಚಕ ಅಥವಾ ಅನುಮೋದಕ ಸಲ್ಲಿಸಬಹುದು.

(೨) ಉಪನಿಯುಮ (೧)ರ ಅಡಿಯಲ್ಲಿ ನಾಮಪತ್ರವನ್ನು ಹಿಂತೆಗೆದುಕೊಂಡ ಬಗ್ಗೆ ನೋಟಿಸು ನೀಡಿದ ಯಾವುದೇ ಅಭ್ಯರ್ಥಿಯು ಅದನ್ನು ರದ್ದು ಮಾಡುವಂತಿಲ್ಲ.

(೩) ಉಪನಿಯಮ (೧)ರ ಅಡಿಯಲ್ಲಿ ನಾಮಪತ್ರ ಹಿಂತೆಗೆದು ಕೊಂಡಿರುವ ನೋಟಿಸು ದೊರತ ಮೇಲೆ ಚುನಾವಣಾಧಿ ಕಾರಿಯು ಅದನ್ನು ಸಲ್ಲಿಸಿದ ತಾರೀಖು ಮತ್ತು ಸಮಯವನ್ನು ಅದರ ಮೇಲೆ ದಾಖಲಿಸುತ್ತಾನೆ.

**೩–ಎಫ್. ಸ್ಪರ್ಧೆ ಮತ್ತು ಸ್ಪರ್ಧೆಯಿಲ್ಲದ ಚುನಾವಣೆಯ ಕಾರ್ಯವಿಧಾನ:–**

ನಿಯಮ ೩ ಇ – ಉಪನಿಯಮ (೧) ಅಡಿಯಲ್ಲಿ ನಾಮಪತ್ರಗಳನ್ನು ಅವಧಿ ಮುಗಿಯವ ಕಾಲಾವಧಿಯೊಳಗೆ ಹಿಂತೆಗೆದು ಕೊಂಡಲ್ಲಿ.

(ಎ) ಅಲ್ಲಿ ಸಮರ್ಪಕವಾಗಿ ನಾಮನಿರ್ದೇಶನ ಮಾಡಿದ ಒಬ್ಬನೇ ಒಬ್ಬ ಅಭ್ಯರ್ಥಿ ಉಳಿಯಬಹುದು. ಉಪನಿಯಮದಲ್ಲಿ ಸೂಚಿಸಿರುವಂತೆ ತನ್ನ ಹುರಿಯಾಳುತವನ್ನು ಸೂಚಿಸಿದ ರೀತಿ ಮತ್ತು ಸಮಯದೊಳಗೆ ಹಿಂತೆಗೆದುಕೊಂಡಿರುವುದಿಲ್ಲ. ಆಗ ಚುನಾವಣಾಧಿಕಾರಿಯು ಅಂತಹ ಅಭ್ಯರ್ಥಿ ತಾನು ಸ್ಪರ್ಧಿಸಿದ್ದ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾನೆ ಎಂದು ಕೂಡಲೇ ಘೋಷಿಸಬೇಕು.

(ಬಿ) ಹಿಂಪಡೆದುಕೊಳ್ಳದೆ ಸರಿಯಾದ ವಿಧಾನದಲ್ಲಿ ನಾಮನಿರ್ದೇಶನ ಮಾಡಿದ ಅಭ್ಯರ್ಥಿಗಳ ಸಂಖ್ಯೆ, ಒಂದಕ್ಕಿಂತ ಹೆಚ್ಚಿದ್ದರೆ, ಚುನಾವಣಾಧಿಕಾರಿಯು ಫಾರಂ ಡಿ ತಯಾರಿಸಿ ಅದರಲ್ಲಿ ಸಮಂಜಸವಾಗಿ ನಾಮ ನಿರ್ದೇಶನ ಮಾಡಿದ ಅಭ್ಯರ್ಥಿಗಳ ಹೆಸರನ್ನು ಅಕಾರಾತ್ಮವಾಗಿ ನಾಮಪತ್ರದಲ್ಲಿ ಕೊಟ್ಟಿರುವ ರೀತಿಯಲ್ಲಿ ಸಿಂಧುವಾದ ಅಭ್ಯರ್ಥಿಗಳ ಪಟ್ಟಿ ಮಾಡುತ್ತಾರೆ.

ಪಟ್ಟಿಯ ಪ್ರತಿಯನ್ನು ಮೆಡಿಕಲ್ ಕೌನ್ಸಿಲ್ ಕಛೇರಿಯ ಸೂಚನಾ ಫಲಕಕ್ಕೆ ಅಂಟಿಸುತ್ತಾರೆ.

**೩-ಜಿ. ಮತದಾನವನ್ನು ಮೆಡಿಕಲ್ ಕೌನ್ಸಿಲ್ ಕಛೇರಿಯಲ್ಲಿ ಮಾಡುವುದು.**

ಚುನಾವಣೆಗೆ ಸಂಬಂಧಿಸಿದಂತೆ ಸದಸ್ಯರ ಮತದಾನ ಪ್ರಕ್ರಿಯ ಕೈಕೊಳ್ಳುವ ಮೊದಲು, ಸಭೆಯ ತಾರೀಖು ನಿರ್ಧರಿಸಿದ ಐದು ದಿನಕ್ಕೆ ಕಡಿಮೆಯಿಲ್ಲದಂತೆ, ಮೆಡಿಕಲ್ ಕೌನ್ಸಿಲ್ ಕಛೇರಿಯಲ್ಲಿ ಮತದಾನ ನಡೆಯುವ ಮತ್ತು ಸಮಯವನ್ನು ನಿರ್ದಿಷ್ಟಪಡಿಸಿದ ನೋಟಿಸನ್ನು ಪ್ರತಿಯೊಬ್ಬ ಸದಸ್ಯರಿಗೆ ರಿಜಿಸ್ಟರ್ಡ್ ಅಂಚೆಯ ಮುಖಾಂತರ ಕಳುಹಿಸಿ ಕೊಡಲಾಗುವುದು ಮತ್ತು ಅದರ ಪ್ರತಿಯನ್ನು ಮೆಡಿಕಲ್ ಕೌನ್ಸಿಲ್ ಕಛೇರಿಯ ಸೂಚನಾ ಫಲಕದ ಮೇಲೆ ಚುನಾವಣಾಧಿಕಾರಿಗಳು ಪ್ರಕಟಿಸುತ್ತಾರೆ.

**೩-ಹೆಚ್. ಚುನಾವಣೆ ನಡೆಸುವ ವಿಧಾನ –**

ಕೆಳಕಂಡ ವಿಧಾನವನ್ನು ಚುನಾವಣೆ ನಡೆಸುವುದಕ್ಕೆ ಅನುಸರಿಸಲಾಗುತ್ತದೆ, ಅದೆಂದರೆ

(೧) ಫಾರಂ ಡಿ ಯಲ್ಲಿ ಸೇರ್ಪಡೆ ಮಾಡಿದ, ಸಮರ್ಪಕವಾಗಿ ನಾಮ ನಿರ್ದೇಶನ ಮಾಡಿದ ಅಭ್ಯರ್ಥಿಗಳ ಹೆಸರುಗಳನ್ನು ಓದುತ್ತಾರೆ.

(೨) ಮತದಾನಕ್ಕೆ ಸ್ಥಳವೊಂದನ್ನು ನಿಗದಿಮಾಡಿ, ಚುನಾವಣಾಧಿಕಾರಿ ಮತಪೆಟ್ಟಿಗೆಯನ್ನು ಇರಿಸುತ್ತಾರೆ. ಆ ಮತಪೆಟ್ಟಿಗೆಯೊಳಗೆ ಮತ ಪತ್ರಗಳನ್ನು ಹಾಕಬಹುದೇ ವಿನಃ ಪೆಟ್ಟಿಗೆಯನ್ನು ತೆರೆಯದೆ ಮತ ಪತ್ರಗಳನ್ನು ಹೊರತೆಗೆಯದಂತೆ ರೂಪಿಸಲ್ಪಟ್ಟಿರುತ್ತದೆ.

(೩) ಮತದಾನಕ್ಕಿಂತ ಮೊದಲು ಚುನಾವಣಾಧಿಕಾರಿಯು, ಅಲ್ಲಿ ಹಾಜರಿರುವ ಎಲ್ಲ ಸದಸ್ಯರಿಗೆ ಮತಪೆಟ್ಟಿಗೆ ಖಾಲಿಯರುವುದನ್ನು ತೋರಿಸುತ್ತಾರೆ. ಅವರು ಅದು ಖಾಲಿಯಿರುವುದನ್ನು ನೋಡಿದ ನಂತರ ಅದಕ್ಕೆ ಬೀಗ ಹಾಕಿ ಅದನ್ನು ಸೀಲ್ ಮಾಡಲಾಗುತ್ತದೆ. ಆ ಸೀಲನ್ನು ಒಡೆಯದೆ ಮತಪೆಟ್ಟಿಗೆ ತೆರೆಯುವುದು ಅಸಾಧ್ಯವಾಗುತ್ತದೆ.

(೪) ಮತ ಚಲಾಯಿಸುವ ಅಪೇಕ್ಷೆಯುಳ್ಳ ಪ್ರತಿಯೊಬ್ಬ ಮತದಾರನಿಗೆ ಮೆಡಿಕಲ್ ಕೌನ್ಸಿಲ್ ಮೊಹರು ಇರುವ ಮತ್ತು ಚುನಾವಣಾಧಿಕಾರಿ ಸಹಿಯಿರುವ ಮತ ಪತ್ರ, ಫಾರಂ-ಇ ಯನ್ನು ನೀಡಲಾಗುತ್ತದೆ.

ಮತ ಪತ್ರದ ಮೇಲೆ ಸ್ಪರ್ಧಿಸಿರುವ ಎಲ್ಲ ಹುರಿಯಾಳುಗಳ ಹೆಸರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮುದ್ರಿಸಿರುತ್ತದೆ, ಟೈಪು ಮಾಡಿರುತ್ತದೆ ಇಲ್ಲವೆ ಬರೆದಿರುತ್ತದೆ. ಮತ ಪತ್ರವನ್ನು ಸದಸ್ಯನಿಗೆ ಕೊಡುವ ಸಮಯದಲ್ಲಿ ಚುನಾವಣಾಧಿಕಾರಿಯು ಅದರ ಕ್ರಮ ಸಂಖ್ಯೆಯನ್ನು, ಆ ಉದ್ದೇಶಕ್ಕಾಗಿ ಇರಿಸಿರುವ ಸದಸ್ಯರ ಪಟ್ಟಿಯ ಪ್ರತಿಯಲ್ಲಿ ನಮೂದಿಸಿದ ಸದಸ್ಯನ ಹೆಸರಿನ ಮುಂದೆ ದಾಖಲು ಮಾಡುತ್ತಾರೆ.

(೫) ಉಪನಿಯಮ (೪)ರ ಅಡಿಯಲ್ಲಿ ಮತ ಪತ್ರವನ್ನು ಸದಸ್ಯನಿಗೆ ಕೊಟ್ಟ ಮೇಲೆ, ಅದನ್ನು ಪಡೆದು ಮತ ಚಲಾಯಿಸಲು ನಿಗದಿ ಪಡಿಸಿದ ಪ್ರದೇಶಕ್ಕೆ ತೆರಳಿ ತಾನು ಮತ ನೀಡಬೇಕೆಂಬ ಅಭ್ಯರ್ಥಿಗಳ ಹೆಸರಿನ ಮುಂದೆ (X) ಗುರುತನ್ನು ಮಾಡಿ, ಮತಪತ್ರವನ್ನು ತಾನು ಯಾರಿಗೆ ಮತ ಹಾಕಿದ್ದೇನೆ ಎಂಬುದು ಕಾಣದ ರೀತಿಯಲ್ಲಿ ಮಡಿಸಿ, ಅದನ್ನು ಮತಪೆಟ್ಟಿಗೆಯೊಳಕ್ಕೆ ಹಾಕುತ್ತಾನೆ.

(೬) ಮತದಾನ ಮಾಡಿದ ಸದಸ್ಯರು ಮತದಾನವನ್ನು ಇನ್ನೂ ಮಾಡಬೇಕಾಗಿರುವ ಸದಸ್ಯರೊಡನೆ ಸಂಪರ್ಕ ಪಡೆಯದಂತೆ ಚುನಾವಣಾಧಿಕಾರಿಯು ವ್ಯವಸ್ಥೆ ಮಾಡಿರಬೇಕು.

(೭) ಸದಸ್ಯನೇನಾದರೂ ಅನುದ್ದಿಷ್ಟವಾಗಿ ತನ್ನ ಮತಪತ್ರವನ್ನು, ಮತಪತ್ರವಾಗಿ ಬಳಸಲು ಬಾರದಂತೆ ಮಾಡಿದ್ದಲ್ಲಿ, ಅದನ್ನು ಚುನಾವಣಾಧಿಕಾರಿಗೆ ನೀಡಿ, ಆದ ಪ್ರಮಾದದ ಬಗ್ಗೆ ಆತ ಒಪ್ಪುವ ರೀತಿ ಸಮಜಾಯಿಷಿ ನೀಡಿದ್ದಲ್ಲಿ ಮತ್ತೊಂದು ಮತಪತ್ರವನ್ನು ಪಡೆಯಬಹುದು. ಹಾಗೆ ಮರಳಿಸಿದ ಮತ ಪತ್ರವನ್ನು 'ಹಾಳಾದ ರದ್ದು ಮಾಡಿದ' ಎಂದು ಚುನಾವಣಾಧಿ ಕಾರಿಯಿಂದ ಗುರುತಿಸಲ್ಪಡುತ್ತದೆ. ಒಂದು ವೇಳೆ ಮತಪತ್ರವನ್ನು ಪಡೆದ ಸದಸ್ಯ, ಅದನ್ನು ಬಳಸಬಾರದೆಂದು ನಿಶ್ಚಯಿಸಿದರೆ ಅದನ್ನು ಚುನಾವಣಾಧಿಕಾರಿಗೆ ಮರಳಿಸಬೇಕು. ಹಾಗೆ ಹಿಂದಕ್ಕೆ ನೀಡಿದ ಮತಪತ್ರದ ಮೇಲೆ 'ಹಿಂತಿರುಗಿಸಿದ ರದ್ದು ಮಾಡಿದ' ಎಂದು ಚುನಾವಣಾಧಿಕಾರಿ ಗುರುತು ಮಾಡುತ್ತಾರೆ. ಈ ಕಲಮಿನನ್ವಯ ರದ್ದು ಪಡಿಸಿದ ಎಲ್ಲ ಮತಪತ್ರಗಳನ್ನು ಬೇರೆಯಾಗಿ ಒಂದು ಪಾಕೀಟಿನಲ್ಲಿ ಇರಿಸಲಾಗುತ್ತದೆ.

**೩–(i) ಮತಗಳ ಎಣಿಕೆ:**

(೧) ಹಾಜರಿದ್ದ ಎಲ್ಲ ಸದಸ್ಯರು ಮತಚಲಾವಣೆಗೆ ಅಪೇಕ್ಷೆ ಪಟ್ಟು ಮತ ಚಲಾಯಿಸಿದ ಮೇಲೆ ಚುನಾವಣಾಧಿಕಾರಿಯು ಅಲ್ಲಿ ಹಾಜರಿರುವ ಸದಸ್ಯರ ಎದುರಿನಲ್ಲಿ ಮತಪೆಟ್ಟಿಗೆಯನ್ನು ತೆರೆಯುತ್ತಾರೆ. ನಂತರ, ಅಲ್ಲಿಂದ ಹೊರತೆಗೆದ ಮತ ಪತ್ರಗಳನ್ನು ಎಣಿಸಿ, ಅವುಗಳನ್ನು ಪರಿಶೀಲಿಸುತ್ತಾರೆ. ನಂತರ ತನ್ನ ಅಭಿಪ್ರಾಯದ ಪ್ರಕಾರ ಅಸಿಂಧು ಎಂದು ಪರಿಗಣಿಸಿದವುಗಳಿಂದ ಬೇರ್ಪಡಿಸುತ್ತಾರೆ. ಅಸಿಂಧುವೆನಿಸಿದವುಗಳ ಮೇಲೆ 'ತಿರಸ್ಕರಿಸಿದ' ಎಂದು ಬರೆದು ಅದರ ಕಾರಣವನ್ನು ದಾಖಲಿಸುತ್ತಾರೆ. ಸಿಂಧುವಾದ ಎಲ್ಲ ಮತಪತ್ರಗಳನ್ನು ಒಂದು ಬಂಡಲ್ ಮಾಡುತ್ತಾರೆ.

(೨) ಚುನಾವಣಾಧಿಕಾರಿಯು ಮತಪತ್ರವನ್ನು ಕೆಳಕಾಣಿಸಿದ ಕಾರಣಗಳಿಗಾಗಿ ತಿರಸ್ಕರಿಸುತ್ತಾರೆ

(ಎ) ಅದರ ಮೇಲೆ ಯಾವುದೇ ಗುರುತು ಅಥವಾ ಬರವಣಿಗೆಯಿದ್ದು ಅದರಿಂದ ಮತದಾರನ ಗುರುತು ಪತ್ತೆ ಮಾಡಬಹುದು ಅಥವಾ

(ಬಿ) ಅದರ ಮೇಲೆ ಯಾವ ಮತ ನೀಡದಿದ್ದಲ್ಲಿ, ಅಥವಾ

(ಸಿ) ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಮತ ಚಲಾಯಿಸಿದ್ದಲ್ಲಿ, ಅಥವಾ

(ಡಿ) ಯಾವ ಅಭ್ಯರ್ಥಿಗೆ ಮತ ನೀಡಿದ್ದಾನೆ ಎಂಬುದನ್ನು ನಿರ್ಧರಿಸಲು ಅನುಮಾನ ಬರುವಂತೆ ಗುರುತುಮಾಡಿದ್ದರೆ,

(ಇ) ಅದು ಹೆಚ್ಚಿನ ಮತ ಪತ್ರವಾಗಿದ್ದಲ್ಲಿ: ಮತ ಸೂಚಿಸುವ ಗುರುತು ಅಸ್ಪಷ್ಟವಾಗಿದ್ದರೆ ಅಥವಾ ಮತ ನಿರ್ದಿಷ್ಟ ಅಭ್ಯರ್ಥಿಗೆ ಎಂಬುದು ಸ್ಪಷ್ಟವಾಗಿ ಕಾಗದ ಮೇಲೆ ಉದ್ದೇಶಪೂರ್ವಕವಾಗಿ ಗುರುತು ಮೂಡುವಂತೆ ಮಾಡಿದ್ದರೆ, ಮತಪತ್ರವನ್ನು ತಿರಸ್ಕರಿಸಲಾಗದು.

(೩) ನಿಯಮದ ಅಡಿಯಲ್ಲಿ ಯಾವುದೇ ಮತಪತ್ರವನ್ನು ತಿರಸ್ಕರಿಸುವ ಮೊದಲು ಪ್ರತಿಯೊಬ್ಬ ಅಭ್ಯರ್ಥಿಗೂ ಮತಪತ್ರವನ್ನು ವೀಕ್ಷಿಸುವ ಸಮಯಾವಕಾಶವನ್ನು ನೀಡುತ್ತಾರೆ. ಅದರೆ ಅದನ್ನು ಅಥವಾ ಬೇರೆ ಯಾವುದೇ ಮತಪತ್ರವನ್ನು ಅವರು ಮುಟ್ಟುವಂತಿಲ್ಲ.

(೪) ಮತಪತ್ರ ತಿರಸ್ಕರಿಸಲ್ಪಟ್ಟಿರದಿದ್ದರೆ ಅದನ್ನು ಒಂದು ಮತ ಎಂದು ಎಣಿಸಲಾಗುತ್ತದೆ. ಮತ ಎಣಿಕೆ ಮುಗಿದ ನಂತರ ಚುನಾವಣಾಧಿಕಾರಿಯು ಪ್ರತಿಯೊಬ್ಬ ಅಭ್ಯರ್ಥಿ ಪಡೆದ ಒಟ್ಟು ಮತಗಳ ಸಂಖ್ಯೆಯನ್ನು ದಾಖಲಿಸಿ ಅದನ್ನು ಘೋಷಿಸುತ್ತಾರೆ.

(೫) ಚುನಾವಣಾಧಿಕಾರಿ ಅಂತಹ ಘೋಷಣೆ ಮಾಡಿದ ಮೇಲೆ, ತನ್ನದೇ ಆಶಯದಂತೆ ಇಲ್ಲವೆ ಯಾವುದೇ ಅಭ್ಯರ್ಥಿಯ ಕೇಳಿಕೆಯಂತೆ ಮತಗಳ ಎಣಿಕೆಯನ್ನು ಪುನಃ ಮಾಡಬಹುದು. ಚುನಾವಣಾಧಿಕಾರಿ ಅದೇ ಮತಗಳನ್ನು ಒಂದಕ್ಕಿಂತ ಹೆಚ್ಚು ಬಾರಿ ಎಣಿಸಬೇಕೆಂಬುದು ಅನಿವಾರ್ಯ ಎಂದು ಇಲ್ಲಿ ಉಲ್ಲೇಖಿಸಿರುವುದಿಲ್ಲ.

ಉಪನಿಯಮದಡಿ ಮರುಎಣಿಕೆ ಮಾಡಿ ಚುನಾವಣಾಧಿಕಾರಿಯು ಉಪ ನಿಯಮ (೪) ರಲ್ಲಿ ಉಲ್ಲೇಖಿಸಿದ ಪ್ರಕಟಣೆಯನ್ನು ಮರು ಎಣಿಕೆ ಮಾಡಿದ ನಂತರ ಅಗತ್ಯವೆನಿಸಿದ ರೀತಿ ತಿದ್ದುಪಡಿ ಮಾಡಬಹುದು. ತಾನು ಮಾಡಿದ ತಿದ್ದುಪಡಿಯನ್ನು ಘೋಷಿಸಬಹುದು.

(೬) ಉಪ ನಿಯಮ (೪) ಅಥವಾ ಉಪ ನಿಯಮ (೫)ರ ಅಡಿಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೆ ಬಿದ್ದ ಎಲ್ಲ ಮತಗಳನ್ನು ಪ್ರಕಟಿಸಿದ ನಂತರ, ಚುನಾವಣಾಧಿಕಾರಿಯು ಸಿಂಧುವಾದ ಅತಿ ಹೆಚ್ಚು ಮತಗಳನ್ನು ಪಡೆದ ಅಭ್ಯರ್ಥಿಯನ್ನು ಸಮರ್ಪಕವಾಗಿ ಆಯ್ಕೆಯಾಗಿದ್ದಾನೆ ಎಂದು ಘೋಷಿಸುತ್ತಾರೆ.

(೭) ಮತಗಳ ಎಣಿಕೆ ಮುಗಿದ ಮೇಲೆ, ಯಾವುದೇ ಅಭ್ಯರ್ಥಿಗಳ ಮಧ್ಯ ಮತಗಳು ಸಮನಾಗಿ ಬಂದಿರುವುದು ತೋರಿ ಬಂದು, ಅಭ್ಯರ್ಥಿಗಳಲ್ಲಿ ಯಾರಾದರೂ ಒಬ್ಬರಿಗೆ ಒಂದು ಮತ ಸೇರಿದರೆ ಅವರು ಆಯ್ಕೆಯಾಗುತ್ತಾರೆ. ಎಂಬುದನ್ನು ಕಂಡ ಚುನಾವಣಾಧಿಕಾರಿಯು ಕೂಡಲೇ ಅಭ್ಯರ್ಥಿಗಳ ಚೀಟಿ ಹಾಕಿ, ಯಾರ ಹೆಸರಿಗೆ ಅದು ಬರುವುದೋ ಅವರು ಒಂದು ಮತ ಹೆಚ್ಚು ಪಡೆಯುತ್ತಾರೆ ಮತ್ತು ಯಾರ ಕಡೆ ಲಾಟರಿ ಬೀಳುವುದೋ ಆ ಆಭ್ಯರ್ಥಿಯು ಯುಥೋಕ್ತವಾಗಿ ಆಯ್ಕೆಯಾಗಿದ್ದಾರೆ ಎಂದು ನಂತರ ಘೋಷಿಸುತ್ತಾರೆ.

ಚುನಾವಣಾಧಿಕಾರಿಯು ಫಾರಂ–ಎಫ್ ಅನ್ನು ಭರ್ತಿಮಾಡಿ ಆಯ್ಕೆಯಾದವರ ಪಟ್ಟಿಯನ್ನು ಪ್ರಮಾಣೀಕರಿಸುತ್ತಾನೆ.

**೩–ಜೆ. ನಡವಳಿಯ ದಾಖಲಾತಿ**–ಚುನಾವಣೆ ಮುಗಿದ ತಕ್ಷಣ ಚುನಾವಣಾಧಿಕಾರಿಯು

(ಎ) ಚುನಾವಣೆಯ ನಡವಳಿಯ ದಾಖಲೆಯನ್ನು ಸಿದ್ಧಪಡಿಸಿ ಅದಕ್ಕೆ ಸಹಿ ಮಾಡುತ್ತಾರೆ. ಅದರಲ್ಲಿ ಯಾವುದೇ ತಪ್ಪುಗಳನ್ನು ಸರಿಪಡಿಸಿದ್ದರೆ ಅದಕ್ಕೆ ತನ್ನ ಕಿರು ಸಹಿ ಹಾಕಿ ದೃಢೀಕರಿಸುತ್ತಾರೆ. ಅಲ್ಲದೆ ಈ ದಾಖಲೆಗೆ ತಾನೂ ಸಹಿ ಹಾಕುತ್ತೇನೆ ಎಂದು ಯಾವುದೇ ಸದಸ್ಯ ಅಪೇಕ್ಷೆಯನ್ನು ವ್ಯಕ್ತಪಡಿಸಿದರೆ ಅದಕ್ಕೆ ಅವಕಾಶ ಮಾಡಿಕೊಡಬೇಕು.

(ಬಿ) ಸರಕಾರದ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ ಆಯ್ಕೆಯಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹೆಸರುಗಳನ್ನು ರವಾನಿಸಬೇಕು.

**೩–ಕೆ. ಸೀಲ್ ಮಾಡುವುದು ಮತ್ತು ಚುನಾವಣಾ ಪತ್ರಗಳ ಸುಪರ್ದು–**

(೧) ಅನಂತರ ಚುನಾವಣಾಧಿಕಾರಿಯು ಬೇರೆ ಬೇರೆ ಪಾಕೀಟುಗಳಲ್ಲಿ, ಗುರುತು ಮಾಡಿದ ಸದಸ್ಯರ ಪಟ್ಟಿ, ಪ್ರತಿಯೊಬ್ಬ ಸದಸ್ಯರಿಗೂ ಸಂಬಂಧಿಸಿದಂತೆ ಎಣಿಸಿದ ಮತ್ತು ತಿರಸ್ಕರಿಸಿದ ಮತಪತ್ರಗಳನ್ನು ಇರಿಸಿ ಪ್ರತಿಯೊಂದು ಪಾಕೀಟನ್ನು ಮುಚ್ಚಿ ಸೀಲ್ ಮಾಡುತ್ತಾರೆ. ಅನಂತರ ಅವುಗಳಲ್ಲಿರುವ ವಸ್ತು ವಿವರಣೆಯನ್ನು, ಯಾವ ಚುನಾವಣೆಗೆ ಸಂಬಂಧಿಸಿದೆ ಎಂಬುದನ್ನು ಮತ್ತು ಅದರ ತಾರೀಖನ್ನು ಮೇಲೆ ದಾಖಲಿಸುತ್ತಾರೆ.

(೨) ಈ ಪಾಕೀಟುಗಳನ್ನು ತೆರೆಯಕೂಡದು ಮತ್ತು ರಾಜ್ಯ ಸರಕಾರ ಇಲ್ಲವೆ ಸಮರ್ಥ ಅಧಿಕಾರ ಹೊಂದಿದ ನ್ಯಾಯಾಲಯದ ಆಜ್ಞೆಯ ಹೊರತು, ಅವುಗಳನ್ನು ಯಾವುದೇ ವ್ಯಕ್ತಿ ಅಥವಾ ಅಧಿಕಾರಶಾಹಿ ಪರಿಶೀಲಿಸುವಂತಿಲ್ಲ ಮತ್ತು ಹಾಜರು ಪಡಿಸುವಂತಿಲ್ಲ.

(೩) ಪಾಕೀಟುಗಳನ್ನು ಚುನಾವಣಾಧಿಕಾರಿಯು ತನ್ನ ಕಛೇರಿಯಲ್ಲಿ ಭದ್ರವಾಗಿ ತನ್ನ ಸುಪರ್ದಿನಲ್ಲಿ ಚುನಾವಣೆಯ ಪರಿಣಾಮ ಘೋಷಣೆಯಾದ ದಿನದಿಂದ ಒಂದು ವರುಷ ಕಾಲ ಇರಿಸಿಕೊಳ್ಳುತ್ತಾರೆ. ಅನಂತರ ರಾಜ್ಯ ಸರಕಾರ ಅಥವಾ ಸಮರ್ಥ ಅಧಿಕಾರ ಹೊಂದಿದ ಕೋರ್ಟಿನಿಂದ ಅವುಗಳ ನಾಶ ಮಾಡುವ ಬಗ್ಗೆ ಪ್ರತಿಕೂಲ ನಿರ್ದೇಶನ ಬಾರದಿದ್ದರೆ ಅವುಗಳನ್ನು ನಾಶ ಮಾಡಬಹುದು.

**೩–ಎಲ್. ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಂದ ತಮ್ಮ ಅಧಿಕಾರ ಸ್ವೀಕಾರ–**

ಚುನಾಯಿತ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಅಧಿಕಾರ ಅವಧಿ ಮುಗಿದು ಹೋಗಿದ್ದಲ್ಲಿ ಇಲ್ಲವೆ ಇತರ ಸನ್ನಿವೇಶಗಳಲ್ಲಿ, ನಿಯಮದ ಅಡಿಯಲ್ಲಿ ಆಯ್ಕೆಯಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ತಮ್ಮ ಕಾರ್ಯಭಾರ ನಿಭಾಯಿಸಲು ಕೂಡಲೇ ಪ್ರಾರಂಭಿಸುತ್ತಾರೆ.

**೩–ಎಂ ಚುನಾವಣೆ ಬಗ್ಗೆ ತಕರಾರು –**

(೧) ಸದಸ್ಯನೊಬ್ಬನ ಚುನಾವಣೆಯ ಸಿಂಧುತ್ವನ್ನು ಪ್ರಶ್ನಿಸಿ ಆ ಚುನಾವಣೆಯ ಯಾವುದೇ ಅಭ್ಯರ್ಥಿಯು ರಾಜ್ಯ ಸರಕಾರಕ್ಕೆ ಅಹವಾಲು ಸಲ್ಲಿಸಬಹುದು. ಇದನ್ನು ರಾಜ್ಯ ಸರಕಾರ ತನ್ನ ಅಧಿಕೃತ ರಾಜ್ಯ ಪತ್ರದಲ್ಲಿ ಚುನಾವಣಾ ಪರಿಣಾಮ ಪ್ರಕಟವಾದ ದಿನದಿಂದ ಹದಿನೈದು ದಿನಗಳಲ್ಲಿ ಮಾಡಬಹುದು.

(೨) ಉಪನಿಯಮ (೧)ರ ಅಡಿಯಲ್ಲಿ ನೀಡುವ ಪ್ರತಿಯೊಂದು ಅಹವಾಲಿನಲ್ಲಿ ನಮೂದಿಸಿದ ಎಲ್ಲ ಪ್ರತಿವಾದಿಗಳ ಸಂಖ್ಯೆಗಳಿಗುಣ ವಾಗಿ ಪ್ರತಿಗಳನ್ನು ಲಗತ್ತಿಸಿರಬೇಕು. ಅಂತಹ ಪ್ರತಿಯೊಂದು ಪ್ರತಿಯು ಅಹವಾಲಿನ ನೈಜ ಪ್ರತಿಯೆಂದು ಅರ್ಜಿದಾರ ಸಹಿ ಮಾಡಿ ದೃಢೀಕರಿಸಿರಬೇಕು.

(೩) ಅರ್ಜಿದಾರ ತನ್ನ ಅಹವಾಲಿಗೆ ಪ್ರತಿವಾದಿಯಾಗಿ ಸೇರಿಕೊಳ್ಳು ತ್ತಾನೆ. ಆಗ ಅಲ್ಲಿ ಅರ್ಜಿದಾರ ಈ ಚುನಾಯಿತ ಅಭ್ಯರ್ಥಿಯ ಚುನಾವಣೆ ಅಸಿಂಧು ಎಂದು ಘೋಷಿಸಬೇಕೆಂದು ಕೇಳುವು ದಲ್ಲದೆ, ತಾನು ಅಥವಾ ಬೇರೆ ಅಭ್ಯರ್ಥಿಗಳು ಸಮರ್ಪಕವಾಗಿ ಆಯ್ಕೆಯಾಗಿದ್ದಾರೆ, ಅರ್ಜಿದಾರನ ಹೊರತಾಗಿ ಸ್ಪರ್ಧಿಸಿದ ಉಳಿದೆಲ್ಲ ಅಭ್ಯರ್ಥಿಗಳು, ಅಂತಹ ಘೋಷಣೆಯಾಗಬೇಕೆಂದು ಹಕ್ಕು ಸಾಧಿಸದಿದ್ದಲ್ಲಿ, ತಾನು ಚುನಾಯಿತ ಅಭ್ಯರ್ಥಿ ಎಂದು ಘೋಷಿಸಬೇಕೆಂದು ಕೇಳಿಕೊಂಡಿರುತ್ತಾನೆ.

(೪) ಉಪ ನಿಯಮ (೧)ರ ಅಡಿಯಲ್ಲಿ ಅಹವಾಲು –

(ಎ) ಅರ್ಜಿದಾರ ನಂಬಿರುವ ಆಧಾರಗಳ ಮೇಲೆ ಸಿದ್ಧ ಮಾಡಿದ ಸಾಕ್ಷಾಧಾರಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರಬೇಕು.

(ಬಿ) ಅದನ್ನು ಅರ್ಜಿದಾರ ಸಹಿ ಮಾಡಿರಬೇಕು ಮತ್ತು ಸಿವಿಲ್

ಪ್ರೊಸೀಜರ್ ಕೋಡ್ ೧೯೦೮ (ಸೆಂಟ್ರಲ್ ಅಧಿನಿಯಮ V, ೧೯೦೮) ರಲ್ಲಿ ಬೇಡಿಕೆಯ ತಪಾಸಣೆ ಬಗ್ಗೆ ಸೂಚಿಸಿರುವ ರೀತಿಯಲ್ಲಿ ಪರಿಶೀಲಿಸಿರಬೇಕು.

(ಸಿ) ಅರ್ಜಿದಾರ ಅಹವಾಲಿಗೆ ಲಗತ್ತಿಸಿದ ತಪಸೀಲು ಅಥವಾ ಅನುಬಂಧಗಳನ್ನು ಕೂಡಾ ಸಹಿ ಮಾಡಬೇಕು ಮತ್ತು ಅಹವಾಲಿನಂತೆಯೇ ಅದನ್ನು ಪರಿಶೀಲಿಸಿರಬೇಕು.

(೫) ಕೆಳಕಂಡ ಯಾವುದೇ ಘೋಷಣೆಯ ಹಕ್ಕು ಸಾಧಿಸಬಹುದು.

(ಎ) ಆಯ್ಕೆಯಾದ ಅಭ್ಯರ್ಥಿಯ ಚುನಾವಣೆ ಅನೂರ್ಜಿತ

(ಬಿ) ಆಯ್ಕೆಯಾದ ಅಭ್ಯರ್ಥಿಯ ಆಯ್ಕೆ ಅನೂರ್ಜಿತ ಮತ್ತು ತಾನು ಸ್ವತಃ ಅಥವಾ ಇತರ ಅಭ್ಯರ್ಥಿ ಸಮರ್ಪಕವಾಗಿ ಆಯ್ಕೆಯಾಗಿದ್ದಾರೆ.

**೩–ಎನ್. ಚುನಾವಣಾ ಅಹವಾಲನ್ನು ಸ್ವೀಕರಿಸಿದ ನಂತರದ ಕಾರ್ಯವಿಧಾನ–**

ಚುನಾವಣಾ ಅಹವಾಲು ದೊರೆತ ಮೇಲೆ ರಾಜ್ಯ ಸರಕಾರವು ದಾಖಲೆಗಳನ್ನು ನೀಡಲು ಕೇಳಿದ ಮೇಲೆ ಮತ್ತು ತನಗೆ ಸಮಯೋಚಿತವೆನಿಸಿದ ರೀತಿಯಲ್ಲಿ ವಿಚಾರಣೆ ಮಾಡಿದ ಮೇಲೆ ಮತ್ತು ಎರಡೂ ಪಕ್ಷಗಳಿಗೆ ವಾದಕ್ಕೆ ಅವಕಾಶ ಮಾಡಿಕೊಟ್ಟು, ಅದನ್ನು ಆಲಿಸಿದ ಮೇಲೆ ಆದೇಶವನ್ನು ಕೆಳಕಂಡಂತೆ ನೀಡುವುದು.

(ಎ) ಅಹವಾಲನ್ನು ತಳ್ಳಿ ಹಾಕಬಹುದು ಅಥವಾ

(ಬಿ) ಆಯ್ಕೆಯಾದ ಅಭ್ಯರ್ಥಿ ಅನೂರ್ಜಿತ ಎಂದು ಘೋಷಿಸ ಬಹುದು

(ಸಿ) ಆಯ್ಕೆಯಾದ ಅಭ್ಯರ್ಥಿಯ ಆಯ್ಕೆ ಅನೂರ್ಜಿತ ಮತ್ತು ಅರ್ಜಿದಾರ ಇಲ್ಲವೆ ಯಾವುದೇ ಇತರ ಅಭ್ಯರ್ಥಿ ಸರಿಯಾಗಿ ಆಯ್ಕೆಯಾಗಿದ್ದಾರೆ.

**೩–ಒ. ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆಯಾದುದನ್ನು ಅನೂರ್ಜಿತ ಎಂದು ಘೋಷಿಸಲು ಆಧಾರ–**

ರಾಜ್ಯ ಸರಕಾರದ ಅಭಿಪ್ರಾಯದಲ್ಲಿ

(ಎ) ಚುನಾವಣೆಯ ಪರಿಣಾಮ ವಸ್ತುಶಃ ಪ್ರಭಾವಿತವಾಗಿದೆ–

i) ಮತವನ್ನು ತಿರಸ್ಕೃತವೆಂದು ಅಸಮರ್ಪಕವಾಗಿ ಸ್ವೀಕರಿಸುವುದು ಅಥವಾ

ii) ಅಧಿನಿಯಮ ಕೊಡಮಾಡಿರುವ ಅಥವಾ ಯಾವುದೇ ಒಂದು ನಿಯಮ ಕೊಡಮಾಡಿರುವ ಕಾರ್ಯ ವಿಧಾನವನ್ನು ಸರಿಯಾಗಿ ಅನುವರ್ತನೆ ಮಾಡದಿರುವುದು.

(ಬಿ) ಯಾವುದೇ ಹುರಿಯಾಳುವಿನ ನಾಮಪತ್ರವನ್ನು ತಪ್ಪಾಗಿ ವಜಾ ಮಾಡಿರುವುದು ಅಥವಾ ಗೆದ್ದ ಅಭ್ಯರ್ಥಿಯ ನಾಮಪತ್ರವನ್ನು ಅಥವಾ ತನ್ನ ನಾಮಪತ್ರವನ್ನು ವಾಪಸು ತೆಗೆದುಕೊಂಡಿರದ ಯಾವುದೇ ಅಭ್ಯರ್ಥಿಯ ನಾಮ ಪತ್ರವನ್ನು ತಪ್ಪಾಗಿ ಸ್ವೀಕರಿಸಿರುವುದು. ರಾಜ್ಯ ಸರಕಾರ ಆಯ್ಕೆಯಾದ ಅಭ್ಯರ್ಥಿಯ ಚುನಾವಣೆ ಅನೂರ್ಜಿತವೆಂದು ಘೋಷಿಸುತ್ತದೆ.

**೩–ಪಿ. ಗೆದ್ದ ಅಭ್ಯರ್ಥಿಯ ಬದಲು ಬೇರೆ ಅಭ್ಯರ್ಥಿಗಳು ಜಯಶಾಲಿ ಯಾಗಿದ್ದಾರೆ ಎಂದು ಘೋಷಿಸಲು ಆಧಾರ ಅಂಶಗಳು :**

ಯಾರೇ ಒಬ್ಬ ವ್ಯಕ್ತಿ ಚುನಾವಣೆ ಅಹವಾಲನ್ನು ನೀಡಿ, ಜೊತೆಯಲ್ಲಿ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯ ಪ್ರಶ್ನೆಯ ಬಗ್ಗೆ ಗಮನ ಸೆಳೆದು ತಾನು ಸ್ವತಃ ಇಲ್ಲವೆ ಬೇರೆ ಇತರ ಹುರಿಯಾಳುಗಳು ಸಮರ್ಪಕವಾಗಿ ಆಯ್ಕೆಯಾಗಿದ್ದಾರೆ ಎಂದು ಹಕ್ಕು ಮಂಡಿಸಿದರೆ ಮತ್ತು ರಾಜ್ಯ ಸರಕಾರ ವಾದಿ ಅಥವಾ ಇತರ ಹುರಿಯಾಳುಗಳು ಸಿಂಧುವಾದ ಹೆಚ್ಚಿನ ಮತಗಳನ್ನು ಪಡೆದಿದ್ದಾರೆ ಎಂಬ ಅಭಿಪ್ರಾಯಕ್ಕೆ ಬಂದರೆ, ರಾಜ್ಯ ಸರಕಾರವು ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯ ಆಯ್ಕೆ ಅನೂರ್ಜಿತವೆಂದು ಘೋಷಿಸಿ, ವಾದಿ ಅಥವಾ ಅಂತಹ ಅಭ್ಯರ್ಥಿಗಳು ಯಾರೇ ಆಗಿರಲಿ ಅವರು ಸರಿಯಾದ ರೀತಿಯಲ್ಲಿ ಗೆದ್ದಿದ್ದಾರೆ ಎಂದು ಘೋಷಿಸಬಹುದು.

ಒಂದು ವೇಳೆ ಪ್ರತಿಯೊಬ್ಬ ಅಭ್ಯರ್ಥಿಯ ಆಯ್ಕೆ ಅನೂರ್ಜಿತ ವಾಗುತ್ತದೆಂದು ದೃಢಪಟ್ಟಲ್ಲಿ, ಆತ ಆಯ್ಕೆಯಾದ ಅಭ್ಯರ್ಥಿಯಾಗಿದ್ದು ಮತ್ತು ಅಹವಾಲನ್ನು ನೀಡಿ ತನ್ನ ಚುನಾವಣೆಯನ್ನು ಪ್ರಶ್ನಿಸಿದ್ದರೆ ಆಗ ವಾದಿ ಅಥವಾ ಅಂತಹ ಇತರ ಅಭ್ಯರ್ಥಿಗಳು ಸರಿಯಾದ ರೀತಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಲಾಗುವುದಿಲ್ಲ.

(೪) ರಿಜಿಸ್ಟರ್ ಆದ ವೃತ್ತಿಪರ ವೈದ್ಯರಿಂದ ಸದಸ್ಯರ ಆಯ್ಕೆ ಮಾಡಲು ಮತದಾರರ ಪಟ್ಟಿ –

(೧) ನಿಯಮ ೩೮ ಉಪ ನಿಯಮದ ಕಲಂ (ಎ)ಯಲ್ಲಿ ಉಲ್ಲೇಖಿಸಿದಂತೆ, ಅಧಿನಿಯಮದ ಅಡಿಯಲ್ಲಿ ರಿಜಿಸ್ಟರ್ ಆದ ವೃತ್ತಿಪರ ವೈದ್ಯರಿಂದ ಸದಸ್ಯರನ್ನು ಆಯ್ಕೆ ಮಾಡುವಾಗ ರಿಜಿಸ್ಟ್ರಾರ್ ಚುನಾವಣಾಧಿಕಾರಿಯಾಗಿರುತ್ತಾರೆ. ಚುನಾವಣೆ ನಡೆಯುವ ವರ್ಷದಲ್ಲಿ ನಿಯಮ ೨೬,ಉಪ ನಿಯಮ (೧)ರಅಡಿಯಲ್ಲಿ ಪ್ರಕಟಗೊಂಡ ವೃತ್ತಿಪರ ವೈದ್ಯರ ಪಟ್ಟಿ, ವಿಭಾಗ (೩) ಉಪವಿಭಾಗ (೨) ಕಲಂ (ಎ) ಅಡಿಯಲ್ಲಿ ಚುನಾವಣೆಗಾಗಿ ಸಿದ್ಧಪಡಿಸಿದ ಪೂರ್ವಭಾವಿ ಮತದಾರರ ಪಟ್ಟಿ ಎನಿಸುತ್ತದೆ.

(೨) ಚುನಾವಣಾಧಿಕಾರಿಯು ೧(XXX) ಅಧಿಕೃತ ಗೆಜೆಟ್‌ನಲ್ಲಿ ಯಾವ ರೀತಿ ಮತ್ತು ಕಾಲಾವಧಿಯೊಳಗೆ ತಮ್ಮ ಹಕ್ಕನ್ನು ಮತ್ತು ಅಕ್ಷೇಪಣೆಗಳನ್ನು ನೀಡಬಹುದೆಂದು ವಿವರವಾಗಿ ಅಧಿಕೃತ ಗೆಜೆಟನಲ್ಲಿ ಪ್ರಕಟಿಸಬೇಕು. ಇದು ಮತದಾರರ ಪೂರ್ವಭಾವಿ ಪಟ್ಟಿಯಲ್ಲಿ ಸೇರ್ಪಡೆಗೆ ಇಲ್ಲವೆ ಬಿಟ್ಟು ಬಿಡುವುದಕ್ಕೆ ಸಂಬಂಧಿಸಿದೆ.

೩) ಹಕ್ಕು ಕೋರಿಕೆ ಮತ್ತು ಅಕ್ಷೇಪಣೆ ತಲುಪಿದ ಮೇಲೆ ನಿಗದಿ ಪಡಿಸಿದ ದಿನ ಅಥವಾ ಅದರ ನಂತರ ಚುನಾವಣಾಧಿಕಾರಿಯು ಪ್ರತಿಯೊಂದು ಹಕ್ಕು ಕೋರಿಕೆ ಅಥವಾ ಅಕ್ಷೇಪಣೆಗೆ ಬರಹದಲ್ಲಿ ಆದೇಶ ನೀಡುತ್ತಾರೆ ಮತ್ತು ಪೂರ್ವಭಾವಿ ಮತದಾರರ ಪಟ್ಟಿಯನ್ನು ಅಂತಹ ಆದೇಶಗಳಿಗನುಗುಣವಾಗಿ ಪರಿಷ್ಕರಿಸುತ್ತಾರೆ. ಹಾಗೆ ಪರಿಷ್ಕರಿಸಿದ ಮತದಾರ ಪಟ್ಟಿಯು ಅಂತಿಮ ಮತದಾರರ ಪಟ್ಟಿ ಎನಿಸುತ್ತದೆ. (ಪರಿಷ್ಕರಣೆ ಮಾಡುವ ಕಾಲದಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿ ಇಲ್ಲವೆ ಅದರಿಂದ ತೆಗೆದು ಹಾಕಿ ತಯಾರಿಸಿದ ಮತದಾರರ ಪಟ್ಟಿಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಮಾಡಲಾಗುತ್ತದೆ)

---

೧) ಉಪನಿಯಮ (೧)ನ್ನು ಜಿಎಸ್‌ಆರ್ ೧೭೩, ದಿನಾಂಕ ೭.೬.೧೯೭೯ ೨೧.೬.೧೯೭೯ರಿಂದ ಕಾರ್ಯರೂಪಕ್ಕೆ ಬರುತ್ತದೆ ಎಂಬುದನ್ನು ಬದಲಿಯಾಗಿ ಸೇರ್ಪಡೆ ಮಾಡಲಾಗಿದೆ.

೨) ಜಿಎಸ್‌ಆರ್ ೧೭೩ ದಿನಾಂಕ ೭.೬.೧೯೭೯, ಕಾರ್ಯರೂಪಕ್ಕೆ ೨೧.೬.೧೯೭೯ ರಿಂದ ಬರುವಂತೆ 'ಏಕಕಾಲದಲ್ಲಿ' ಎಂಬ ಶಬ್ಧವನ್ನು ತೆಗೆದುಹಾಕಲಾಗಿದೆ.

**೫)	ವಿಶ್ವವಿದ್ಯಾಲಯಗಳ ಮೆಡಿಸಿನ್ ಫ್ಯಾಕಲ್ಟಿಗಳ ಸದಸ್ಯರ ಆಯ್ಕೆಗಾಗಿ ಮತದಾರರ ಪಟ್ಟಿ.**

(೧) ವಿಶ್ವವಿದ್ಯಾಲಯಗಳ ಮೆಡಿಕಲ್ ಫ್ಯಾಕಲ್ಟಿಯ ಸದಸ್ಯರಿಂದ, ವಿಭಾಗ ೩ ಉಪವಿಭಾಗ (೨) ಕಲಂ (ಬಿ) ಯಲ್ಲಿ ಉಲ್ಲೇಖಿಸಿದಂತೆ ಸದಸ್ಯರನ್ನು ಆಯ್ಕೆ ಮಾಡುವಾಗ, ಚುನಾವಣಾಧಿಕಾರಿಯಾದ ರಿಜಿಸ್ಟ್ರಾರ್, ಕರ್ನಾಟಕ ರಾಜ್ಯದಲ್ಲಿ ಪ್ರಚಲಿತ ಕಾನೂನಿನ ಪ್ರಕಾರ ಸ್ಥಾಪನೆಗೊಂಡ ವಿಶ್ವವಿದ್ಯಾಲಯುಗಳ ಕುಲಸಚಿವರಿಗೆ ಗೊತ್ತುಪಡಿಸಿದ ದಿನಾಂಕದಂದು ವಿಶ್ವವಿದ್ಯಾಲಯದ ಮೆಡಿಕಲ್ ಫ್ಯಾಕಲ್ಟಿಗಳಲ್ಲಿನ ಶಿಕ್ಷಕರ ಹೆಸರನ್ನು ತಿಳಿಸಲು ಪತ್ರ ಬರೆಯುತ್ತಾರೆ. ಅಂತಹ ಪಟ್ಟಿಯಲ್ಲಿ ಸದಸ್ಯರ ಹೆಸರುಗಳನ್ನು ಅಕಾರಾತ್ಮಕವಾಗಿ ನಮೂದಿಸಲಾಗುತ್ತದೆ. ಅಂತಹ ಪಟ್ಟಿಯು ಸದಸ್ಯರ ಚುನಾವಣೆಗಾಗಿ ವಿಭಾಗ (೩), ಉಪವಿಭಾಗ(೨) ಕಲಂ (ಬಿ) ಅಡಿಯಲ್ಲಿ ತಯಾರಿಸಲಾದ ಪೂರ್ವಭಾವಿ ಮತದಾರರ ಪಟ್ಟಿಯಾಗಿ ಪರಿಣಮಿಸುತ್ತದೆ. ಅದನ್ನು ಅಧಿಕೃತ ಗೆಜೆಟ್‌ನಲ್ಲಿ ೩(XXX) ಪ್ರಕಟಪಡಿಸಲಾಗುತ್ತದೆ.

(೨) ನಿಯಮ ೪ ರ ಉಪನಿಯಮಗಳು (೨) ಮತ್ತು (೩) ರಲ್ಲಿ ಸೂಚಿಸಿದ ಕಾರ್ಯವಿಧಾನವು ಮ್ಯೂಟಾ ಮುಟಂಡಿಸ್ (ಅಗತ್ಯ ಬದಲಾವಣೆ) ಎನಿಸಿ ಉಪ ನಿಯಮ (೨)ರ ಅಡಿಯಲ್ಲಿ ಪ್ರಕಟ ಪಡಿಸಿದ ಪೂರ್ವಭಾವಿ ಮತದಾರರ ಪಟ್ಟಿ ಎನಿಸುತ್ತದೆ.

**೬. ಸದಸ್ಯರನ್ನು ಆಯ್ಕೆ ಮಾಡುವ ಮೆಡಿಕಲ್ ಕಾಲೇಜುಗಳ ಶಿಕ್ಷಕ ಮತದಾರರ ಪಟ್ಟಿ.**

(೧) ರಾಜ್ಯದಲ್ಲಿನ ಮೆಡಿಕಲ್ ಕಾಲೇಜುಗಳ ಶಿಕ್ಷಕ ವೃಂದವು ವಿಭಾಗ ೩ರ ಉಪವಿಭಾಗ(೨)ರ ಕಲಂ ಪ್ರಕಾರ, ಸದಸ್ಯರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ, ಚುನಾವಣಾಧಿಕಾರಿಯಾಗಿರುವ ರಿಜಿಸ್ಟ್ರಾರ್, ಕರ್ನಾಟಕ ರಾಜ್ಯದ ಎಲ್ಲ ಮೆಡಿಕಲ್ ಕಾಲೇಜುಗಳ ಪ್ರಿನ್ಸಿಪಾಲರಿಗೆ ಕಾಲೇಜುಗಳಲ್ಲಿ ಶಿಕ್ಷಕರಾಗಿ ಕಾರ್ಯ ಮಾಡುತ್ತಿರುವ ಎಲ್ಲ ವೃತ್ತಿ ಪರ ವೈದ್ಯರ ಹೆಸರುಗಳ ಪಟ್ಟಿಯನ್ನು ಕಳುಹಿಸಿಕೊಡಲು ಪತ್ರ ಬರೆಯುತ್ತಾರೆ. ಹಾಗೆ ಸೇರ್ಪಡೆ ಮಾಡುವ ಹೆಸರುಗಳು ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು

ರಿಜಿಸ್ಟರ್ ಆಗಿರಬೇಕು. ಅಂತಹ ಪಟ್ಟಿ ಬಂದ ಮೇಲೆ ಆ ಸದಸ್ಯರ ಹೆಸರುಗಳನ್ನು ಅಕಾರಾದಿಯಾಗಿ ಬರುವಂತೆ ತಯಾರಿಸಲಾಗುತ್ತದೆ. ಅಂತಹ ಪಟ್ಟಿಯು ವಿಭಾಗ ೩ರ ಉಪವಿಭಾಗ(೨)ರ ಕಲಂ (ಸಿ) ಅಡಿಯಲ್ಲಿ, ಚುನಾವಣೆಗಾಗಿ ತಯಾರಿಸಿದ ಪೂರ್ವಭಾವಿ ಮತದಾರ ಪಟ್ಟಿಯೆನಿಸುತ್ತದೆ. ಅದನ್ನು ಅಧಿಕೃತ ಗೆಜೆಟನಲ್ಲಿ ಪ್ರಕಟಿಸಲಾಗುತ್ತದೆ ೪(XXX).

(೨) ನಿಯಮ ೪ರ ಉಪನಿಯಮಗಳು (೨) ಮತ್ತು (೩)ರಲ್ಲಿ ಸೂಚಿಸಿದಂತೆ ಕಾರ್ಯವಿಧಾನವು ಮ್ಯುಟಾ ಮುಟಂಡಿಸ್ (ಅಗತ್ಯ ಬದಲಾವಣೆ) ಆಗಿ ಉಪನಿಯಮ (೧)ರಲ್ಲಿ ಪ್ರಕಟಗೊಂಡ ಪೂರ್ವಭಾವಿ ಮತದಾರ ಪಟ್ಟಿಗೆ ಅನ್ವಯಿಸುತ್ತದೆ.

**೭. ಚುನಾವಣೆಯ ಕಾರ್ಯಕ್ರಮ :**

ವಿಭಾಗ ೩ರ ಉಪವಿಭಾಗ (೨)ರ ಅನುಕ್ರಮವಾಗಿ ಕಲಂ (ಎ), (ಬಿ) ಮತ್ತು (ಸಿ) ರಲ್ಲಿ ಉಲ್ಲೇಸಿದಂತೆ ಚುನಾವಣಾಧಿಕಾರಿ ಅಧಿಕೃತ ಗೆಜೆಟಿನಲ್ಲಿ ಮತ್ತು ಕೌನ್ಸಿಲ್ ಕಛೇರಿಯ ಸೂಚನಾ ಫಲಕದ ಮೇಲೆ ಪ್ರತಿಯೊಂದು ಮತಕ್ಷೇತ್ರಕ್ಕೂ ಕೆಳಕಂಡಂತೆ ಕ್ಷೇತ್ರಗಳ ಚುನಾವಣೆ ದಿನಾಂಕಗಳನ್ನು ಪ್ರಕಟಿಸುತ್ತಾರೆ.

---

೧) 'ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿತ' ಎಂಬ ಶಬ್ಧಗಳನ್ನು ಜಿಎಸ್‌ಆರ್ ೧೭೩ ದಿನಾಂಕ ೭.೬.೭೯೭೯ ರಿಂದ ತೆಗೆದುಹಾಕಲಾಗಿದ್ದು ಅದು ೨೧.೬.೧೯೭೯ ರಿಂದ ಜಾರಿಗೆ ಬಂದಿದೆ.

೨) ಜಿಎಸ್‌ಆರ್ ೧೭೩, ತಾರೀಖು ೭.೬.೧೯೭೯ರಿಂದ ಸೇರ್ಪಡೆ ಮಾಡಿದ್ದು ಅದು ೨೧.೬.೧೯೭೯ ರಿಂದ ಜಾರಿಗೆ ಬಂದಿದೆ.

೩) ಸರಕಾರ ಫಾರಂ ೧ ರಲ್ಲಿ ನಿಗದಿ ಮಾಡಿದ ಶಬ್ಧಗಳು, ಕಂಸಗಳು ಮತ್ತು ಸಂಖ್ಯೆಗಳು ನಿಯಮ ೪, ಉಪನಿಯಮ (೧)ರ ಉದ್ದೇಶಕವಾಗಿ ಜಿಎಸ್‌ಆರ್ ೧೭೩ ತಾರೀಖು ೭.೬.೧೯೭೯, ರಂದು ತೆಗೆದು ಹಾಕಲಾಗಿದ್ದು, ಅದು ೩೧.೬.೧೯೭೯ ರಿಂದ ಕಾರ್ಯರೂಪಕ್ಕೆ ಬರುವಂತೆ ಮಾಡಹಾಕಲಾಗಿದೆ.

೪) ಸರಕಾರ ನಿಗದಿ ಪಡಿಸಿದಂತೆ ಫಾರಂ ೧ ರಲ್ಲಿನ ಶಬ್ಧಗಳು / ಕಂಸಗಳು ಮತ್ತು ಸಂಖ್ಯೆಗಳು ನಿಯಮಗಳ ೪ರ ಉಪನಿಯಮ (೧)ರ ಉದ್ದೇಶಕ್ಕಾಗಿ ೨೧.೬.೧೯೭೯ ರಂದು ಜಾರಿಗೆ ಬರುವಂತೆ ಜಿಎಸ್‌ಆರ್ ೧೭೩, ದಿನಾಂಕ ೭.೬.೧೯೭೯ ರಂದು ತೆಗೆದುಹಾಕಿದೆ.

(ಎ) ನಾಮಪತ್ರ ಸಲ್ಲಿಸಲು ಕೊನೆಯ ದಿನ, ಮತಗಳ ಎಣಿಕೆಗೆ ನಿರ್ಧರಿಸಿದ ತಾರೀಖಿಂದ ಅರವತ್ತು ದಿನಗಳಿಗಿಂತ ಹೆಚ್ಚಿರ ಬಾರದು.

(ಬಿ) ನಾಮಪತ್ರಗಳ ಪರಿಶೀಲನೆ ಮಾಡುವ ದಿನ ನಾಮಪತ್ರ ಸಲ್ಲಿಕೆಯಾದ ಮೂರನೇ/ ನಾಲ್ಕನೇ ದಿನ. ಆ ಉದ್ದೇಶಕ್ಕೆ ನಾಮಪತ್ರ ಸಲ್ಲಿಸುವ ಕೊನೆಯ ದಿನವನ್ನು ಮೊದಲನೆಯ ದಿನವೆಂದು ಎಣಿಸಲಾಗುತ್ತದೆ.

(ಸಿ) ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನ, ನಾಮಪತ್ರಗಳ ಪರಿಶೀಲನೆ ಮಾಡಿದ ನಂತರ ಮೂರನೇ ಅಥವಾ ನಾಲ್ಕನೆ ದಿನವಾಗಿರಬೇಕು.

(ಡಿ) ಮತಪತ್ರಗಳು ಕೈ ಸೇರುವ ಕೊನೆ ದಿನಾಂಕ

(ಇ) ಮತ ಎಣಿಕೆಯ ದಿನಾಂಕ

**೮. ಸದಸ್ಯರೆಂದು ಆಯ್ಕೆ ಮಾಡುವುದಕ್ಕೆ ಬೇಕಾದ ಅರ್ಹತೆ–**

ಅಂತಿಮ ಮತದಾರರ ಪಟ್ಟಿಯಲ್ಲಿ ಅನುಕ್ರಮವಾಗಿ ನಿಯಮ ೪, ೫ ಮತ್ತು ೬ ರಡಿಯಲ್ಲಿ ಸೇರ್ಪಡೆಯಾದ ಪ್ರತಿಯೊಬ್ಬ ವ್ಯಕ್ತಿ ವಿಭಾಗ ೭ರ ಅಡಿಯಲ್ಲಿ ಅನರ್ಹನಾಗಿಲ್ಲದಿದ್ದರೆ, ಮತದಾರ ಪಟ್ಟಿಗೆ ಸಂಬಂಧಿಸಿದ ಮತಕ್ಷೇತ್ರದಿಂದ ಸದಸ್ಯನಾಗಿ ಆಯ್ಕೆಗೊಳ್ಳಲು ಅರ್ಹನಾಗಿರುತ್ತಾನೆ.

**೯. ಅಭ್ಯರ್ಥಿಗಳ ನಾಮಪತ್ರ –**

(೧) ಚುನಾವಣೆಗೆ ಪ್ರತಿಯೊಬ್ಬ ಅಭ್ಯರ್ಥಿಯು ಫಾರಂ II ನಾಮಪತ್ರದ ಮೂಲಕ ನಾಮನಿರ್ದೇಶನಗೊಳ್ಳುತ್ತಾನೆ. ಅರ್ಜಿ ಸಲ್ಲಿಸಿದ ಯಾವುದೇ ಮತದಾರನಿಗೆ ಚುನಾವಣಾಧಿಕಾರಿಯು ಅವುಗಳನ್ನು ಪುಕ್ಕಟೆಯಾಗಿ ನೀಡುತ್ತಾರೆ.

(೨) ಚುನಾವಣೆಗೆ ನಿಲ್ಲುವ ಪ್ರತಿಯೊಬ್ಬ ಅಭ್ಯರ್ಥಿಯ ಹೆಸರನ್ನು ಸಂಬಂಧಿಸಿದ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನಮೂದಿಸಲ್ಪಟ್ಟ ವ್ಯಕ್ತಿಗಳು ಸೂಚಿಸಿ, ಅನುಮೋದಿಸಬಲ್ಲರು.

(೩) ಯಾವುದೇ ಮತದಾರ ಖಾಲಿಯಿರುವ ಸ್ಥಳ ಅಥವಾ ಸ್ಥಳಗಳನ್ನು ಭರ್ತಿಮಾಡುವಾಗ ಸಂಖ್ಯೆಗಿಂತಲೂ ಹೆಚ್ಚು ಅಭ್ಯರ್ಥಿಗಳನ್ನು

ಸೂಚನೆ ಅಥವಾ ಅನುಮೋದನೆ ಮಾಡುವಂತಿಲ್ಲ. ಭರ್ತಿ ಮಾಡಬೇಕಾದ ಸ್ಥಳ ಅಥವಾ ಸ್ಥಳಗಳಿಗೆ ಅದೇ ಮತದಾರ ಅಗತ್ಯಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದ್ದರೆ, ಆತ ಸೂಚನೆ ಮಾಡಿದ ಎಲ್ಲ ನಾಮಪತ್ರಗಳು ಅಸಿಂಧುವಾಗುತ್ತವೆ.

(೪) ಅಭ್ಯರ್ಥಿಯು ತಾನು ಕೌನ್ಸಿಲ್‌ಗೆ ಆಯ್ಕೆಯಾದರೆ ಅದರ ಸೇವೆಯನ್ನು ಮಾಡುತ್ತೇನೆ ಎಂಬ ಘೋಷಣೆಗೆ ಮತಪತ್ರದಲ್ಲಿ ಸಹಿ ಮಾಡಬೇಕಾಗುತ್ತದೆ. ಅಂತಹ ಘೋಷಣೆ ಇಲ್ಲವಾಗಿದ್ದರೆ ನಾಮಪತ್ರ ಅಮಾನ್ಯ ಎಂದು ಪರಿಗಣಿಸಲಾಗುತ್ತದೆ.

(೫) ಅಭ್ಯರ್ಥಿಯು ನಾಮಪತ್ರಕ್ಕೆ ಸರಿಯಾಗಿ ಸಹಿ ಮಾಡಿ ಅದನ್ನು ಚುನಾವಣಾಧಿಕಾರಿಗೆ ಸಲ್ಲಿಸಬೇಕು ಇಲ್ಲವೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಿಕೊಡಬೇಕು. ಅದು ಚುನಾವಣಾಧಿಕಾರಿಗೆ ಮುಂಚಿತವಾಗಿ ಇಲ್ಲವೆ ನಾಮಪತ್ರ ಸಲ್ಲಿಕೆಗಾಗಿ ನಿಗದಿಪಡಿಸಿದ ಕೊನೆಯ ದಿನದ ಮಧ್ಯಾಹ್ನ ೧೨ ಘಂಟೆಯೊಳಗೆ ತಲುಪಬೇಕು.

(೬) ನಾಮಪತ್ರಗಳು ಸಲ್ಲಿಕೆಯಾದಂತೆ, ಚುನಾವಣಾಧಿಕಾರಿಯು ಕೂಡಲೇ ಅವುಗಳ ಮೇಲೆ ಅವುಗಳು ಸಲ್ಲಿಕೆಯಾದ ತಾರೀಖು ಮತ್ತು ಸಮಯವನ್ನು ನಮೂದಿಸುತ್ತಾರೆ. ಮೇಲೆ ಸೂಚಿಸಿದ ತಾರೀಖು ಮತ್ತು ಸಮಯದೊಳಗೆ ಯಾವುದೇ ನಾಮಪತ್ರ ಚುನಾವಣಾಧಿಕಾರಿಗೆ ದೊರೆಯದಿದ್ದರೆ ಅವು ತಿರಸ್ಕೃತಗೊಳ್ಳುತ್ತವೆ.

### ೧೦) ಠೇವಣಿ ಇಡಬೇಕಾದ ಹಣ –

(೧) ಪ್ರತಿಯೊಬ್ಬ ಅಭ್ಯರ್ಥಿ ತನ್ನ ನಾಮಪತ್ರವನ್ನು ಐವತ್ತು ರೂಪಾಯಿ ಹಣದೊಡನೆ ಚುನಾವಣಾಧಿಕಾರಿಗೆ ಸಲ್ಲಿಕೆ ಮಾಡುತ್ತಾನೆ. ಅಂತಹ ಠೇವಣಿ ಜೊತೆಯಲ್ಲಿ ಇಲ್ಲದ, ನಾಮಪತ್ರವನ್ನು ಚುನಾವಣಾಧಿಕಾರಿಯು ಸ್ವೀಕರಿಸುವುದಿಲ್ಲ. ಯಾವುದೇ ಮತಪತ್ರ ಅಂತಹ ಠೇವಣಿಯನ್ನು ಉಪನಿಯಮ (೨)ರ ಅಡಿಯಲ್ಲಿ ಕಳೆದುಕೊಳ್ಳದಿದ್ದರೆ, ಅದನ್ನು ಅಭ್ಯರ್ಥಿಗೆ ಚುನಾವಣಾ ಪರಿಣಾಮ ಘೋಷಣೆಯಾದ ನಂತರ ಸಾಧ್ಯವಿದ್ದಷ್ಟು ಬೇಗ ಕೆಳಕಂಡಂತೆ ಅಭ್ಯರ್ಥಿಗೆ ಮರಳಿಸಲಾಗುವುದು.

---

೧. 'ಮತದಾರ ಪಟ್ಟಿ, ಅಂತಿಮವಾಗಿ' ಎಂಬ ಶಬ್ದಗಳನ್ನು ೭.೬.೧೯೭೪ರ ಜಿಎಸ್‌ಆರ್ ೧೭೫ರಲ್ಲಿ ಬದಲಾಯಿಸಲಾಗಿದ್ದು ಅದು ೨೧.೬.೧೯೭೪ ರಿಂದ ಕಾರ್ಯರೂಪಕ್ಕೆ ಬಂದಿದೆ.

(ಎ) ಅಭ್ಯರ್ಥಿಯು ಜಯಶಾಲಿಯಾಗಿದ್ದಾನೆ ಎಂದು ಘೋಷಣೆ ಯಾದರೆ ಅಥವಾ ಸಮರ್ಪಕವಾಗಿ ಆಯ್ಕೆಯಾಗಿದ್ದಾನೆ ಎಂದು ಪರಿಗಣಿಸಿದರೆ ಅಥವಾ

(ಬಿ) ಅಭ್ಯರ್ಥಿಯ ನಾಮಪತ್ರ ಅಸಿಂಧುವಾಗಿದ್ದರೆ ಅಥವಾ

(ಸಿ) ಮತಪತ್ರದ ಪರಿಶೀಲನೆ ನಡೆದ ನಂತರ ಇಲ್ಲವೆ ಚುನಾವಣೆ ಮುಕ್ತಾಯವಾಗುವ ಮೊದಲು ಅಭ್ಯರ್ಥಿ ಮರಣಹೊಂದಿದ್ದರೆ

(ಡಿ) ಅಭ್ಯರ್ಥಿ ಜಯಶಾಲಿಯಾಗದಿದ್ದರೂ, ಉಪನಿಯಮ (೨) ಸೂಚಿಸಿದಷ್ಟು ಸಿಂಧುವಾದ ಮತಗಳನ್ನು ಪಡೆದಿದ್ದರೆ

(೨) ಅಭ್ಯರ್ಥಿಯು ಜಯಶಾಲಿಯಾಗದಿದ್ದು, ಆತನ ಪರವಾಗಿ ಸಿಂಧುವಾದ ಮತಗಳ ಸಂಖ್ಯೆ ದಾಖಲೆಯಾದ ಮತಗಳ ೧/೮ಕ್ಕಿಂತ ಕಡಿಮೆ ಬಿದ್ದಿದ್ದರೆ, ಅಥವಾ ಚುನಾವಣೆಯಲ್ಲಿ ಆಯ್ಕೆ ಮಾಡಬೇಕಾದವರ ಸಂಖ್ಯೆ ಎರಡು ಅಥವಾ ಅದಕ್ಕಿಂತ ಜಾಸ್ತಿ ಇದ್ದರೆ, ಆತನ ಪರವಾಗಿ ಬಿದ್ದ ಸಿಂಧುವಾದ ಮತಗಳು ಚಲಾಯಿಸಿದ ಒಟ್ಟು ಮತಗಳ ೧/೮ರಷ್ಟನ್ನು, ಆಯ್ಕೆ ಮಾಡಬೇಕಾದ ಒಟ್ಟು ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವ ಸಂಖ್ಯೆಗಿಂತ ಕಡಿಮೆಯಿದ್ದರೆ, ಠೇವಣಿಯನ್ನು ಕಳೆದುಕೊಂಡು ಅದು ಕೌನ್ಸಿಲ್‌ಗೆ ಜಮೆಯಾಗುವುದು.

**೧೧. ನಾಮಪತ್ರಗಳ ಪರಿಶೀಲನೆ –**

ನಾಮಪತ್ರಗಳ ಪರಿಶೀಲನೆಗೆ ನಿಗದಿಪಡಿಸಿದ ದಿನ, ಚುನಾವಣಾಧಿ ಕಾರಿಯು ಮಧ್ಯಾಹ್ನ ೧೨ ಘಂಟೆಗೆ ತನಗೆ ಸಲ್ಲಿಸಿದ ನಾಮಪತ್ರಗಳನ್ನು ಅದಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಪರಿಶೀಲನೆ ಮಾಡುವರು. ಯಾವುದೇ ಅಭ್ಯರ್ಥಿ ಸ್ವತ: ಇಲ್ಲವೆ ಮಾನ್ಯ ಮಾಡಿದ ಪ್ರತಿನಿಧಿ ಅಂತಹ ಪರಿಶೀಲನೆಯ ಸಮಯದಲ್ಲಿ ಹಾಜರಿರಬಹುದು. ಚುನಾವಣಾಧಿಕಾರಿಯು ನಾಮಪತ್ರದ ಸಿಂಧುತ್ವದ ಬಗ್ಗೆ ಪ್ರಶ್ನೆಗಳನ್ನು ಸಿದ್ಧಪಡಿಸುವನು, ಮತ್ತು ಆತನ ನಿರ್ಧಾರವೇ ಅಂತಿಮ. ನಾಮಪತ್ರಗಳ ಪರಿಶೀಲನೆಯ ಕಾರ್ಯ ಮುಕ್ತಾಯಗೊಂಡ ಮೇಲೆ ಮತ್ತು ನಿಗದಿತ ಅವಧಿ ಮುಗಿಯುವ ಮೊದಲೇ ನಿಯಮ ೧೨ರ ಅಡಿಯಲ್ಲಿ ಅಭ್ಯರ್ಥಿಯು ನಾಮಪತ್ರವನ್ನು ಹಿಂತೆಗೆದುಕೊಳ್ಳಬಹುದು. ಚುನಾವಣಾಧಿಕಾರಿಯು ಕೂಡಲೇ ತಾನು ಸಿಂಧುತ್ವ ದೃಢಪಡಿಸಿದ ನಾಮಪತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಘೋಷಿಸುವನು.

**೧೨. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು –**

ಯಾವುದೇ ಅಭ್ಯರ್ಥಿ ತನ್ನ ಉಮೇದುವಾರಿಕೆಯನ್ನು ಪತ್ರ ಮುಖೇನ ಬರೆದು ತನ್ನ ಸಹಿ ಮಾಡಿ ಚುನಾವಣಾಧಿಕಾರಿಗೆ ಹಿಂತೆಗೆತಕ್ಕೆ ನಿಗದಿಪಡಿಸಿದ

ತಾರೀಖಿನಂದು ಮಧ್ಯಾಹ್ನ ೧೨ ಗಂಟೆಗೆ ಮೊದಲು ಕಳುಹಿಸಬೇಕು. ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡ ಅಭ್ಯರ್ಥಿಗೆ ಅದನ್ನು ರದ್ದುಪಡಿಸುವುದಕ್ಕೆ ಅವಕಾಶವಿರುವುದಿಲ್ಲ.

**೧೩. ಸ್ವೀಕೃತವಾದ ನಾಮಪತ್ರಗಳ ಪ್ರಕಟಣೆ –**

(೧) ಸಲ್ಲಿಸಿದ ನಾಮಪತ್ರಗಳ ಪರಿಶೀಲನೆ ಮುಗಿದ ನಂತರ ಮತ್ತು ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಸಮಯ ಮುಗಿದ ಮೇಲೆ, ಚುನಾವಣಾಧಿಕಾರಿಯು ಸ್ವೀಕೃತ ನಾಮಪತ್ರಗಳು ಆಯ್ಕೆ ಮಾಡಬೇಕಾದ ಸದಸ್ಯರ ಸಂಖ್ಯೆಯಷ್ಟಿದ್ದರೆ ಕೂಡಲೇ ಈ ಸ್ಥಳಗಳನ್ನು ಭರ್ತಿ ಮಾಡಬೇಕಿದ್ದ ಎಲ್ಲ ಸದಸ್ಯರು ಆಯ್ಕೆ ಯಾಗಿದ್ದಾರೆ ಎಂದು ಘೋಷಿಸಬಹುದು.

(೨) ಆಯ್ಕೆ ಮಾಡಬೇಕಾದ ಸದಸ್ಯರ ಸಂಖ್ಯೆಗಿಂತ ಸಿಂಧುತ್ವವಾದ ನಾಮಪತ್ರಗಳು ಕಡಿಮೆಯಿದ್ದರೆ ಚುನಾವಣಾಧಿಕಾರಿಯು ನಾಮಪತ್ರ ಹಿಂತೆಗೆದುಕೊಳ್ಳುವ ಸಮಯದ ನಂತರ, ಅಭ್ಯರ್ಥಿ ಅಥವಾ ಅಭ್ಯರ್ಥಿಗಳು ಅಧಿಕೃತವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಬಹುದು. ಮತ್ತು ಅಧ್ಯಕ್ಷರು ಖಾಲಿ ಉಳಿದ ಸ್ಥಳಗಳ ಭರ್ತಿಗೆ ಕ್ರಮ ಕೈಕೊಳ್ಳುತ್ತಾರೆ.

(೩) ಆಯ್ಕೆ ಮಾಡಬೇಕಾದ ಸದಸ್ಯರ ಸಂಖ್ಯೆಗಿಂತ ಸಿಂಧುತ್ವವಾದ ನಾಮಪತ್ರಗಳು ಹೆಚ್ಚಿದ್ದರೆ, ಚುನಾವಣಾಧಿಕಾರಿಯು, ನಾಮಪತ್ರ ಹಿಂತೆಗೆದುಕೊಳ್ಳುವ ಸಮಯದ ನಂತರ, ಅವರ ಹೆಸರುಗಳು ಮತ್ತು ವಿಳಾಸಗಳನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸುವನು ಮತ್ತು ಅವರ ಹೆಸರುಗಳನ್ನು ಮತಪತ್ರಗಳ ಫಾರಂ III ರಲ್ಲಿ ಅಕಾರಾತ್ಮಕವಾಗಿ ದಾಖಲಿಸುವನು.

**೧೪. ಮತದಾರರಿಗೆ ಮತಪತ್ರಗಳ ರವಾನೆ –**

ಚುನಾವಣೆ ಅಗತ್ಯವೆಂದು ತೋರಿ ಬಂದರೆ, ಚುನಾವಣಾಧಿಕಾರಿಯು, ಅದಕ್ಕಾಗಿ ನಿಗದಿಪಡಿಸಿದ ತಾರೀಖಿಗಿಂತ ಎರಡು ವಾರ ಮೊದಲು, ಪ್ರತಿಯೊಬ್ಬ ಮತದಾರನಿಗೆ ಅಂಚೆ ಮುಖಾಂತರ ಸೂಚನಾ ಪತ್ರ ಫಾರಂ IVರಲ್ಲಿ ಕೆಳಕಂಡ ಮಾಹಿತಿಯೊಂದಿಗೆ ಕಳುಹಿಸಿಕೊಡುತ್ತಾನೆ.

i) ಸಂಖ್ಯೆ ಹಾಕಿದ ಘೋಷಣಾ ಪತ್ರ

ii) ಚುನಾವಣಾಧಿಕಾರಿಯ ಕಿರು ಸಹಿ ಅಥವಾ ಸಹಿಯ ಮುದ್ರೆಯಿರುವ. ಅಕಾರಾತ್ಮಕವಾಗಿ ಇರಿಸಿದ ಅಭ್ಯರ್ಥಿಗಳ ಹೆಸರಿರುವ ನಾಮಪತ್ರ ಫಾರಂ III

iii) ಚುನಾವಣಾಧಿಕಾರಿ ವಿಳಾಸಕ್ಕೆ ಮತಪತ್ರಗಳು ಎಂದು ಮುದ್ರಿಸಿದ ಖಾಲಿ ಲಕೋಟೆ ಮತ್ತು

iv) ದೊಡ್ಡ ಲಕೋಟೆ. ಅದರ ಮೇಲಣ ಎಡ ಮೂಲೆಯಲ್ಲಿ ಕ್ರಮಗತಿಯಲ್ಲಿ ಸಂಖ್ಯೆ ಮತ್ತು ಅದರ ಕೆಳಗಣ ಎಡ ಮೂಲೆಯಲ್ಲಿ ಹೆಸರು ಮತ್ತು ಸಹಿ ಮಾಡುವ ಸ್ಥಳ ಮತ್ತು ಮಧ್ಯಭಾಗದಲ್ಲಿ ಕೆಳಗಿನಂತೆ ಚುನಾವಣಾಧಿಕಾರಿಯ ವಿಳಾಸ ಮುದ್ರಿಸಲ್ಪಟ್ಟಿರುತ್ತದೆ

ಗೆ

ಚುನಾವಣಾಧಿಕಾರಿ

ಕೇರಾಫ್

ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು

ಮತದಾರನಿಗೆ ಕಳುಹಿಸಿದ ಅಂತಹ ಪ್ರತಿಯೊಂದು ಸೂಚನಾ ಪತ್ರವನ್ನು ಕಳುಹಿಸಿದುದಕ್ಕೆ ಪೋಸ್ಟಿಂಗ್ ಮಾಡಿದ ಪ್ರಮಾಣಪತ್ರವನ್ನು ಪಡೆಯ ಲಾಗುವುದು.

(೨) ಮತಪತ್ರ ಮತ್ತು ಉಪನಿಯಮ (೧) ಸೂಚಿಸಿದ ಇತರ ಸಂಬಂಧಿಸಿದ ಪತ್ರಗಳನ್ನು ಪಡೆದ ಮತದಾರ ಚುನಾವಣಾಧಿಕಾರಿಗೆ ಆ ಪತ್ರಗಳನ್ನು ಮರಳಿ ಕಳುಹಿಸುವ ಮೊದಲು ಅವು ಸರಿಯಾಗಿ ಬಳಕೆ ಮಾಡದಂತಹ ರೀತಿಯಲ್ಲಿ ಅನುದಿಷ್ಟವಾಗಿ ಹಾಳಾಗಿ ಹೋಗಿದ್ದರೆ ಅಥವಾ ತನ್ನ ಪತ್ರಗಳನ್ನು ಕಳೆದುಕೊಂಡಿದ್ದರೆ ಅದರ ಮಾಹಿತಿಯನ್ನು ಚುನಾವಣಾಧಿಕಾರಿಗೆ ತಿಳಿಸಿ, ಆ ಸಂಬಂಧ ತನ್ನ ಕೈಯಿಂದ ಘೋಷಣೆಯನ್ನು ಬರೆದು ಚುನಾವಣಾಧಿಕಾರಿಗೆ ಕಳುಹಿಸಿಕೊಡಬೇಕು. ತನಗೆ ಮತಪತ್ರ ಬಂದಿಲ್ಲದಿರುವುದು, ಹಾಳಾಗಿರುವುದು ಇಲ್ಲವೆ ಕಳೆದು ಹೋಗಿರುವುದರಿಂದಾಗಿ ದುಪ್ರತಿಯನ್ನು ಕಳುಹಿಸಬೇಕೆಂದು ಚುನಾವಣಾಧಿಕಾರಿಯನ್ನು ಕೋರಬೇಕಾಗುತ್ತದೆ. ಒಂದು ವೇಳೆ ಮತಪತ್ರ ಹಾಳಾಗಿದ್ದರೆ ಅದನ್ನು

ಚುನಾವಣಾಧಿಕಾರಿಗೆ ಮರಳಿಸಿದರೆ ಅವರು ಅದನ್ನು ರದ್ದು ಮಾಡುತ್ತಾರೆ, ದುಪ್ರತಿಯನ್ನು ನೀಡಿದ ಪ್ರತಿ ಸನ್ನಿವೇಶದಲ್ಲೂ, ಅದರ ದಾಖಲೆಯನ್ನು ಚುನಾವಣಾಧಿಕಾರಿಯು ರಕ್ಷಿಸಿಟ್ಟುಕೊಳ್ಳಬೇಕು. 'ದುಪ್ರತಿ' ಎಂಬ ಗುರುತನ್ನು ದೊಡ್ಡ ಲಕೋಟೆಯ ಮೇಲೆ ನಮೂದಿಸಬೇಕು. ಮೊದಲು ಕೊಟ್ಟಿದ್ದ ಕ್ರಮಗತಿಯ ಸಂಖ್ಯೆಯನ್ನೇ ಅದು ಹೊಂದಿರುತ್ತದೆ. ಮೊದಲು ಕೊಟ್ಟಂತಹ ದೊಡ್ಡ ಹೊರ ಲಕೋಟೆಯನ್ನು ಮತದಾರನಿಗೆ ಕಳುಹಿಸಿಕೊಡಲಾಗುವುದು. ಅಂತಹ ಸನ್ನಿವೇಶಗಳಲ್ಲಿ ಕೊಡಲಾದ ಮತಪತ್ರದ ಮೇಲೆ 'ದುಪ್ರತಿ' ಎಂದು ಗುರುತು ಮಾಡಬೇಕು.

**೧೫. ಚುನಾವಣಾಧಿಕಾರಿಗೆ ಮತಪತ್ರಗಳನ್ನು ಕಳುಹಿಸಿಕೊಡುವುದು–**

(೧) ತನ್ನ ಮತ ಚಲಾಯಿಸಬೇಕೆಂಬ ಅಭಿಲಾಷೆಯುಳ್ಳ ಪ್ರತಿ ಮತದಾರ, ಘೋಷಣಾ ಪತ್ರವನ್ನು ಭರ್ತಿ ಮಾಡಿದ ಮೇಲೆ, ಮತ್ತು ಸೂಚನಾ ಪತ್ರದಲ್ಲಿ ನೀಡಿರುವ ಸೂಚನೆಗನುಗುಣವಾಗಿ ಮತವನ್ನು ನೀಡಿದ ಮೇಲೆ, ಮತಪತ್ರವನ್ನು ಮತಪತ್ರ ಲಕೋಟೆಯಲ್ಲಿರಿಸಿ ಅದನ್ನು ಅಂಟಿಸಬೇಕು. ಈ ಲಕೋಟೆ ಮತ್ತು ಘೋಷಣಾ ಪತ್ರದೊಡನೆ ಚುನಾವಣಾಧಿಕಾರಿ ವಿಳಾಸದ ದೊಡ್ಡ ಹೊರ ಲಕೋಟೆಯೊಳಗಿರಿಸಿ ಅದನ್ನು ಚುನಾವಣಾಧಿಕಾರಿಗೆ ಅಂಚೆಯ ಮೂಲಕ ಇಲ್ಲವೆ ಸ್ವತಃ ಅದನ್ನು ಚುನಾವಣಾಧಿಕಾರಿಗೆ ಮತದಾನಕ್ಕೆ ನಿರ್ದಿಷ್ಟಪಡಿಸಿದ ದಿನದ ಸಮಯಕ್ಕಿಂತ ಮೊದಲು ಸಲ್ಲಿಸಬೇಕು.

(೨) ಅಂಚೆಯ ಮೂಲಕ ಇಲ್ಲವೆ ಸಮಕ್ಷಮ ನೀಡಿದ ಘೋಷಣಾ ಪತ್ರ ಮತ್ತು ಮತಪತ್ರವನ್ನೊಳಗೊಂಡ ಮುಚ್ಚಿದ ಲಕೋಟೆ ಇರುವ ಲಕೋಟೆ ತಲುಪಿದ ಮೇಲೆ, ಚುನಾವಣಾಧಿಕಾರಿಯು ಹೊರ ಲಕೋಟೆಯ ಮೇಲೆ ಅದು ತಲುಪಿದ ದಿನಾಂಕ ಮತ್ತು ಸಮಯವನ್ನು ದೃಢೀಕರಿಸುತ್ತಾನೆ.

**೧೬. ಮತಗಳ ಎಣಿಕೆ –**

(೧) ಚುನಾವಣಾಧಿಕಾರಿಯು ಮತಪತ್ರ ಪರಿಶೀಲನೆ ಮತ್ತು ಮತಗಳ ಎಣಿಕೆಯ ಕಾರ್ಯಕ್ಕೆ, ಮತ ಎಣಿಕೆಯ ಬಗ್ಗೆ ತಾನು ಸೂಚಿಸಿದ ದಿನ ಮತ್ತು ಕಾಲ ಮತ್ತು ಸ್ಥಳಕ್ಕೆ ಬಂದು ಕಾರ್ಯನಿರ್ವಹಿಸುತ್ತಾರೆ.

(೨) ಯಾವುದೇ ಅಭ್ಯರ್ಥಿಯು ತಾನೇ ಅಥವಾ ತನ್ನ ಮಾನ್ಯತೆ ಪಡೆದ ಪ್ರತಿನಿಧಿ ಮತಎಣಿಕೆ ಸ್ಥಳದಲ್ಲಿ ಹಾಜರಿರಬಹುದು.

(೩) ಚುನಾವಣಾಧಿಕಾರಿಯು, ಮತ ಎಣಿಕೆಯಲ್ಲಿ ತನಗೆ ಸಹಾಯ ಮಾಡಲು ತನಗೆ ಸರಿ ಎನಿಸುವಷ್ಟು ಸಂಖ್ಯೆಯಲ್ಲಿ ಕೌನ್ಸಿಲ್ ಕಛೇರಿಯ ಸಿಬ್ಬಂದಿಯನ್ನು ಪರಿಶೀಲಿಕರು ಎಂದು ನಾಮಕರಣ ಮಾಡುತ್ತಾರೆ.

(೪) ಚುನಾವಣಾಧಿಕಾರಿಯು, ಯಾವುದೇ ಅಭ್ಯರ್ಥಿ ಅಥವಾ ಅಭ್ಯರ್ಥಿಯನ್ನು ಪ್ರತಿನಿಧಿಸುವ ಯಾವುದೇ ವ್ಯಕ್ತಿಯ ಎದುರಿನಲ್ಲಿ ಮತಎಣಿಕೆಗೆ ನಿಗದಿ ಪಡಿಸಿದ ಸ್ಥಳದಲ್ಲಿ, ಹೊರ ಲಕೋಟೆಗಳನ್ನು ಎಣಿಕೆಗಾಗಿ ನಿಗದಿಪಡಿಸಿದ ಸಮಯದ ನಂತರ ತೆರೆಯುವನು. ಮತಪತ್ರಗಳನ್ನು ಅಭ್ಯರ್ಥಿಗಾಗಲೀ ಅಥವಾ ಹಾಜರಿರುವ ಅವರ ಪ್ರತಿನಿಧಿಗಾಗಲೀ ಪರಿಶೀಲನೆ ಸಮಯದಲ್ಲಿ ಅದನ್ನು ನೋಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರೆ ತೋರಿಸಬಹುದು.

(೫) ಮತಪತ್ರದ ಲಕೋಟೆಯನ್ನು ಚುನಾವಣಾಧಿಕಾರಿಯು ಕೆಳಕಂಡ ಸನ್ನಿವೇಶಗಳಲ್ಲಿ ತಿರಸ್ಕರಿಸಬಹುದು.

(ಎ) ಹೊರ ಲಕೋಟೆಯೊಳಗೆ ಮತಪತ್ರದ ಲಕೋಟೆಯ ಹೊರಗೆ ಘೋಷಣಾ ಪತ್ರವಿಲ್ಲದಿದ್ದಲ್ಲಿ, ಅಥವಾ

(ಬಿ) ಚುನಾವಣಾಧಿಕಾರಿ ಕಳುಹಿಸಿದ ಘೋಷಣಾ ಪತ್ರವು ಅದಾಗಿರದಿದ್ದಲ್ಲಿ ಅಥವಾ

(ಸಿ) ಘೋಷಣಾ ಪತ್ರಕ್ಕೆ ಮತದಾರ ಸಹಿ ಮಾಡದಿದ್ದಲ್ಲಿ ಅಥವಾ

(ಡಿ) ಒಂದೇ ದೊಡ್ಡ ಲಕೋಟೆಯೊಳಗೆ ಒಂದಕ್ಕಿಂತ ಹೆಚ್ಚು ಘೋಷಣಾ ಪತ್ರ ಅಥವಾ ಮತಪತ್ರ ಲಕೋಟೆಗಳು ಇದ್ದಲ್ಲಿ ಅಥವಾ

(ಇ) ಘೋಷಣಾ ಪತ್ರ ಮತ್ತು ಮತಪತ್ರ ಲಕೋಟೆ ಒಳಗೊಂಡ ಅನೇಕ ಹೊರ ಲಕೋಟೆಗಳು ಒಂದು ದೊಡ್ಡ ಲಕೋಟೆಯಲ್ಲಿ ಇರಿಸಿದ್ದರೆ

(೬) ತಿರಸ್ಕರಿಸಿದಲ್ಲಿ 'ತಿರಸ್ಕರಿಸಿದೆ' ಎಂಬ ಶಬ್ದವನ್ನು ಮತಪತ್ರ ಲಕೋಟೆ ಮತ್ತು ಘೋಷಣಾ ಪತ್ರದ ಮೇಲೆ ಚುನಾವಣಾಧಿಕಾರಿ ಕಿರು ಸಹಿ ಮಾಡಿ ದೃಢೀಕರಿಸತಕ್ಕದ್ದು

(೭) ಉಪನಿಯಮ (೫)ರ ಅಡಿಯಲ್ಲಿ ತಿರಸ್ಕರಿಸಿದ ಮತಪತ್ರವನ್ನು ಹೊರತುಪಡಿಸಿ ಉಳಿದೆಲ್ಲ ಮತಪತ್ರಗಳನ್ನು ತೆರೆಯಲಾಗುವುದು.

ಅನಂತರ ಅವುಗಳ ಪರಿಶೀಲನೆ ಮಾಡಿ, ಸಿಂಧುವಾಗಿರುವುಗಳನ್ನು ಎಣಿಸಲಾಗುವುದು.

ಮತಪತ್ರ ಕೆಳಕಂಡ ಕಾರಣದಿಂದ ತಿರಸ್ಕರಿಸಲ್ಪಡಬಹುದು.

(ಎ) ಅದಕ್ಕೆ ಚುನಾವಣಾಧಿಕಾರಿಯ ಕಿರು ಸಹಿ ಇಲ್ಲವೆ ಸಹಿಯ ಮುದ್ರೆಯಿಲ್ಲವಾಗಿದ್ದಲ್ಲಿ ಅಥವಾ

(ಬಿ) ಮತದಾರ ತನ್ನ ಸಹಿಯನ್ನು ಮಾಡುವುದು ಅಥವಾ ಒಂದು ಶಬ್ದ ಬರೆಯುವುದು ಅಥವಾ ಬೇರೆ ಏನನ್ನಾದರೂ ಗುರುತು ಮಾಡುವುದು–ಅದರಿಂದ ಅದು ಆತನ ಮತಪತ್ರವೆಂದು ಗುರುತಿಸಲ್ಪಡಬಹುದು ಅಥವಾ

(ಸಿ) ಮತವನ್ನು ಅದರ ಮೇಲೆ ದಾಖಲಿಸದಿರುವುದು ಅಥವಾ

(ಡಿ) ಚಲಾಯಿಸಿದ ಮತಗಳ ಸಂಖ್ಯೆ ಮತದಾರ ಮತ ನೀಡುವ ಸಂಖ್ಯೆಗೆ ಸಮನಾಗಿಲ್ಲದಿರುವುದು ಅಥವಾ

(ಇ) ಒಬ್ಬ ಅಭ್ಯರ್ಥಿಗೆ ಮತದಾರ ಒಂದಕ್ಕಿಂತ ಹೆಚ್ಚು ಮತ ನೀಡಿರುವುದು ಅಥವಾ

(ಎಫ್) ಒಂದು ಅಥವಾ ಹೆಚ್ಚು ಮತಗಳನ್ನು ಚಲಾಯಿಸಿದ ಅನಿಶ್ಚತೆಯಿಂದಾಗಿ ಅಸಿಂಧುವಾಗಿರುವುದು.

ಅದೇ ಮತಪತ್ರದಲ್ಲಿ ಒಂದಕ್ಕಿಂತ ಹೆಚ್ಚು ಮತವನ್ನು ಕೊಡಬೇಕಿದ್ದರೆ, ಅದರಲ್ಲಿ ಗುರುತು ಮಾಡಿರುವುದು, ಯಾರಿಗೆ ಸೇರಬೇಕು ಎಂಬುದನ್ನು ನಿರ್ಧರಿಸುವುದು ಅನುಮಾನಾಸ್ಪದವಾಗಿದ್ದರೆ, ಆ ಮತ ಅಸಿಂಧುವಾಗುವುದೇ ಹೊರತು–ಉಳಿದೆಲ್ಲ ಮತಗಳು–ಆ ಕಾರಣಕ್ಕಾಗಿ ಅಸಿಂಧುವಾಗುವುದಿಲ್ಲ.

(೮) ನಿರ್ದಿಷ್ಟಪಡಿಸಿದ ಅಗತ್ಯಕ್ಕೆ ಅನುಗುಣವಾಗಿ ಮತಪತ್ರವಿಲ್ಲವೆಂದು ಯಾವುದೇ ಅಕ್ಷೇಪಣೆ ಬಂದರೆ ಅಥವಾ ಯಾವುದೇ ಮತಪತ್ರದ ಮೇಲೆ ಚುನಾವಣಾಧಿಕಾರಿ ಅಕ್ಷೇಪವನ್ನೆತ್ತಿದರೆ, ಅದರ ಬಗ್ಗೆ ಕೂಡಲೇ ಚುನಾವಣಾಧಿಕಾರಿ ನಿರ್ಧಾರ ಕೈಕೊಳ್ಳುತ್ತಾನೆ. ಆತನ ನಿರ್ಣಯವೇ ಅಂತಿಮ.

## ೧೭. ಚುನಾವಣೆಯ ಫಲಿತಾಂಶ ಘೋಷಣೆ –

(೧) ಮತಗಳ ಎಣಿಕೆ ಮುಕ್ತಾಯವಾದ ಮೇಲೆ ಚುನಾವಣಾಧಿಕಾರಿಯು ಕೂಡಲೇ ಅಭ್ಯರ್ಥಿ ಅಥವಾ ಅಭ್ಯರ್ಥಿಗಳು– ಯಾವುದೇ ರೀತಿಯಿದ್ದರೂ ಯಾರಿಗೆ ಹೆಚ್ಚು ಮತಗಳು ದೊರೆತಿರುವುದೋ ಅವರು ಚುನಾಯಿತರಾಗಿರುವುದನ್ನು ಘೋಷಿಸಿ ಕೂಡಲೇ ಜಯಗಳಿಸಿದ ಅಭ್ಯರ್ಥಿಗೆ ಕೌನ್ಸಿಲ್‌ಗೆ ಆಯ್ಕೆಯಾದುದರ ಬಗ್ಗೆ ಪತ್ರ ಬರೆದು ತಿಳಿಸುತ್ತಾರೆ.

(೨) ಯಾರೇ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಮಧ್ಯ ಮತಗಳು ಸಮನಾಗಿ ಬಂದಿರುವುದು ತೋರಿಬಂದರೆ ಮತ್ತು ಒಂದು ಮತವನ್ನು ಸೇರಿಸುವುದರಿಂದ ಒಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಜಯಗಳಿಸಿದ್ದಾರೆ ಎಂದು ಘೋಷಿಸಬಹುದು. ಅದನ್ನು ನಿರ್ಧರಿಸಲು ಯಾವ ಅಭ್ಯರ್ಥಿ ಅಥವಾ ಅಭ್ಯರ್ಥಿಗಳಿಗೆ ಅಂತಹ ಮತವನ್ನು ಕೊಡಬಹುದು ಎಂಬುದನ್ನು ಚುನಾವಣಾಧಿಕಾರಿ ತಾನು ನಿರ್ಧರಿಸಿದ ರೀತಿಯಲ್ಲಿ ಲಾಟರಿ ಹಾಕುವುದರ ಮೂಲಕ ಮಾಡುತ್ತಾನೆ.

(೩) ಚುನಾವಣೆಯ ಪರಿಣಾಮವನ್ನು ಘೋಷಿಸಿದ ಮೇಲೆ, ಚುನಾವಣಾಧಿಕಾರಿ ಮತಪತ್ರಗಳನ್ನು ಮತ್ತು ಚುನಾವಣೆಗೆ ಸಂಬಂಧಿಸಿದ ಇತರೆ ಎಲ್ಲ ದಾಖಲೆಗಳನ್ನು ಮುಚ್ಚಿ ಮೊಹರು ಹಾಕುತ್ತಾನೆ. ಅವುಗಳನ್ನು ಆರು ತಿಂಗಳು ಕಾಲ ಸುರಕ್ಷಿತವಾಗಿ ಇರಿಸುತ್ತಾನೆ. ಅನಂತರ ಅವುಗಳ ನಾಶಮಾಡುತ್ತಾನೆ.

## ೧೮. ಚುನಾವಣೆಯ ಪರಿಣಾಮದ ಪ್ರಕಟಣೆ–

ಚುನಾವಣಾಧಿಕಾರಿಯು ಚುನಾವಣೆಯ ಪರಿಣಾಮವನ್ನು ಅಧಿಕೃತ ಗೆಜೆಟನಲ್ಲಿ ಪ್ರಕಟಪಡಿಸುತ್ತಾನೆ. ಜೊತೆಯಲ್ಲಿ ಈ ಪರಿಣಾಮದ ಘೋಷಣೆ ವಿವರಗಳನ್ನು ರಾಜ್ಯ ಸರಕಾರಕ್ಕೆ ಕಳುಹಿಸುತ್ತಾನೆ.

## ೧೯. ಚುನಾವಣೆ ಬಗ್ಗೆ ವ್ಯಾಜ್ಯ :

(೧) ಯಾವುದೇ ಚುನಾವಣೆಯ ಸಿಂಧುತ್ವವನ್ನು ಪ್ರಶ್ನಿಸಿ ಚುನಾವಣೆ ಅಹವಾಲನ್ನು ಚುನಾವಣಾಧಿಕಾರಿಗೆ ಆ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದ

ವ್ಯಕ್ತಿ, ಅಧಿಕೃತ ರಾಜ್ಯ ಪತ್ರದಲ್ಲಿ ನಿಯಮ ೧೮ರ ಅಡಿಯಲ್ಲಿ ಪರಿಣಾಮ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಲ್ಲಿಸಬಹುದು.

ಚುನಾವಣಾ ಅಹವಾಲು:

(ಎ) ಅಹವಾಲಿನಲ್ಲಿ ಉಲ್ಲೇಖಿಸಿದ ವಾದಿಗಳೆಲ್ಲರೂ ಸಾಧ್ಯವಿದ್ದ ಎಲ್ಲ ಪ್ರತಿಗಳನ್ನು ಲಗತ್ತಿಸಿರುತ್ತಾರೆ ಮತ್ತು ಅಂತಹ ಪ್ರತಿಯೊಂದು ಪ್ರತಿಯನ್ನು ದಾವೆದಾರ ತನ್ನ ಸಹಿಯಿಂದ ಅದು ಅಹವಾಲಿನ ನೈಜ ಪ್ರತಿಯೆಂದು ಸಹಿ ಮಾಡಿ ದೃಢೀಕರಿಸುತ್ತಾನೆ.

(ಬಿ) ಅಹವಾಲು ಆಧರಿಸಿರುವ ವಸ್ತು ವಿವರಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರುತ್ತದೆ.

(ಸಿ) ಅದನ್ನು ಸಿವಿಲ್ ಪ್ರೊಸೀಜರ್ ಕೋಡ್, ೧೯೦೮ (ಸೆಂಟ್ರಲ್ ಅಧಿನಿಯಮ ೫, ೧೯೦೮)ರಲ್ಲಿ ವಿವರಿಸಿದ ರೀತಿಯಲ್ಲಿ ಪರಿಶೀಲಿಸಿ ಅದನ್ನು ದಾವೆದಾರ ಸಹಿ ಮಾಡುತ್ತಾನೆ.

(೨) ಅಹವಾಲಿಗೆ ಸೇರಿದ ಯಾವುದೇ ತಪಸೀಲು ಅಥವಾ ಅಡಕಗಳನ್ನು ಕೂಡಾ ಅಹವಾಲಿನ ರೀತಿಯಲ್ಲಿಯೇ ಪರಿಶೀಲಿಸಿ ಅವುಗಳನ್ನು ವಾದಿ ಸಹಿ ಮಾಡುತ್ತಾನೆ.

(೩) ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯ ಆಯ್ಕೆ ಅಸಿಂಧುವೆಂದು ಘೋಷಿಸಲು ಹಕ್ಕು ಮಂಡಿಸುತ್ತಿರುವದರ ಜೊತೆ ತನ್ನ ಇಲ್ಲವೆ ಬೇರೆ ಅಭ್ಯರ್ಥಿ ಸರಿಯಾಗಿ ಆಯ್ಕೆಯಾಗಿದ್ದಾನೆ ಎಂದು ಘೋಷಿಸಲು ಹಕ್ಕು ಮಂಡಿಸಿದಲ್ಲಿ ಗೆದ್ದ ಅಭ್ಯರ್ಥಿಯನ್ನು ಹೊರತುಪಡಿಸಿ ಚುನಾವಣೆಗೆ ಸ್ಪರ್ಧಿಸಿದ ಉಳಿದವರೆಲ್ಲರೂ ಅಂತಹದೇನಾದರೂ ಘೋಷಣೆ ಮಾಡಬೇಕೆಂದು ಹಕ್ಕು ಮಂಡಿಸಿದರೆ ವಾದಿಯು ತನ್ನ ಅಹವಾಲಿಗೆ ಪ್ರತಿವಾದಿಯಾಗಿ ಸೇರ್ಪಡೆಯಾಗುತ್ತಾನೆ.

(೪) ವಾದಿಯು ಕೆಳಕಂಡ ಘೋಷಣೆಯ ಹಕ್ಕು ಮಂಡಿಸಬಹುದು.

(ಎ) ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯ ಆಯ್ಕೆ ಅಸಿಂಧು

(ಬಿ) ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯ ಆಯ್ಕೆ ಅಸಿಂಧು ಮತ್ತು ತಾನು ಅಥವಾ ಬೇರೆ ಯಾವುದಾದರೂ ಅಭ್ಯರ್ಥಿ ಅಧಿಕೃತವಾಗಿ ಆಯ್ಕೆಯಾಗಿದ್ದಾರೆ.

(೫) ಚುನಾವಣೆಯ ಅಹವಾಲನ್ನು ಚುನಾವಣಾಧಿಕಾರಿಗೆ, ಅಹವಾಲು ಮಾಡುತ್ತಿರುವ ವ್ಯಕ್ತಿ ಸ್ವತಃ ಇಲ್ಲವೆ ಆತ ಬರವಣಿಗೆಯಲ್ಲಿ ಅಧಿಕಾರ ನೀಡಿದ ವ್ಯಕ್ತಿ ಆತನ ಪರವಾಗಿ ಇಲ್ಲವೆ ಸ್ವೀಕೃತಿಯಿರುವ ರಿಜಿಸ್ಟರ್ಡ್ ಅಂಚೆಯ ಮೂಲಕ ಸಲ್ಲಿಸಬಹುದು, ಚುನಾವಣಾಧಿಕಾರಿಯು ತನಗೆ ನೀಡಲ್ಪಟ್ಟ ಪ್ರತಿಯೊಂದು ಅಹವಾಲಿಗೆ ಸ್ವೀಕೃತಿಯನ್ನು ಬರವಣಿಗೆಯಲ್ಲಿ ನೀಡುತ್ತಾನೆ.

(೬) ಚುನಾವಣಾಧಿಕಾರಿಯು ಚುನಾವಣಾ ಅಹವಾಲನ್ನು ತನ್ನ ಅಭಿಪ್ರಾಯದೊಂದಿಗೆ ಅದನ್ನು ತಾನು ಸ್ವೀಕರಿಸಿದ ಒಂದು ವಾರದಲ್ಲಿ ಸರಕಾರಕ್ಕೆ ಕಳುಹಿಸಿಕೊಡುತ್ತಾನೆ.

**೨೦. ಚುನಾವಣಾ ಅಹವಾಲಿನ ಬಗ್ಗೆ ಸರಕಾರದ ಆದೇಶ–**

ಚುನಾವಣಾಧಿಕಾರಿಯಿಂದ ಚುನಾವಣಾ ಅಹವಾಲು ತಲುಪಿದ ನಂತರ ಅಹವಾಲು ಮಂಡಿಸಿರುವ ಪಕ್ಷಕ್ಕೆ ನಡವಳಿಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿ ಸರಕಾರ ತನಗೆ ಸರಿಕಂಡಂತೆ ವಿಚಾರಣೆ ಮಾಡಿ ಕೆಳಕಂಡ ಆದೇಶವನ್ನು ನೀಡುತ್ತದೆ.

(ಎ) ಅಹವಾಲನ್ನು ವಜಾ ಮಾಡಬಹುದು ಅಥವಾ

(ಬಿ) ಗೆದ್ದ ಅಭ್ಯರ್ಥಿಯ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಬಹುದು ಅಥವಾ

(ಸಿ) ಗೆದ್ದ ಅಭ್ಯರ್ಥಿಯ ಆಯ್ಕೆ ಅಸಿಂಧುವೆಂದು ಮತ್ತು ಅಹವಾಲುದಾರ ಅಥವಾ ಬೇರೆಯಾವುದೇ ಅಭ್ಯರ್ಥಿಯು ಆಯ್ಕೆಯಾಗಿದ್ದಾನೆ ಎಂದು ಘೋಷಿಸಬಹುದು

**೨೧. ಸಾಂದರ್ಭಿಕ ಖಾಲಿ ಹುದ್ದೆ :**

(೧) ವಿಭಾಗ ೩೩ ಉಪವಿಭಾಗ (೨)ರಲ್ಲಿ ಉಲ್ಲೇಖಿಸಲಾದ ಯಾವುದೇ ಮತಕ್ಷೇತ್ರದಿಂದ ಕೌನ್ಸಿಲ್ ಸದಸ್ಯ ಸ್ಥಾನದಲ್ಲಿ ಖಾಲಿ ಹುದ್ದೆ ಉಂಟಾದರೆ ಅದನ್ನು ಅನುಕೂಲ ಕಂಡಂತೆ ಕೂಡಲೇ ಚುನಾವಣೆ ಇಲ್ಲವೇ ನಾಮಕರಣದ ಮೂಲಕ ಭರ್ತಿ ಮಾಡಬೇಕು

(೨) ನಿಯಮ ೭ ರಿಂದ ೨೦ ರವರೆಗಿನ ಕರಾರು ಯಾವುದೇ ಮತಕ್ಷೇತ್ರದಿಂದ ನಡೆಯುವ ಉಪ ಚುನಾವಣೆಗೆ ಅನ್ವಯಿಸುತ್ತದೆ. ಅದು ಬದಲಾವಣೆಗೊಳಪಡಬಹುದು. ಮತಕ್ಷೇತ್ರದಲ್ಲಿ ಸದಸ್ಯನೊಬ್ಬನನ್ನು ಆಯ್ಕೆ ಮಾಡಲು ಅಹ್ವಾನಿಸುವ ಪ್ರಕಟಣೆಯ ತಾರೀಖಿನಂದು ಪ್ರಚಲಿತವಿರುವ ಮತದಾರರ ಪಟ್ಟಿ, ಬದಲಾವಣೆಗೆ ಒಳಪಟ್ಟು, ಆ ಚುನಾವಣೆಯಲ್ಲಿ ಆ ಮತಕ್ಷೇತ್ರದಲ್ಲಿನ ಉಪಚುನಾವಣೆಗೆ ಬಳಸುವ ಮತದಾರರ ಪಟ್ಟಿ ಎನಿಸುತ್ತದೆ.

## ಭಾಗ–III

### ರಿಜಿಸ್ಟ್ರಾರ್ (ಕುಲಸಚಿವ)

**೨೨. ರಿಜಿಸ್ಟ್ರಾರ್ ನೋಂದಾಯಿತ ವೈದ್ಯರಾಗಿರುವುದು :** ವಿಭಾಗ ೧೧ ರ ಉಪವಿಭಾಗ(೧)ರ ಅಡಿಯಲ್ಲಿ ನಿಯೋಜಿಸಲ್ಪಡುವ ರಿಜಿಸ್ಟ್ರಾರ್ ಅಧಿನಿಯಮ ಅಡಿಯಲ್ಲಿ ನೋಂದಾಯಿತ ವೈದ್ಯರಾಗಿರುತ್ತಾರೆ.

**೨೩. ರಾಜ್ಯ ಮೆಡಿಕಲ್ ರಿಜಿಸ್ಟರ್ ಮತ್ತಿತರ ರಿಜಿಸ್ಟರ್‌ಗಳನ್ನು ರಕ್ಷಿಸುವುದು–** ರಿಜಿಸ್ಟ್ರಾರ್ ರಾಜ್ಯ ಮೆಡಿಕಲ್ ರಿಜಿಸ್ಟರ್ ಮತ್ತು ಅಂತಹ ಇತರ ದಾಖಲೆಗಳನ್ನು ಅಧಿನಿಯಮ, ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಕಾಯ್ದಿರಿಸಬೇಕು.

**೨೪. ಕೌನ್ಸಿಲ್ ಸಭೆಗಳಲ್ಲಿ ರಿಜಿಸ್ಟ್ರಾರ್ ಹಾಜರಿರುವುದು –** ಕೌನ್ಸಿಲ್‌ನ ಪ್ರತಿಯೊಂದು ಸಭೆಯಲ್ಲಿ ರಿಜಿಸ್ಟ್ರಾರ್ ಹಾಜರಿದ್ದು, ಆ ಸಭೆಗಳ ನಡವಳಿಗಳ ಸಂಕ್ಷಿಪ್ತ ವರದಿಯ ದಾಖಲಿಸಬೇಕು.

**೨೫. ಕೌನ್ಸಿಲ್‌ನ ಪತ್ರ ವ್ಯವಹಾರವನ್ನು ರಿಜಿಸ್ಟ್ರಾರ್ ಕೈಕೊಳ್ಳುವುದು–** ರಿಜಿಸ್ಟ್ರಾರ್, ಕೌನ್ಸಿಲ್‌ನ ಕಾರ್ಯದರ್ಶಿಯಾಗಿ ಕೌನ್ಸಿಲ್‌ನ ಎಲ್ಲ ಪತ್ರ ವ್ಯವಹಾರಗಳನ್ನು ಕೈಕೊಳ್ಳಬೇಕು ಮತ್ತು ನಿಯಮ ಹಾಗೂ ನಿಬಂಧನೆಗಳಿಗೆ, ಅಧಿನಿಯಮಕ್ಕೆ ಅನುಗುಣವಾಗಿ ಸೂಚಿಸಲ್ಪಟ್ಟ ಎಲ್ಲ ಪ್ರಕಟಣೆಗಳನ್ನು ಕೊಡಬೇಕು.

**೨೬. ರಿಜಿಸ್ಟ್ರಾರ್ ಎಲ್ಲ ಕಾರ್ಯಗಳನ್ನು ಅಧಿನಿಯಮದ ಅಡಿಯಲ್ಲಿ ನಿರ್ವಹಿಸುವುದು–** ರಿಜಿಸ್ಟ್ರಾರ್, ಕೊಡಮಾಡಿದ ಅವಕಾಶದಂತೆ, ನಿಯಮ ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ತಮ್ಮ ಹುದ್ದೆ ಅಪೇಕ್ಷಿಸಿದ ಕಾರ್ಯಗಳನ್ನು ಕೈಕೊಳ್ಳಬೇಕು.

**೨೭. ದಾಖಲೆಗಳ ರಕ್ಷಣೆ–** ರಿಜಿಸ್ಟ್ರಾರ್ ಎಲ್ಲ ದಾಖಲೆಗಳನ್ನು ಸುರಕ್ಷಿತವಾಗಿ ಕಾಯ್ದಿರಿಸತಕ್ಕದ್ದು.

**೨೮. ಕೌನ್ಸಿಲ್ ಸದಸ್ಯರ ಹೆಸರುಗಳು ಮತ್ತು ಜಾಗ ಖಾಲಿಯಾದುದರ ಮಾಹಿತಿಯ ದಾಖಲೆಯನ್ನಿರಿಸುವುದು –** ಕೌನ್ಸಿಲ್‌ನ ಪ್ರತಿಯೊಬ್ಬ ಸದಸ್ಯರ

ಹೆಸರು, ಅವರು ನಿಯೋಜಿಸಲ್ಪಟ್ಟ ಅಥವಾ ಆಯ್ದೆಯಾದುದನ್ನು ಪ್ರಕಟಿಸಿದ ದಿನ, ನೇಮಕಗೊಂಡ ಕಾಲಾವಧಿ ಮತ್ತು ಅವರ ಸದಸ್ಯತ್ವ ಕೊನೆಗೊಳ್ಳುವ ದಿನದ ದಾಖಲೆಗಳನ್ನು ಇಡಬೇಕು. ರಜಿಸ್ಟರನ್ನು ಸರಿಯಾಗಿ ಕಾಯ್ದಿರಿಸಿ ಅದರಲ್ಲಿ ಅಧಿಕಾರ ಹೊಂದಿರುವ ವ್ಯವಸ್ಥೆ, ನಿಯೋಜಿಸುವ ದಿನ ಅಥವಾ ಚುನಾವಣೆ ನಡೆಸಿ ಹೊಸ ನಿಯೋಜನೆ ಮಾಡುವ ಇಲ್ಲವೆ ಹೊಸ ಸದಸ್ಯನ ಆಯ್ಕೆಗಾಗಿ ಚುನಾವಣೆ ಮಾಡುವ ವಿವರಗಳನ್ನು ಕಾಯ್ದಿರಿಸಬೇಕು.

**೨೯. ಕೌನ್ಸಿಲ್ ಪರವಾಗಿ ಖಾತೆ ತೆರೆಯುವುದು** – ಸ್ಟೇಟ್ ಬ್ಯಾಂಕ್ ಮೈಸೂರು, ಕೇಂದ್ರ ಕಛೇರಿ, ಬೆಂಗಳೂರಿನಲ್ಲಿ ಕೌನ್ಸಿಲ್ ಪರವಾಗಿ ಖಾತೆ ತೆರೆಯಬೇಕು ಮತ್ತು ಕೌನ್ಸಿಲ್‌ನ ಎಲ್ಲ ಹಣವನ್ನು ಸ್ಟೇಟ್ ಬ್ಯಾಂಕಿನಲ್ಲಿ ಜಮೆ ಮಾಡತಕ್ಕದ್ದು.

**೩೦. ಹಣದ ಜಮೆ**– ಕೌನ್ಸಿಲ್‌ಗೆ ಜಮೆಯಾಗುವ ಎಲ್ಲ ಹಣವನ್ನು ರಿಜಿಸ್ಟ್ರಾರ್ ಸ್ವೀಕರಿಸುತ್ತಾರೆ ಮತ್ತು ಅದಕ್ಕೆ ರಸೀದಿ ಕೊಡುತ್ತಾರೆ. ಆ ಹಣವನ್ನು ಬ್ಯಾಂಕಿನಲ್ಲಿ ಕೌನ್ಸಿಲ್ ಹೆಸರಿಗೆ ಜಮೆ ಮಾಡುತ್ತಾರೆ ಮತ್ತು ಯಾವುದೇ ಸಮಯದಲ್ಲಿ ತಮ್ಮ ಬಳಿ ೧೦೦ ರೂಪಾಯಿಗಿಂತ ಹೆಚ್ಚರಿಸಿಕೊಳ್ಳುವಂತಿಲ್ಲ.

**೩೧. ಜಮಾ ಮತ್ತು ಖರ್ಚಿನ ಲೆಕ್ಕ ವಿವರ** – ರಿಜಿಸ್ಟ್ರಾರ್ ಪ್ರತಿ ವರುಷ ಜುಲೈ ತಿಂಗಳಲ್ಲಿ ಹಿಂದಿನ ಆರ್ಥಿಕ ವರುಷದ ಜಮಾ ಮತ್ತು ಖರ್ಚಿನ ವಿವರಗಳನ್ನು ಸಿದ್ಧಪಡಿಸಿ ಕೌನ್ಸಿಲ್‌ನ ಗಮನವನ್ನು ಸೆಳೆಯಬೇಕು.

**೩೨. ಪ್ರತಿ ವರುಷದ ಲೆಕ್ಕ ಪತ್ರ ತಯಾರಿಕೆ** – ರಿಜಿಸ್ಟ್ರಾರರು ವಾರ್ಷಿಕ ಲೆಕ್ಕ ಪತ್ರವನ್ನು ತಯಾರಿಸಬೇಕು.

**೩೩. ಮುಂಗಡ ಪತ್ರ** – ಪ್ರತಿ ವರುಷ ಏಪ್ರಿಲ್ ಮೊದಲನೆಯ ದಿನ ಪ್ರಾರಂಭವಾಗುವಂತೆ ಕೌನ್ಸಿಲ್‌ನ ಮುಂಗಡ ಪತ್ರವನ್ನು ಕೌನ್ಸಿಲ್‌ನ ಸಭೆಯಲ್ಲಿ ಮಂಡಿಸತಕ್ಕದ್ದು. ಈ ಕಾರ್ಯವನ್ನು ವರುಷ ಪ್ರಾರಂಭವಾಗುವ ಸಾಕಷ್ಟು ಕಾಲದ ಮೊದಲು ಮಾಡಬೇಕು ಇಲ್ಲವೆ ಅದನ್ನು ಕೌನ್ಸಿಲ್ ಸದಸ್ಯರಿಗೆ ಸಾಕಷ್ಟು ಕಾಲ ಮೊದಲು ನೀಡಿ ಅದನ್ನು ಕೌನ್ಸಿಲ್ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕು.

ಸಭೆಗೆ ನೀಡಿದ ಈ ಅಂದಾಜು ಹಾಗೂ ಕೌನ್ಸಿಲ್ ಹೊಂದಿರುವ ಸಾಲ ಸೋಲಗಳನ್ನು ಪರಿಶೀಲಿಸಿ ಕೌನ್ಸಿಲ್ ತನ್ನ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಕೈಕೊಳ್ಳುವ ಅವಕಾಶ ನೀಡುತ್ತದೆ. ಅದು ತನ್ನ ಆದಾಯದ, ಜೊತೆಗೆ ಸಾಮಾನ್ಯವಾಗಿ ಬರಬಹುದೆಂದು ಲೆಕ್ಕ ಹಾಕಿದ

ಆದಾಯವನ್ನು ಒಳಗೊಂಡಿರುತ್ತದೆ. ಅಂತಹ ಅನುದಾನ ಸರಕಾರದ ಕೊಡುಗೆಯಾಗಿರಬಹುದು ಮತ್ತು ನೋಂದಣಿ ಮಾಡುವುದರಿಂದ ಅಥವಾ ಬೇರೆ ಮೂಲಗಳಿಂದ ಬರುವ ಎಲ್ಲ ಶುಲ್ಕ ಸೇರ್ಪಡೆಯಾಗಿರುತ್ತದೆ.

**೩೪. ಮುಂಗಡ ಪತ್ರದ ಪರಿಶೀಲನೆ** – ಕೌನ್ಸಿಲ್ ತನ್ನ ಪರಿಶೀಲನೆ ಗೊಪ್ಪಿಸಿದ ಅಂದಾಜನ್ನು ಪರಿಶೀಲಿಸಿ, ಯಾವ ಬದಲಾವಣೆಯಿಲ್ಲದೆ ಇಲ್ಲವೆ ತನಗೆ ಸರಿ ಕಾಣಿಸಿದಂತೆ ಅಗತ್ಯ ಬದಲಾವಣೆ ಮಾಡಿ ಅನುಮೋದನೆ ನೀಡಬಹುದು.

**೩೫. ಬಿಲ್ಲುಗಳ ಪಾವತಿ** – ಹಣ ಸಂದಾಯಕ್ಕೆ ಸಲ್ಲಿಸುವ ಬಿಲ್ಲು ಅಥವಾ ರಶೀದಿಯನ್ನು ಸಲ್ಲಿಸಿದಾಗ ಅದನ್ನು ರಿಜಿಸ್ಟ್ರಾರ್ ಪಡೆದು ಪರಿಶೀಲಿಸುತ್ತಾರೆ. ಒಂದು ವೇಳೆ ಹಕ್ಕು ಕೋರಿಕೆ ೨೦ ರೂಪಾಯಿಗಳಿಗಿಂತ ಹೆಚ್ಚಿಗೆ ಇದ್ದು ೫೦೦ ರೂಪಾಯಿಗಳಿಗಿಂತ ಹೆಚ್ಚಿಲ್ಲದಿದ್ದರೆ ಮತ್ತು ಅಂತಹ ಬಿಲ್ ಅಥವಾ ರಶೀದಿ ಸರಿಯಾಗಿದ್ದರೆ ಅಧ್ಯಕ್ಷರ ಪೂರ್ವಭಾವಿ ಅನುಮತಿ ಪಡೆದು ಅದನ್ನು ಪಾವತಿಸಬಹುದು. ಒಂದು ವೇಳೆ ಹಕ್ಕು ಕೋರಿಕೆ ೫೦೦ ರೂಪಾಯಿಗಳನ್ನು ಮಿಕ್ಕಿದ್ದರೆ ಅದು ಕೌನ್ಸಿಲ್‌ನಲ್ಲಿ ಪರಿಶೀಲಿಸಲ್ಪಟ್ಟು ಒಪ್ಪಿಗೆ ನೀಡುವ ಮೊದಲು ಸಂದಾಯ ಮಾಡಲಾಗದು.

**೩೬. ಹಣದ ದಾಖಲೆ** – ಕೌನ್ಸಿಲ್‌ಗೆ ಜಮೆಯಾದ ಇಲ್ಲವೆ ವೆಚ್ಚ ಮಾಡಿದ ಹಣದ ವಿವರಗಳನ್ನು ರಿಜಿಸ್ಟ್ರಾರ್ ಕೂಡಲೇ ಲೆಕ್ಕದ ಪುಸ್ತಕದಲ್ಲಿ ದಾಖಲಿಸಬೇಕು.

**೩೭. ಚೆಕ್‌ಗಳ ಸಹಿ** – ಎಲ್ಲ ಚೆಕ್‌ಗಳು ರಿಜಿಸ್ಟ್ರಾರ್ ಮತ್ತು ಅಧ್ಯಕ್ಷರಿಂದ ಜಂಟಿಯಾಗಿ ಸಹಿಯಾಗಬೇಕು.

**೩೮. ಲೆಕ್ಕ ಪತ್ರ ತಪಾಸಣೆ** – ಕೌನ್ಸಿಲ್‌ನ ಲೆಕ್ಕ ಪತ್ರಗಳನ್ನು ರಾಜ್ಯ ಸರಕಾರ ಸೂಚಿಸಿದ ಅಧಿಕಾರಿಗಳಿಂದ ಲೆಕ್ಕ ಪರಿಶೋಧನೆ ಮಾಡಿಸಬೇಕು.

ಭಾಗ – IV

## ವೃತ್ತಿಪರ ವೈದ್ಯರ ನೋಂದಣಿ

**೩೯. ವಿಭಾಗ ೧೩ರ ಉಪ ವಿಭಾಗ (೧)ರ ಅಡಿಯಲ್ಲಿ ವೃತ್ತಿ ಪರ ವೈದ್ಯರ ನೋಂದಣಿ**

(೧) ಕರ್ನಾಟಕ ಹೊಂದಾಣಿಕೆ ನಿಯಮಗಳ ಆಜ್ಞೆ ೧೯೫೬ ಮತ್ತು ವಿಭಾಗ ೩೪ ರಿಂದ ರದ್ದುಗೊಳಿಸಿದ. ಕಾನೂನುಗಳ ನಿಬಂಧನೆಗಳಿಗನುಗುಣವಾಗಿ ಇರಿಸಿರುವ ರಿಜಿಸ್ಟರ್‌ನಲ್ಲಿ ಹೆಸರು ಸೇರ್ಪಡೆಯಾಗದ ಪ್ರತಿಯೊಬ್ಬ ವ್ಯಕ್ತಿ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಧಿನಿಯಮ ೧೯೫೬ರ ಅನುಸೂಚನೆಯಲ್ಲಿ ಸೇರ್ಪಡೆಯಾದ ವೈದ್ಯಕೀಯ ವಿದ್ಯಾರ್ಹತೆಯನ್ನು ಹೊಂದಿದ್ದೇನೆಂಬ ಹಕ್ಕಿನ ಆಧಾರದಲ್ಲಿ, ರಿಜಿಸ್ಟ್ರಾರ್ ಅವರಿಗೆ ತನ್ನ ಹೆಸರನ್ನು ರಾಜ್ಯದ ಮೆಡಿಕಲ್ ರಿಜಿಸ್ಟರ್‌ನಲ್ಲಿ ಸೇರಿಸಬೇಕೆಂದು ಅರ್ಜಿ ಸಲ್ಲಿಸಬೇಕು. ತನ್ನ ಅರ್ಜಿಯ ಜೊತೆ ವಿಭಾಗ ೧೩ರ ಉಪವಿಭಾಗ (೧) ಕ್ಕೆ ಅನುಗುಣವಾಗಿ ವಿವರಗಳನ್ನು ನೀಡಬೇಕು ಮತ್ತು ಹದಿನೈದು ರೂಪಾಯಿಗಳ ಶುಲ್ಕವನ್ನು ಕೊಡಬೇಕು.

(೨) ವ್ಯಕ್ತಿಗಳ ಹೆಸರು, ವಿಭಾಗ ೩೪ರಲ್ಲಿ ಉಲ್ಲೇಖಿಸಿದಂತೆ, ಮೈಸೂರು ಹೊಂದಾಣಿಕೆ ನಿಯಮಗಳ ಆಜ್ಞೆ ೧೯೫೬ರಲ್ಲಿ ರದ್ದು ಮಾಡಿದ ಕಾನೂನುಗಳನ್ನು ಅಳವಡಿಸಿಕೊಂಡಿರುವ ಕಾನೂನಿನ ಪ್ರಕಾರ ಮತ್ತು ಈ ಅಧಿನಿಯಮದಡಿ ನೋಂದಣಿಯಾಗಬೇಕೆಂದು ಯಾರು ಹಕ್ಕು ಮಂಡಿಸುತ್ತಾರೋ ಅವರು ರಿಜಿಸ್ಟ್ರಾರ್ ಅವರಿಗೆ ಅರ್ಜಿ ಸಲ್ಲಿಸುತ್ತಾರೆ. ಅದರೊಡನೆ ತನ್ನ ಹೆಸರು ರದ್ದು ಮಾಡಿದ ಕಾನೂನಿನ ಅಡಿ ಇರಿಸಿಕೊಂಡಿದ್ದ ವೃತ್ತಿಪರ ವೈದ್ಯರ ಹೆಸರಿನ ರಿಜಿಸ್ಟರ್‌ನಲ್ಲಿ ಸೇರ್ಪಡೆಯಾಗಿದ್ದರೆ ಅದರ ಬಗೆಗಿನ ಪ್ರಮಾಣ ಪತ್ರವನ್ನು ಲಗತ್ತಿಸಬೇಕು ಮತ್ತು ಎರಡು ರೂಪಾಯಿಗಳ ಶುಲ್ಕವನ್ನು

ಪಾವತಿಸಬೇಕು. ಅಂತಹ ವ್ಯಕ್ತಿಗಳ ಮೂಲ ಪ್ರಮಾಣ ಪತ್ರವನ್ನು ರಿಜಿಸ್ಟ್ರಾರ್ ಅಪೇಕ್ಷಿಸಿದರೆ ಹಾಜರು ಪಡಿಸಬೇಕು.

(೩) ಉಪನಿಯಮ (೧) ಮತ್ತು ಉಪನಿಯಮ (೨)ರಲ್ಲಿ ಉಲ್ಲೇಖಿಸಿದಂತೆ ಅರ್ಜಿದಾರ ತನ್ನ ಅರ್ಜಿಯ ಜೊತೆ ತಾನು ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೮೯೮ (ಸೆಂಟ್ರಲ್ ಅಧಿನಿಯಮ ೫, ೧೮೯೮) ರಲ್ಲಿ ವ್ಯಾಖ್ಯಾನಿಸಿದಂತೆ ಗ್ರಹಿಸುವ ಕಾನೂನುಬಾಹಿರ ಕೃತ್ಯಕ್ಕಾಗಿ ಶಿಕ್ಷೆಗೆ ಒಳಗಾಗಿದ್ದೀರೋ ಹೇಗೆಂಬುದರ ಬಗ್ಗೆ ಅಥವಾ ಅವರು ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅಥವಾ ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಥವಾ ಭಾರತದ ಬೇರೆ ಯಾವುದೇ ರಾಜ್ಯದ ಮೆಡಿಕಲ್ ಕೌನ್ಸಿಲ್‌ನಿಂದ ವೃತ್ತಿಯಲ್ಲಿ ಯಾವುದೇ ಅಸಭ್ಯ ನಡವಳಿಕೆಯಿಂದ ತಪ್ಪಿತಸ್ಥನಾಗಿದ್ದುದರ ಬಗ್ಗೆ ವಿವರ ನೀಡಬೇಕು.

**೪೦. ತಾತ್ಕಾಲಿಕವಾಗಿ ನೋಂದಣಿಯಾದ ವೃತ್ತಿಪರ ವೈದ್ಯರ ಪಟ್ಟಿಯನ್ನು ಕಾಪಾಡುವುದು** – ರಿಜಿಸ್ಟ್ರಾರರು ತಾತ್ಕಾಲಿಕವಾಗಿ ನೋಂದಣಿಯಾದ ವೃತ್ತಿಪರ ವೈದ್ಯರ ಪಟ್ಟಿಯನ್ನು ಕಾಯ್ದಿರಿಸುವರು. ಅಲ್ಲದೆ ರಾಜ್ಯ ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ಸೂಚಿಸಿದ ಫಾರಂನಲ್ಲಿ ಅಂತಹ ವೃತ್ತಿಪರ ವೈದ್ಯರಿಗೆ ಪ್ರಮಾಣ ಪತ್ರವನ್ನು ನೀಡುತ್ತಾರೆ.

**೪೧. ವಿಭಾಗ ೧೩ರ ಅಡಿಯಲ್ಲಿ ರಿಜಿಸ್ಟರ್ ಮಾಡಲು ಬೇಕಾದ ವಿದ್ಯಾರ್ಹತೆ :** ವಿಭಾಗ ೧೩ರ ಅಡಿಯಲ್ಲಿ ನೋಂದಣಿಗೆ ಅರ್ಜಿ ಸಲ್ಲಿಸುವ ಯಾವುದೇ ವ್ಯಕ್ತಿ ತನ್ನ ಅರ್ಜಿಯಲ್ಲಿ ತಾನು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಅಧಿನಿಯಮ ೧೯೫೬ರ ಅಧಿನಿಯಮದಲ್ಲಿ ಸೇರ್ಪಡೆಯಾಗಿರುವ ಮಾನ್ಯತೆ ಪಡೆದ ಯಾವುದೇ ವೈದ್ಯಕೀಯ ವಿದ್ಯಾರ್ಹತೆಗಳಲ್ಲಿ ಒಂದನ್ನು ತಾನು ಹೊಂದಿದ್ದು ಅದು ತಾನು ನೋಂದಣಿಯಾಗುವ ಅರ್ಹತೆ ಪಡೆದಿದ್ದೇನೆಂಬುದನ್ನು ಸೂಚಿಸುತ್ತದೆ. ಅಲ್ಲದೆ ಆತ ತನ್ನ ಮಾನ್ಯ ಮಾಡಿದ ವೈದ್ಯಕೀಯ ವಿದ್ಯಾರ್ಹತೆ ಪಡೆಯಲು ತಾನು ಕ್ರಮಾನುಸಾರವಾಗಿ ಅಧ್ಯಯನ ಮಾಡಿದ ಭಾಗವಾಗಿ ನಿರ್ದಿಷ್ಟ ಅವಧಿಯ ತರಬೇತಿಯನ್ನು ಪಡೆದ ಸಂಸ್ಥೆಯ ವೈದ್ಯಾಧಿಕಾರಿಯಿಂದ ದೊರಕಿಸಿದ ಪ್ರಮಾಣ ಪತ್ರವನ್ನು ನೀಡಬೇಕು.

**೪೨. ನೋಂದಣಿ ಪ್ರಮಾಣ ಪತ್ರ** – ಅಧಿನಿಯಮದ ಅಡಿಯಲ್ಲಿ ನೋಂದಣಿಯಾದ ಪ್ರತಿಯೊಬ್ಬ ವ್ಯಕ್ತಿಗೆ ಮೆಡಿಕಲ್ ಕೌನ್ಸಿಲ್ ರೂಪಿಸಿದ ರೀತಿಯ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

**೪೩. ನೋಂದಣಿಯ ನವೀಕರಣ–** ಅಧಿನಿಯಮದಡಿಯಲ್ಲಿ ನೋಂದಣಿಯಾದ ಪ್ರತಿಯೊಬ್ಬ ವೃತ್ತಿ ಪರ ವೈದ್ಯ ಕಾಲಮಿತಿಯೊಳಗೆ ಮೆಡಿಕಲ್ ಕೌನ್ಸಿಲ್‌ಗೆ ತನ್ನ ಹೆಸರನ್ನು ರಿಜಿಸ್ಟರ್‌ನಲ್ಲಿ ಮುಂದುವರಿಸುವುದಕ್ಕೆ ಪ್ರತಿ ವರುಷ ಡಿಸೆಂಬರ್ ೩೧ ರಂದು ಇಲ್ಲವೆ ಅದಕ್ಕೂ ಮೊದಲು ನವೀಕರಣ ಶುಲ್ಕವಾದ ಎರಡು ರೂಪಾಯಿಗಳೊಡನೆ ಅರ್ಜಿ ಸಲ್ಲಿಸುತ್ತಾನೆ.

**೪೪. ವಿಳಾಸದ ಬದಲಾವಣೆ –** ಪ್ರತಿಯೊಬ್ಬ ರಿಜಿಸ್ಟರ್ ಆದ ವೃತ್ತಿಪರ ವೈದ್ಯ, ತನ್ನ ಹೆಸರಿನಲ್ಲಿ ಅಥವಾ ಶಾಶ್ವತ ವಿಳಾಸದಲ್ಲಿ ಏನಾದರೂ ಬದಲಾವಣೆಯಾದುದನ್ನು ರಿಜಿಸ್ಟರ್‌ನಲ್ಲಿ ನಮೂದಿಸುವುದಕ್ಕೆ ಕೂಡಲೇ ರಿಜಿಸ್ಟ್ರಾರ್ ಅವರಿಗೆ ಸೂಚನೆ ನೀಡುವನು. ಹೆಸರಿನಲ್ಲಿನ ಬದಲಾವಣೆಯನ್ನು ಸೇರಿಸಲು ಬೇಡಿಕೆಯಿದ್ದರೆ ಹೆಸರು ಬದಲಾವಣೆಯ ದಾಖಲೆಗಳ ಸಾಕ್ಷ್ಯಾಧಾರವನ್ನು ಕೂಡಾ ರಿಜಿಸ್ಟ್ರಾರ್ ಅವರಿಗೆ ಸಲ್ಲಿಸತಕ್ಕದ್ದು.

**೪೫. ರಿಜಿಸ್ಟರ್ ಆದ ವ್ಯಕ್ತಿಗಳ ಸಂಖ್ಯೆಗೆ ಸಂಬಂಧಿಸಿದಂತೆ ಕರ್ನಾಟಕ ಮೆಡಿಕಲ್ ರಿಜಿಸ್ಟರ್‌ನಲ್ಲಿ ನಮೂದಿಸುವುದು –** ರಾಜ್ಯ ಮೆಡಿಕಲ್ ರಿಜಸ್ಟರ್‌ನ ಕೊನೆಯಲ್ಲಿ ಕೆಳಕಂಡ ವಿವರಗಳನ್ನು ನಮೂದಿಸಬೇಕು.

(೧) ಪ್ರಕಟ ಮಾಡಿದ ಹೆಸರುಗಳ ಒಟ್ಟು ಸಂಖ್ಯೆ

(೨) ಪ್ರಚಲಿತ ವರುಷದಲ್ಲಿ ನೋಂದಣಿಯಾದ ವ್ಯಕ್ತಿಗಳ ಹೆಸರುಗಳನ್ನು ರಿಜಿಸ್ಟರ್‌ದಲ್ಲಿ ಸೇರ್ಪಡೆ ಮಾಡಿರುವವರ ಸಂಖ್ಯೆ.

(೩) ಪ್ರಚಲಿತ ವರುಷದಲ್ಲಿ ನವೀಕರಣಗೊಂಡ ವ್ಯಕ್ತಿಗಳ ಸಂಖ್ಯೆ

(೪) ಪ್ರಚಲಿತ ವರುಷದಲ್ಲಿ ಹೆಸರುಗಳನ್ನು ನಿರ್ದಿಷ್ಟ ವಿಭಾಗ ಅನುಸರಿಸಿ ರಿಜಿಸ್ಟರ್‌ನಿಂದ ತೆಗೆದು ಹಾಕಿರುವವರ ಸಂಖ್ಯೆ.

(೫) ಸಾವಿನ ಕಾರಣದಿಂದ ಅವರ ಹೆಸರುಗಳನ್ನು ತೆಗೆದುಹಾಕಲ್ಪಟ್ಟವರ ಸಂಖ್ಯೆ

(೬) ವೈದ್ಯ ವೃತ್ತಿ ಕೈಕೊಳ್ಳಲು ತಾತ್ಕಾಲಿಕ ರಿಜಿಸ್ಟ್ರೇಷನ್ ನೀಡಲ್ಪಟ್ಟವರ ಸಂಖ್ಯೆ.

**೪೬. ರಿಜಿಸ್ಟ್ರಾರರ ನಿರ್ಣಯದ ವಿರುದ್ಧ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೆ ಮನವಿ –** (೧) (ಎ) ರಿಜಿಸ್ಟ್ರಾರ್ ಅವರ ನಿರ್ಣಯದಿಂದ ತೊಂದರೆಗೊಳಗಾದ ಯಾವುದೇ ವ್ಯಕ್ತಿ ಮೊದಲ ರಿಜಿಸ್ಟ್ರೇಷನ್ ಬಗ್ಗೆ ಇಲ್ಲವೆ ಅನಂತರ ಮಾರ್ಪಾಟುಗೊಳಿಸಿರುವುದರ ಬಗ್ಗೆ ರಿಜಿಸ್ಟ್ರಾರ್ ಅವರಿಗೆ ತಿಳಿಸಿರುವ

ತಾರೀಖಿನಿಂದ ಮೂವತ್ತು ದಿನಗಳ ಒಳಗಾಗಿ ಮೆಡಿಕಲ್ ಕೌನ್ಸಿಲ್‌ಗೆ ಮನವಿಯನ್ನು ದಾಖಲಿಸತಕ್ಕದ್ದು.

(ಬಿ) ಮನವಿಯನ್ನು ಅಧ್ಯಕ್ಷರಿಗೆ ಬರೆಯಲಾಗುತ್ತದೆ. ಅದರಲ್ಲಿ ಸಂಬಂಧಿಸಿದ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿರುತ್ತದೆ. ಅದು ತನ್ನ ಕೋರಿಕೆಗೆ ಆಧಾರವಾಗಿ ಅರ್ಜಿದಾರರ ವಾದಕ್ಕೆ ಬೇಕಾದ ಅಂಶಗಳನ್ನು ಒಳಗೊಂಡಿರುತ್ತದೆ. ತಾನು ಮನವಿ ಮಾಡಿದ ವಿಷಯದ ಬಗ್ಗೆ ರಿಜಿಸ್ಟ್ರಾರ್ ತೆಗೆದುಕೊಂಡ ನಿರ್ಣಯಕ್ಕೆ ಸಂಬಂಧಿಸಿದಂತೆ ರಿಜಿಸ್ಟ್ರಾರ್‌ಗೆ ಮಾಡಿದ ಅರ್ಜಿಯ ಪ್ರತಿ ಮತ್ತು ಅದರ ಬಗ್ಗೆ ತೆಗೆದುಕೊಂಡ ನಿರ್ಣಯದ ಬಗ್ಗೆ ರಿಜಿಸ್ಟ್ರಾರ್ ಬರೆದ ಪತ್ರದ ಪ್ರತಿಯನ್ನು ಅಹವಾಲಿನ ಜೊತೆ ಲಗತ್ತಿಸಿರಬೇಕು.

(ಸಿ) ಮೇಲೆ ಹೇಳಿದ ಮನವಿ ದೊರೆತ ತಕ್ಷಣ ಅಧ್ಯಕ್ಷರು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ರಿಜಿಸ್ಟ್ರಾರ್ ಅವರಿಂದ ಪಡೆದುಕೊಂಡು, ಆ ವಿಷಯದ ಬಗ್ಗೆ ರಿಜಿಸ್ಟ್ರಾರ್ ಅಭಿಪ್ರಾಯವನ್ನು ಪಡೆದುಕೊಳ್ಳುತ್ತಾರೆ.

(ಡಿ) ನಂತರ ಅಧ್ಯಕ್ಷರು ಈ ಮನವಿಯನ್ನು ಕೌನ್ಸಿಲ್‌ನ ಸಭೆಯಲ್ಲಿ ಪರಿಶೀಲಿಸುವ ಒಂದು ವಿಷಯವಾಗಿ ಸೇರಿಸಲು ರಿಜಿಸ್ಟ್ರಾರ್ ಅವರಿಗೆ ನಿರ್ದೇಶಿಸುತ್ತಾರೆ.

(ಇ) ಅಧ್ಯಕ್ಷರು ಅದರ ಬಗ್ಗೆ ಸಲ್ಲಿಸಿದ ವಾದದ ಸಾರಾಂಶವನ್ನು ಸಿದ್ಧಪಡಿಸಿ, ಅದನ್ನು ಕೌನ್ಸಿಲ್‌ಗೆ ನೀಡುವರು.

(೨) ದಾವೆಯ ಸನ್ನಿವೇಶಗಳನ್ನು ತನಗೆ ಸರಿಕಂಡಂತೆ ವಿಚಾರಣೆ ಮಾಡುವಾಗ ಮೆಡಿಕಲ್ ಕೌನ್ಸಿಲ್ ಅಹವಾಲು ಹೇಳಿಕೊಳ್ಳಲು ಸಂಬಂಧಿಸಿದ ವ್ಯಕ್ತಿಗೆ ನೋಟಿಸ್ ನೀಡಿ ನಿಗದಿಪಡಿಸಿದ ದಿನ ಮತ್ತು ಸಮಯದಲ್ಲಿ ಅವಕಾಶವನ್ನು ಕೊಡಲಾಗುತ್ತದೆ. ನಿರ್ಣಯಕ್ಕೆ ಬರುವ ಮೊದಲು ಕೌನ್ಸಿಲ್ ಆ ವ್ಯಕ್ತಿಯನ್ನು ದಾವೆಯ ಪರಿಶೀಲನೆಗೆ ಅಗತ್ಯವೆನಿಸುವ ದಾಖಲೆಗಳನ್ನು ಹಾಜರುಪಡಿಸಲು ಕೇಳಬಹುದು. ಎಲ್ಲ ಅಂಶಗಳನ್ನು ಪರಿಶೀಲಿಸಿ, ಕೌನ್ಸಿಲ್ ಈ ಪ್ರಶ್ನೆಯನ್ನು ಸಭೆಯಲ್ಲಿ ಮಂಡಿಸಿ, ಮನವಿ ಬಗ್ಗೆ ಕೌನ್ಸಿಲ್ ತೆಗೆದು

ಕೊಂಡ ನಿರ್ಣಯವನ್ನು ಸಂಬಂಧಿಸಿದ ವ್ಯಕ್ತಿಗೆ ಬರವಣಿಗೆಯಲ್ಲಿ ತಿಳಿಸುವುದು.

**೪೭ ಶುಲ್ಕ** – ಕೆಳಕಂಡಂತೆ ಕೌನ್ಸಿಲ್ ಶುಲ್ಕವನ್ನು ವಿಧಿಸುತ್ತದೆ –

(೧) ಮೊದಲ ನೋಂದಣಿಗೆ (ವಿಭಾಗ ೧೩ (೧) ) ಹದಿನೈದು ರೂಪಾಯಿಗಳು

(೨) ರದ್ದುಪಡಿಸಿದ ಕಾನೂನುಗಳ ಅಡಿಯಲ್ಲಿ (ವಿಭಾಗ ೧೩ರ – ಉಪವಿಭಾಗ (೧)ರ ಪ್ರಕಾರ) ಆಗಲೇ ರಿಜಿಸ್ಟರ್‌ಆದ ವ್ಯಕ್ತಿಯ ಮೊದಲ ನೋಂದಣಿಗೆ, ಎರಡು ರೂಪಾಯಿಗಳು

(೩) ವಾರ್ಷಿಕ ನವೀಕರಣಕ್ಕೆ (ವಿಭಾಗ ೧೯(೧) ಎರಡು ರೂಪಾಯಿಗಳು)

(೪) ದಾಖಲೆಯಲ್ಲಿ ನಮೂದಿಸಿ ಅಂಶಗಳ ದೃಢೀಕರಣಕ್ಕೆ ಪ್ರತಿ ಮೂರು ರೂಪಾಯಿಗಳು

## ಅನುಬಂಧ

## ಫಾರಂ ಎ

## (ನಿಯಮ ೩-ಎ ನೋಡಿ)

## ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಪ್ರಕಟಣೆಯನ್ನು ಈ ಕೆಳಕಂಡಂತೆ ನೀಡಲಾಗಿದೆ.

೧) ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆಯನ್ನು ನಡೆಸಲಾಗುವುದು.

೨) ನಾಮ ಪತ್ರಗಳನ್ನು ಅಪರಾಹ್ನ ೧೧ ಮತ್ತು ಮಧ್ಯಾಹ್ನ ೩ ಘಂಟೆಯ ಮಧ್ಯಂತರದಲ್ಲಿ ಅಭ್ಯರ್ಥಿ ಅಥವಾ ಆತನ ಸೂಚಕ ಅಥವಾ ಅನುಮೋದಕ ಚುನಾವಣಾಧಿಕಾರಿಯ ಕಛೇರಿಯಲ್ಲಿ ಯಾವುದೇ ದಿನ ______________ (ತಾರೀಖು)ನ ಒಳಗೆ ಸಲ್ಲಿಸಬಹುದು.

೩) ನಾಮ ಪತ್ರಗಳನ್ನು ಪರಿಶೀಲನೆಗೆ ______________ತಾರೀಖು -------------- ಘಂಟೆಗೆ -------------- (ಸ್ಥಳ) ತೆಗೆದುಕೊಳ್ಳಲಾಗುವುದು.

೪) ಅಭ್ಯರ್ಥಿಯು ಚುನಾವಣೆಯಿಂದ ಹಿಂತೆಗೆಯ ಬಯಸಿದಲ್ಲಿ ಅದನ್ನು ಅಭ್ಯರ್ಥಿ ಅಥವಾ ಅವರ ಸೂಚಕ ಇಲ್ಲವೆ ಅನುಮೋದಕ, ಅಭ್ಯರ್ಥಿಯ ಅಧಿಕೃತ ಪರವಾನಿಗೆಯನ್ನು ಲಿಖಿತರೂಪದಲ್ಲಿ ಪಡೆದಿದ್ದರೆ ಅವರು ಚುನಾವಣಾಧಿಕಾರಿಗೆ ಮಧ್ಯಾಹ್ನ _________ ಘಂಟೆಯೊಳಗೆ ಸಲ್ಲಿಸಬಹುದು.

೫) ನಾಮಪತ್ರ ಮತ್ತು ನಾಮಪತ್ರ ಹಿಂತೆಗೆದುಕೊಂಡ ಸೂಚನೆಗಳನ್ನು ಚುನಾವಣಾಧಿಕಾರಿಗೆ ಆತನ ಕಛೇರಿಯಲ್ಲಿ ಸಲ್ಲಿಸಬೇಕು.

೬) ಒಂದು ವೇಳೆ ಚುನಾವಣೆ ನಡೆಸಬೇಕಾದರೆ ಮತದಾನವು _________________ರಂದು ಕರ್ನಾಟಕ ಮೆಡಿಕಲ್ ಕೌನ್ಸಿಲ್ ಕಛೇರಿಯಲ್ಲಿ ನಡೆಯಲಿದ್ದು, ಅದಕ್ಕೆ ಪ್ರಕಟಣೆಯನ್ನು ಬೇರೆಯಾಗಿ ನೀಡಲಾಗುತ್ತದೆ.

ಸ್ಥಳ : ________

ತಾರೀಖು: _________ ಚುನಾವಣಾಧಿಕಾರಿ

**ಫಾರಂ ಬಿ**

**(ನಿಯಮ ೩ ಬಿ(೧) ನೋಡಿ)**

**ನಾಮಪತ್ರ**

**ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ**

ನಾವು ಈ ಮೂಲಕ ______________ (ಹೆಸರು ಮತ್ತು ಅಭ್ಯರ್ಥಿಯ ವಿವರ)ರನ್ನು ಅಧ್ಯಕ್ಷ / ಉಪಾಧ್ಯಕ್ಷ ಸ್ಥಾನದ ಚುನಾವಣೆಗೆ ಅಭ್ಯರ್ಥಿಯಾಗಿ ನಾಮಕರಣ ಮಾಡುತ್ತಿದ್ದೇವೆ.

ನಾವು ಇಬ್ಬರೂ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಸದಸ್ಯರು ಎಂದು ಘೋಷಿಸುತ್ತೇವೆ.

ಸೂಚಕರ ಸಹಿ

ತಾರೀಖು: __________

ಅನುಮೋದಕರ ಸಹಿ

ತಾರೀಖು: __________

ಈ ಅಭ್ಯರ್ಥಿತನಕ್ಕೆ ನನ್ನ ಒಪ್ಪಿಗೆಯಿದೆ

ಅಭ್ಯರ್ಥಿಯ ಸಹಿ

ತಾರೀಖು: __________

**ಫಾರಂ ಸಿ**

**(ನಿಯಮ ೩-ಇ(೧) ನೋಡಿ)**

**ಹಿಂಪಡೆಯುವುದಕ್ಕೆ ಪ್ರಸ್ತಾಪ**

**ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಧ್ಯಕ್ಷ/ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ**

ಗೆ,

ಚುನಾವಣಾಧಿಕಾರಿ

ಮೇಲ್ಕಂಡ ಚುನಾವಣೆಗೆ ಅಭ್ಯರ್ಥಿಯಾಗಿ ಸೂಚಿಸಲ್ಪಟ್ಟ ನಾನು ______________________

ಈ ಮೂಲಕ ನನ್ನ ಮತಪತ್ರವನ್ನು ಹಿಂಪಡೆಯುತ್ತಿದ್ದೇನೆಂದು ನೋಟಿಸ್ ನೀಡುತ್ತಿದ್ದೇನೆ.

ಸ್ಥಳ : ________ ______________

ತಾರೀಖು: _________ ಅಭ್ಯರ್ಥಿಯ ಸಹಿ.

ಈ ನೋಟಿಸ್ ನನಗೆ ನನ್ನ ಕಛೇರಿಯಲ್ಲಿ __________ ಘಂಟೆಗೆ) ______________(ತಾರೀಖು) ____________________ ಅವರಿಂದ ನೀಡಲ್ಪಟ್ಟಿತು

ತಾರೀಖು: _________ ಚುನಾವಣಾಧಿಕಾರಿ

ಕೆಳಗೆ ಸೂಚಿಸಿರುವುದರಲ್ಲಿ ಬೇರೆ ಯಾವುದು ಸರಿ ಎನಿಸುತ್ತದೆಯೋ ಆ ಅಂಶವನ್ನು ಸೇರಿಸಿ.

೧. ಅಭ್ಯರ್ಥಿ / ಗಳು

೨. ಅಭ್ಯರ್ಥಿಗಳನ್ನು ಸೂಚಿಸಿದ ವ್ಯಕ್ತಿಗೆ ಅಭ್ಯರ್ಥಿ ಬರವಣಿಗೆಯಲ್ಲಿ ಅಧಿಕಾರ ನೀಡಿದ್ದು, ಆತ ಇದನ್ನು ಸಲ್ಲಿಸಿದ್ದಾರೆ.

೩. ಅಭ್ಯರ್ಥಿಗಳನ್ನು ಅನುಮೋದನೆ ಮಾಡಿದ ವ್ಯಕ್ತಿಗೆ ಅಭ್ಯರ್ಥಿ ಬರವಣಿಗೆಯಲ್ಲಿ ಅಧಿಕಾರ ನೀಡಿದ್ದು ಆತ ಇದನ್ನು ಸಲ್ಲಿಸಿದ್ದಾರೆ.

## ಫಾರಂ ಡಿ

**(ನಿಯಮ ೩–ಎಫ್ (ಬಿ) ನೋಡಿ)**

**ಮಾನ್ಯ ಮಾಡಲ್ಪಟ್ಟ ಅಭ್ಯರ್ಥಿಗಳ ಪಟ್ಟಿ**

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ತಂದೆ/ಗಂಡನ ಹೆಸರು | ಅಭ್ಯರ್ಥಿಯ ವಿಳಾಸ |
|---|---|---|---|
| (೧) | (೨) | (೩) | (೪) |

ಸ್ಥಳ : ____________

ತಾರೀಖು ____________

____________________

ಚುನಾವಣಾಧಿಕಾರಿ

**ಫಾರಂ ಇ**

**(ನಿಯಮ ೩ ಹೆಚ್ (೪) ನೋಡಿ)**

**ಮತ ಪತ್ರ**

**ಕರ್ನಾಟಕ ಮೆಡಿಕಲ್ ಕೌನ್ಸಿಲ್**

**ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ**

| ಪಾರ್ಶ್ವಪ್ರತಿಯ ಮತಪತ್ರದ ಕ್ರಮ ಸಂಖ್ಯೆ ಪಟ್ಟಿ | ಪಟ್ಟಿ | | |
|---|---|---|---|
| | ಅಭ್ಯರ್ಥಿಯ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಮತದಾರನ ಗುರುತು |
| ೧) | | | |
| ೨) | | | |
| ೩) | | | |
| ೪) | | | |

ಮತದಾರರಿಗೆ ಸೂಚನೆಗಳು :

೧) ನಿಮಗೆ ಒಂದೇ ಒಂದು ಮತವಿದೆ

೨) ನಿಮ್ಮ ಮತ ನೀಡಬೇಕೆನಿಸಿದ ಅಭ್ಯರ್ಥಿಯ ಹೆಸರಿನ ಮುಂದೆ ಕ್ರಾಸ್ ಗುರುತನ್ನು (x) ಸ್ಪಷ್ಟವಾಗಿ ದಾಖಲಿಸಿ.

೩) ನೀವು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಮತ ಹಾಕಬಾರದು. ಹಾಗೆ ಮಾಡಿದರೆ ನಿಮ್ಮ ಮತ ಪತ್ರ ತಿರಸ್ಕರಿಸಲ್ಪಡುತ್ತದೆ.

೪) ನೀವು ನಿಮ್ಮ ಮತಕೊಡುತ್ತಿರುವ ಅಭ್ಯರ್ಥಿಗೆ ನೀಡುವ ಗುರುತು ಸ್ಪಷ್ಟವಾಗಿ, ಯಾವುದೇ ಅನುಮಾನಕ್ಕೆಡೆ ಮಾಡಿಕೊಡದಂತೆ ತೋರಿಬರಬೇಕು. ಒಂದು ವೇಳೆ ಗುರುತು ಯಾವ ಅಭ್ಯರ್ಥಿಗೆ ಮತ ಚಲಾಯಿಸಿದ್ದೀರಿ ಎಂಬುದು ಸ್ಪಷ್ಟವಾಗಿಲ್ಲದಿದ್ದರೆ ಆ ಮತ ತಿರಸ್ಕರಿಸಲ್ಪಡುತ್ತದೆ.

೫) ಮೊಬೈಲ್ ಫೋನ್‌ಗಳನ್ನು ಮತಗಟ್ಟೆಯೊಳಗೆ ತರಲು ಅವಕಾಶವಿಲ್ಲ.

೬) ಮತಪತ್ರದಲ್ಲಿ ಗುರುತು ಹಾಕುವ ನಮ್ಮ ಲೇಖಣಿಯನ್ನು ಬಳಸಿ.

**ಫಾರಂ ಎಫ್**

**(ನಿಯಮ ೩–(೮) ನೋಡಿ)**

**ಚುನಾವಣೆ ಆಯ್ಕೆಯ ಘೋಷಣೆ**

**ಕರ್ನಾಟಕ ಮೆಡಿಕಲ್‌ಕೌನ್ಸಿಲ್‌ನ ಅಧ್ಯಕ್ಷ / ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ**

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಮಾನ್ಯ ಮಾಡಿದ ಮತಗಳ ಸಂಖ್ಯೆ |
|---|---|---|
| | | |

ಚಲಾಯಿಸಿದ ಮಾನ್ಯ ಮಾಡಿದ ಮತಗಳ ಒಟ್ಟು ಸಂಖ್ಯೆ: ___________

ಅಮಾನ್ಯ ಮಾಡಿದ ಮತಗಳ ಒಟ್ಟು ಸಂಖ್ಯೆ: ___________

ನಾನು ______________________ (ಹೆಸರು)

________________________________(ವಿಳಾಸ)

ಅಧ್ಯಕ್ಷ / ಉಪಾಧ್ಯಕ್ಷರಾಗಿ ಯಾಥೋವತ್ತಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸುತ್ತೇನೆ.

ಸ್ಥಳ :_____

ತಾರೀಖು: ________ ಚುನಾವಣಾಧಿಕಾರಿ

# ಫಾರಂ II

(ನಿಯಮ ೯ (೧) ನೋಡಿ)

## ನಾಮಪತ್ರ

## ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ವಿಭಾಗ ೩, ಉಪವಿಭಾಗ (೨), ಕಲಂ () ಅಡಿಯಲ್ಲಿ ಚುನಾವಣೆ

1. ಅಭ್ಯರ್ಥಿಯ ಹೆಸರು
2. ತಂದೆಯ ಹೆಸರು
3. ವಯಸ್ಸು
4. ಶೈಕ್ಷಣಿಕ ಅರ್ಹತೆ
5. ನೋಂದಣಿ ಪ್ರಮಾಣಪತ್ರ ಸಂಖ್ಯೆ
6. ವಿಳಾಸ
7. ಸೂಚಕನ ಸಹಿ
8. ಅನುಮೋದಕನ ಸಹಿ

ಅಭ್ಯರ್ಥಿಯಿಂದ ಘೋಷಣೆ

ಈ ನಾಮಪತ್ರಕ್ಕೆ ಒಪ್ಪಿಗೆಯೆಂದು ಘೋಷಿಸುತ್ತೇನೆ

ಅಭ್ಯರ್ಥಿಯ ಸಹಿ

---

(ಚುನಾವಣಾಧಿಕಾರಿ ಉಪಯೋಗಕ್ಕೆ ಮಾತ್ರ)

ಈ ನಾಮಪತ್ರವನ್ನು ನಾನು........................... (ಘಂಟೆ ಮತ್ತು ತಾರೀಖು) ನಾನು ಪಡೆದಿದ್ದೇನೆ.

ಚುನಾವಣಾಧಿಕಾರಿ

---

### ಸೂಚನೆಗಳು

1. ನಾಮಪತ್ರಗಳು..................(ಸಮಯ)................. (ತಾರೀಖು) ಗಿಂತ ಮೊದಲು ಚುನಾವಣಾಧಿಕಾರಿಯ ಕೈಸೇರದಿದ್ದರೆ ಅಮಾನ್ಯವಾಗುತ್ತದೆ.
2. ಚುನಾವಣಾ ಪಟ್ಟಿಯಲ್ಲಿ ನಮೂದಿಸಿದಂತೆ ಸೂಚಕ ಮತ್ತು ಅನುಮೋದಕರ ಹೆಸರುಗಳು, ಅವರ ದಾಖಲಿಸಿದ ಶೈಕ್ಷಣಿಕ ಅರ್ಹತೆ ಮತ್ತು ನೋಂದಣಿ ಪತ್ರದ ಸಂಖ್ಯೆಗಳನ್ನು ತಮ್ಮ ಸಹಿಯ ಅಡಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು.
3. ನಾಮಪತ್ರಗಳು ನಿಗದಿಪಡಿಸಿದ ಶುಲ್ಕದೊಂದಿಗಿಲ್ಲದಿದ್ದರೆ ಅವು ತಿರಸ್ಕರಿಸಲ್ಪಡುತ್ತದೆ.

---

ಫಾರಂ I ನ್ನು ಜಿಎಸ್‌ಆರ್ 173ರಲ್ಲಿ 7.6.1979ರಂದು ತೆಗೆದುಹಾಕಲಾಗಿದ್ದು ಅದು 21.6.1979ರಿಂದ ಚಾಲ್ತಿಗೆ ಬಂದಿದೆ.

## ಫಾರಂ III

(ನಿಯಮ ೧೩ (೩) ನೋಡಿ)

**ನಾಮಪತ್ರ**

**ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧, ವಿಭಾಗ (೩)ರ, ಉಪವಿಭಾಗ (೨)ರ, ಕಲಂ (೨) ಅಡಿಯಲ್ಲಿ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೆ ಚುನಾವಣೆ**

| ಕ್ರಮ ಸಂಖ್ಯೆ | ನೋಂದಣಿ ಸಂಖ್ಯೆ | ಸಮರ್ಪಕವಾಗಿ ಸೂಚಿಸಲ್ಪಟ್ಟ ಅಭ್ಯರ್ಥಿಗಳ ಹೆಸರು | ಮತ |
|---|---|---|---|

೧. ಭರ್ತಿಮಾಡಬೇಕಾದ ಖಾಲಿಯಿರುವ ಸ್ಥಳಗಳ ಸಂಖ್ಯೆ ...........

೨. ನೀವು ಮತ ನೀಡಬೇಕಾಗಿರುವ ಅಭ್ಯರ್ಥಿಯ (ಅಥವಾ ಪ್ರತಿಯೊಬ್ಬ ಅಭ್ಯರ್ಥಿ) ಹೆಸರಿನ ಮುಂದೆ ಅಡ್ಡಗುರುತು (ಹೀಗೆ X) ಮಾಡಿ

೩. ಮತಪತ್ರ ಕೆಳಗಿನಂತಿದ್ದರೆ ಅಸಿಂಧುವಾಗುತ್ತದೆ.

ಎ) ಅದು ಚುನಾವಣಾಧಿಕಾರಿಯ ಕಿರು ಅಥವಾ ಮುದ್ರಾ ಸಹಿಯನ್ನು ಹೊಂದಿರದಿದ್ದರೆ.

ಬಿ) ಮತದಾರ ತನ್ನ ಹೆಸರಿನ ಸಹಿ ಮಾಡಿದ್ದರೆ ಅಥವಾ ಶಬ್ದವನ್ನೇನಾದರೂ ಬರೆದಿದ್ದರೆ ಅಥವಾ ಅದರ ಮೇಲೆ ಯಾವುದೇ ಗುರುತು ಮಾಡಿ, ಅದು ಆತನ ಮತಪತ್ರವೆಂದು ಗುರುತಿಸಲ್ಪಡುವಂತಿದ್ದರೆ, ಅಥವಾ

ಸಿ) ಯಾವುದೇ ಮತದ ಗುರುತು ಮಾಡಿರದಿದ್ದರೆ, ಅಥವಾ

ಡಿ) ನೀಡಿದ ಮತಗಳ ಸಂಖ್ಯೆ ಭರ್ತಿಮಾಡಬೇಕಾದ ಸ್ಥಳಗಳ ಸಂಖ್ಯೆಗಿಂತ ಹೆಚ್ಚಿದ್ದರೆ ಅಥವಾ

ಇ) ಹಾಕಿದ ಒಂದು ಅಥವಾ ಹೆಚ್ಚು ಮತಗಳ ಬಗೆಗಿನ ಅನಿಶ್ಚತೆಯಿದ್ದರೆ ಅದು ಅಸಿಂಧು

# ಫಾರಂ IV

(ನಿಯಮ ೧೪ (೧) ನೋಡಿ)

**ನಾಮಪತ್ರ**

**ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧, ವಿಭಾಗ (೩), ಉಪವಿಭಾಗ (೨) ಕಲಂ (೨) ಅಡಿಯಲ್ಲಿ ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ಚುನಾವಣೆ**

ಕ್ರಮಸಂಖ್ಯೆ :

ಮತದಾರನ ಹೆಸರು :

ಮತದಾರ ಪಟ್ಟಿಯ ಹೆಸರು, ಏನಾದರೂ ಇದ್ದರೆ,

**ಮತದಾರನ ಘೋಷಣೆ**

ನಾನು................................................... (ಪೂರ್ತಿ ಹೆಸರು ಮತ್ತು ಹುದ್ದೆ, ಏನಾದರೂ ಇದ್ದಲ್ಲಿ) ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧, ವಿಭಾಗ ೩ರ ಉಪವಿಭಾಗ(೨)ರ ಕಲಂ (ಬಿ) ಅಡಿಯಲ್ಲಿ ಸೂಚಿಸುವಂತೆ ಕರ್ನಾಟಕ ವೈದ್ಯಕೀಯ ಪರಿಷತ್ತಿನ ಸದಸ್ಯರ ಚುನಾವಣೆಯ ಮತದಾರನಾಗಿದ್ದು ಈ ಚುನಾವಣೆಯಲ್ಲಿ ಮತ್ತಾವುದೇ ಮತಪತ್ರಕ್ಕೆ ಸಹಿ ಮಾಡಿರುವುದಿಲ್ಲ.

ಸ್ಥಳ : ಸಹಿ

ತಾರೀಖು: ವಿಳಾಸ :

# ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ನಿಯಮಗಳು ೧೯೭೦

ಜಿಆರ್‌ಎಸ್ ೩೧೬– ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧ (ಕರ್ನಾಟಕ ಅಧಿನಿಯಮ ೩೪, ೧೯(೧)ರ ವಿಭಾಗ ೩೧ರ ಉಪವಿಭಾಗ (೧) ನೀಡಿರುವ ಅಧಿಕಾರ ಬಳಸಿ ಕರ್ನಾಟಕ ಸರಕಾರವು ಕರ್ನಾಟಕ ವೈದ್ಯಕೀಯ ನೋಂದಣಿ ನಿಯುಮಗಳು ೧೯೬೩ರ ತಿದ್ದುಪಡಿಯಾಗಿ ಕೆಳಕಂಡ ನಿಯಮಗಳುಳ್ಳ ಕರಡನ್ನು, ಮೇಲ್ಕಂಡ ಅಧಿನಿಯಮದ ವಿಭಾಗ ೩೧ರ ಉಪವಿಭಾಗ (೧) ದಲ್ಲಿ ಆದೇಶಿಸಿದಂತೆ ಸಂಖ್ಯೆ ಜಿಎಸ್‌ಆರ್ ೧೯೨ ಭಾಗ IV ವಿಭಾಗ ೨–೬ (i) ರ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ ಮೇ ೨೮, ೧೯೭೦ರಂದು ಪ್ರಕಟಿಸಲಾಗಿದ್ದಿತು.

೧) **ಶಿರೋನಾಮೆ ಮತ್ತು ಪ್ರಾರಂಭ**– (೧) ನಿಯಮಗಳನ್ನು ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡೆ) ನಿಯಮಗಳು, ೧೯೭೦ ಎಂದು ಕರೆಯಬಹುದು. ೨) ಅವು ಕೂಡಲೇ ಕಾರ್ಯರೂಪಕ್ಕೆ ಬರುತ್ತವೆ.

**೨. ನಿಯಮ ೨ರ ತಿದ್ದುಪಡಿ** –ಕರ್ನಾಟಕ ವೈದ್ಯಕೀಯ ನೋಂದಣಿ ನಿಯಮಗಳು ೧೯ (ಇನ್ನು ಮುಂದೆ ಮುಖ್ಯ ನಿಯಮಗಳು ಎಂದು ಉಲ್ಲೇಖಿಸಲಾಗುವುದು), ನಿಯಮ ೨ ರಲ್ಲಿನ ಕಲಂ (ಸಿ) ನಂತರ ಕೆಳಕಂಡ ಕಲಂ ಅನ್ನು ಸೇರ್ಪಡೆ ಮಾಡಲಾಗುವುದು.

(ii) 'ಸದಸ್ಯ' ಎಂದರೆ ಕರ್ನಾಟಕ ವೈದ್ಯಕೀಯ ಪರಿಷತ್ತಿನ ಸದಸ್ಯ

**೩. ನಿಯಮ ೩ರ ಬದಲು ಹೊಸ ನಿಯಮವನ್ನು ಬದಲಿಯಾಗಿ ಸೇರಿಸುವುದು** – ಮುಖ್ಯ ನಿಯಮಗಳಲ್ಲಿನ ನಿಯಮಕ್ಕೆ ಬದಲಾಗಿ ಕೆಳಕಂಡ ನಿಯಮಗಳನ್ನು ಸೇರಿಸಲಾಗುವುದು

**೩. ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ**–ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಕಛೇರಿಯಲ್ಲಿ ನಡೆಯುವುದು ಮತ್ತು ಅದಕ್ಕೆ ರಿಜಿಸ್ಟ್ರಾರ್ ಅವರು ಚುನಾವಣಾಧಿಕಾರಿ ಯಾಗಿರುತ್ತಾರೆ.

**೩. ಎ. ನಾಮಪತ್ರ ಸಲ್ಲಿಕೆ ಮತ್ತಿತರ ಕಾರ್ಯಕ್ಕೆ ತಾರೀಖು ನಿಗದಿ ಮಾಡುವುದು** – ೧) ರಿಜಿಸ್ಟ್ರಾರ್ ಅವರು ಫಾರಂ 'ಎ' ಪ್ರಕಟಣೆಯನ್ನು ಸಹಿ ಮಾಡಿ ಮೆಡಿಕಲ್ ಕೌನ್ಸಿಲ್ ಕಛೇರಿಯ ಸೂಚನಾ ಫಲಕದ ಮೇಲೆ

ಅಂಟಿಸುತ್ತಾರೆ. ಅವರು ಅಧ್ಯಕ್ಷ ಉಪಾಧ್ಯಕ್ಷರ–ಯಾವುದೇ ಆಗಿರಬಹುದು–ಚುನಾವಣೆಗೆ ನೇಮಕಗೊಂಡಿರುತ್ತಾರೆ.

(ಎ) ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ, ಅದು ಪ್ರಕಟಣೆಯನ್ನು ಸೂಚನಾ ಫಲಕದ ಮೇಲೆ ಪ್ರಕಟ ಮಾಡಿದ ದಿನದಿಂದ ಎಂಟನೇ ದಿನಕ್ಕಿಂತ ಹೆಚ್ಚಿರಬಾರದು.

(ಬಿ) ನಾಮ ಪತ್ರಿಕೆಗಳ ಪರಿಶೀಲನೆಯ ದಿನಾಂಕ, ನಾಮ ಪತ್ರಗಳ ಸಲ್ಲಿಕೆಯ ಕೊನೆಯ ದಿನ ಮುಗಿದ ಮೂರು ದಿನಗಳಿಗಿಂತ ಹೆಚ್ಚಿರಬಾರದು.

(ಸಿ) ಅಗತ್ಯ ಬಿದ್ದರೆ ಸದಸ್ಯರು ಮತ ಚಲಾಯಿಸುವ ದಿನ, ನಾಮಪತ್ರ ಸಲ್ಲಿಕೆಯ ಕೊನೆಯ ದಿನದ ಏಳು ದಿನಗಳ ಒಳಗೆ ನಡೆಸಬಾರದು.

(೨) ಆಧ್ಯಕ್ಷ ಅಥವಾ ಉಪಾಧ್ಯಕ್ಷರ ನಿಗದಿತ ಅವಧಿ ಕೊನೆಗೊಂಡ ಮೇಲೆ ಖಾಲಿಯಾಗುವ ಸ್ಥಳ ತುಂಬಲು ಚುನಾವಣೆ ನಡೆಸಬೇಕಾದಾಗ, ಉಪ ನಿಯಮ (೧)ರ ಅಡಿಯಲ್ಲಿ ಪ್ರಕಟಣೆಯನ್ನು ಅನುಕೂಲ ಕಂಡಂತೆ ಆದಷ್ಟು ಬೇಗ ನೀಡಬೇಕು. ಈ ಕಾರ್ಯವನ್ನು ನಿರ್ಗಮಿಸುವ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಯಾರದೇ ಅಧಿಕಾರ ಅವಧಿ ಮುಗಿಯುವ ಅರವತ್ತು ದಿನಗಳ ಮೊದಲು ಮಾಡಬೇಕು.

ಮೇಲ್ಕಂಡ ಉಪ ನಿಯಮದ ಅಡಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷರು ಆಯ್ಕೆಯಾಗಿ ತಮ್ಮ ಕಾರ್ಯಭಾರ ನಿರ್ವಹಿಸಲು, ನಿರ್ಗಮಿಸಿದ ಅಧ್ಯಕ್ಷ ಅಥವಾ ಉಪಾಧ್ಯಕ್ಷ, ಯಾವುದೇ ಸ್ಥಾನ ಆಗಿರಲಿ, ಅವರ ಅಧಿಕಾರ ಅವಧಿ ಮುಕ್ತಾಯವಾಗಿ ಅವರ ಸ್ಥಾನವನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಚುನಾವಣೆ ತಾರೀಖನ್ನು ನಿರ್ಧರಿಸಲಾಗುವುದು.

(೩) ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಸ್ಥಾನ ಸಾವು, ರಾಜೀನಾಮೆ, ತೆಗೆದು ಹಾಕುವುದು ಇಲ್ಲವೆ ಇತರ ಕಾರಣಗಳಿಂದಾಗಿ ಖಾಲಿಯಾಗಿದ್ದಾಗ ಅದನ್ನು ಭರ್ತಿಮಾಡಲು ಉಪನಿಯಮ (೧)ರಂತೆ ಸ್ಥಳ ಖಾಲಿಯಾದ ನಂತರ ಚುನಾವಣೆಯ ಪ್ರಕಟಣೆಯನ್ನು ನೀಡಲಾಗುವುದು.

(೪) ಉಪನಿಯಮ (೧)ರ ಅಡಿಯಲ್ಲಿ ಪ್ರಕಟಗೊಂಡ ನೋಟಿಸಿನ ಪ್ರತಿಯನ್ನು ಪ್ರತಿಯೊಬ್ಬ ಸದಸ್ಯನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಲಾಗುವುದು.

(೫) ಉಪನಿಯಮ (೩)ರ ಅಡಿಯಲ್ಲಿ ಚುನಾವಣೆ ನಡೆಯಬೇಕಾದರೆ, ಉಪನಿಯಮ (೩)ರಲ್ಲಿ ಉಲ್ಲೇಖಿಸಿದಂತೆ ಸ್ಥಳ ಖಾಲಿಯಾದ ನಾಲ್ಕು ವಾರಗಳು ಮುಗಿಯುವುದರ ಒಳಗೆ ಚುನಾವಣೆಯನ್ನು ಸಾಮಾನ್ಯವಾಗಿ ನಡೆಸಲಾಗುವುದು.

**೩–ಬಿ ಅಭ್ಯರ್ಥಿಯ ನಾಮಪತ್ರ :**

೧) ಪ್ರತಿಯೊಬ್ಬ ಅಭ್ಯರ್ಥಿಯು ಫಾರಂ ಬಿ ನಾಮಪತ್ರದ ಮೂಲಕ ನಾಮನಿರ್ದೇಶನಗೊಳ್ಳುತ್ತಾರೆ. ಇಬ್ಬರು ಸದಸ್ಯರು ಸೂಚಿಸಿ ಅನುಮೋದನೆ ಮಾಡಿದ ನಾಮಪತ್ರಕ್ಕೆ ತನ್ನ ಒಪ್ಪಿಗೆಯಿಂದ ಅಭ್ಯರ್ಥಿ ದೃಢಪಡಿಸುತ್ತಾನೆ.

(೨) ನಿಯಮ (೩)ರ ಉಪ ನಿಯಮ (೧)ರ ಕಲಂ (ಎ)ಯ ಅಡಿಯಲ್ಲಿ ಅಭ್ಯರ್ಥಿಯು ನಿಗದಿ ಪಡಿಸಿದ ತಾರೀಖಿನಂದು ಅಥವಾ ಅದಕ್ಕೂ ಮೊದಲು ತಾನೇ ಸ್ವತ: ಇಲ್ಲವೆ ತನ್ನ ಸೂಚಕ ಅಥವಾ ಅನುಮೋದಕರ ಮೂಲಕ ಅಪರಾಹ್ನ ೧೧–೦೦ ಘಂಟೆ ಮತ್ತು ಮಧ್ಯಾಹ್ನ ೩–೦೦ ಗಂಟೆ ಮಧ್ಯಂತರದಲ್ಲಿ ಪ್ರಕಟಣೆಯಲ್ಲಿ ನಮೂದಿಸಿದ ಸ್ಥಳದಲ್ಲಿ ನಾಮಪತ್ರವನ್ನು ಚುನಾವಣಾಧಿಕಾರಿಗೆ ಸಲ್ಲಿಸುತ್ತಾರೆ.

(೩) ನಿಯಮ ೩, ಉಪನಿಯಮ (೧)ರ ಕಲಂ (ಎ) ಅಡಿಯಲ್ಲಿ ನಿಗದಿಪಡಿಸಿದ ಕೊನೆಯ ದಿನದ ಮಧ್ಯಾಹ್ನ ೩–೦೦ ಘಂಟೆಗಿಂತ ಮೊದಲು ನಾಮಪತ್ರವನ್ನು ಸಲ್ಲಿಸದಿದ್ದಲ್ಲಿ ಅದು ತಿರಸ್ಕರಿಸಲ್ಪಡುತ್ತದೆ.

(೪) ಯಾವುದೇ ಒಬ್ಬ ಸದಸ್ಯ ಯಾವುದೇ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ನಾಮಪತ್ರವನ್ನು ಸೂಚಿಸುವುದಾಗಲೀ ಅಥವಾ ಅನುಮೋದನೆಯನ್ನಾಗಲೀ ಮಾಡುವಂತಿಲ್ಲ.

(೫) ಚುನಾವಣೆಗೆ ಒಂದಕ್ಕಿಂತ ಹೆಚ್ಚು ನಾಮಪತ್ರಗಳನ್ನು ಯಾವುದೇ ಅಭ್ಯರ್ಥಿ ಸಲ್ಲಿಸುವುದಕ್ಕೆ ಈ ನಿಯಮದಲ್ಲಿ ಯಾವುದೇ ಅಡ್ಡಿಯಿಲ್ಲ.

**೩–ಸಿ. ನಾಮಪತ್ರ ಸಲ್ಲಿಕೆಯಾದ ಮೇಲಿನ ಕಾರ್ಯವಿಧಾನ –** ನಾಮಪತ್ರವನ್ನು ನೀಡಿದ ಮೇಲೆ ಚುನಾವಣಾಧಿಕಾರಿಯು

ಎ) ಅಲ್ಲಿರುವ ಪ್ರಮಾಣಪತ್ರದಲ್ಲಿ ನಾಮಪತ್ರ ಸಲ್ಲಿಸಿದ ತಾರೀಖು

ಮತ್ತು ಸಮಯವನ್ನು ನಮೂದಿಸಿ ಕ್ರಮಗತಿಯ ಸಂಖ್ಯೆಯನ್ನು ಬರೆದು ಸಹಿಮಾಡುತ್ತಾನೆ.

ಬಿ) ನಾಮಪತ್ರವನ್ನು ಸಲ್ಲಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ, ನಾಮಪತ್ರ ಪರಿಶೀಲನೆ ಮಾಡುವ ತಾರೀಖು, ಸಮಯ ಮತ್ತು ಸ್ಥಳದ ಬಗ್ಗೆ ತಿಳಿಸುತ್ತಾನೆ.

**೩. ಡಿ) ನಾಮಪತ್ರಗಳ ಪರಿಶೀಲನೆ–**

(೧) ನಾಮಪತ್ರಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಗಳು ಮತ್ತು ಪ್ರತಿಯೊಬ್ಬ ಅಭ್ಯರ್ಥಿಯ ಸೂಚಕ ಮತ್ತು ಅನುಮೋದಕ ಹಾಜರಿರಲು ಅವಕಾಶ ಪಡೆದಿದ್ದಾರೆ. ಚುನಾವಣಾಧಿಕಾರಿಯು ನಿಯಮ ೩–ಬಿ ಮತ್ತು ೩–ಸಿ ಯಲ್ಲಿ ದಾಖಲಿಸಿದ ರೀತಿ, ನಿಗದಿತ ಸಮಯದೊಳಗೆ ಸಲ್ಲಿಸಿದ ಎಲ್ಲ ಅಭ್ಯರ್ಥಿಗಳ ನಾಮಪತ್ರ ಗಳನ್ನು ನೋಡುವ ಎಲ್ಲ ಅವಕಾಶಗಳನ್ನು ನೀಡುತ್ತಾನೆ.

೨) ನಂತರ ಚುನಾವಣಾಧಿಕಾರಿಯು ನಾಮ ಪತ್ರಗಳನ್ನು ಪರಿಶೀಲಿಸುತ್ತಾನೆ ಮತ್ತು ಅವುಗಳ ಬಗ್ಗೆ ಬರುವ ಎಲ್ಲ ಆಕ್ಷೇಪಗಳ ಬಗ್ಗೆ ನಿರ್ಧಾರ ಮಾಡುತ್ತಾನೆ.

೩) ಚುನಾವಣಾಧಿಕಾರಿಯು, ಆಕ್ಷೇಪಣೆಗಳಿಗೆ ಅಥವಾ ತನ್ನದೇ ಸೂಚನೆಯ ಮೇಲೆ ಮತ್ತು ಸಂಪೂರ್ಣ ವಿಚಾರಣೆ ಮಾಡಿ, ಅದು ತನಗೆ ಸರಿ ಎಂದು ಕಂಡರೆ ನಾಮಪತ್ರವನ್ನು ಕೆಳಕಾಣಿಸಿದ ಯಾವುದೇ ಒಂದು ಅಂಶವನ್ನಾಧರಿಸಿ ತಿರಸ್ಕರಿಸಬಹುದು.

ಎ) ನಿಯಮ ೩–ಬಿ, ಉಪನಿಯಮ (೧) ರ ಅಡಿಯಲ್ಲಿ ಸೂಚಕ ಅಥವಾ ಅನುಮೋದಕ ನಾಮಪತ್ರವನ್ನು ಸಮರ್ಥಿಸಲು ಅರ್ಹರಾಗಿಲ್ಲದಿದ್ದರೆ ಅಥವಾ

ಬಿ) ಅಭ್ಯರ್ಥಿ, ಸೂಚಕ ಅಥವಾ ಅನುಮೋದಕರ ಸಹಿ ಅಸಲಿಯಾಗಿಲ್ಲದಿದ್ದರೆ ಇಲ್ಲವೆ ಅದನ್ನು ಮೋಸದಿಂದ ದೊರಕಿಸಿದ್ದರೆ ಅಥವಾ

ಸಿ) ನಾಮಪತ್ರ ಸಂಪೂರ್ಣವಾಗಿಲ್ಲದಿದ್ದರೆ ಮತ್ತು ತುಂಬ ಹೆಚ್ಚಿನ ರೀತಿಯಲ್ಲಿ ತಪ್ಪುಗಳು ಇದ್ದರೆ ಇಲ್ಲವೆ ಕ್ರಮ ಬದ್ಧವಾಗಿಲ್ಲದಿದ್ದರೆ ಅಥವಾ

ಡಿ) ಸೂಚಕ ಇಲ್ಲವೆ ಅನುಮೋದಕ ದೃಢೀಕರಿಸಿದ ಅದೇ ಚುನಾವಣೆಯ ಬೇರೊಂದು ನಾಮಪತ್ರದ ಸೂಚಕ ಅಥವಾ ಅನುಮೋದಕನಾಗಿದ್ದರೆ,

(೪) ಚುನಾವಣಾಧಿಕಾರಿಯು ನಾಮಪತ್ರಗಳ ಪರಿಶೀಲನೆಯನ್ನು ನಿಯಮ ೩–ಎ, ಉಪ ನಿಯಮ(೧) ಕಲಂ (ಬಿ) ರನ್ವಯ ನಿಗದಿಪಡಿಸಿದ ದಿನಾಂಕ ಕೈಕೊಳ್ಳುತ್ತಾರೆ ಮತ್ತು ಆ ಕಾರ್ಯ ಕಲಾಪವನ್ನು ತನ್ನ ನಿಯಂತ್ರಣಕ್ಕೆ ಬಾರದಂತಹ ಅಡ್ಡಿ ಆತಂಕಗಳ ಸನ್ನಿವೇಶವನ್ನು ಹೊರತುಪಡಿಸಿ ಮುಂದೂಡುವಂತಿಲ್ಲ.

**೩–ಇ ನಾಮಪತ್ರ ಹಿಂತೆಗೆದುಕೊಳ್ಳುವಿಕೆ–**

(೧) ಯಾವುದೇ ಅಭ್ಯರ್ಥಿ ತನ್ನ ನಾಮಪತ್ರದ ಸೂಚನೆಯನ್ನು ಫಾರಂ 'ಸಿ'ಯಲ್ಲಿ ಬರೆದು ಅದನ್ನು ದೃಢೀಕರಿಸಿ, ಹಿಂತೆಗೆದು ಕೊಳ್ಳಬಹುದು. ಅದನ್ನು ಕಲಂ (ಸಿ) ಅಡಿಯಲ್ಲಿ ನಿಗದಿಪಡಿಸಿದ ದಿನದಂದು ಚುನಾವಣಾಧಿಕಾರಿಗೆ ಆ ದಿನ ಮಧ್ಯಾಹ್ನ ೩ ಘಂಟೆಗಿಂತ ಮೊದಲು ಸ್ವತಃ ತಾನಾಗಲೀ ಅಥವಾ ಆತನ ಪರವಾಗಿ ಬರವಣಿಗೆಯಲ್ಲಿ ಅಧಿಕಾರ ನೀಡಿದ ಸೂಚಕ ಅಥವಾ ಅನುಮೋದಕ ಕೊಡಬಹುದು. ಹಿಂತೆಗೆದುಕೊಳ್ಳುವ ದಿನವನ್ನು ನಿಯಮ ೩ರ ಉಪನಿಯಮ (೧)ರ ಕಲಂ(ಸಿ) ಅಡಿಯಲ್ಲಿ ನಿರ್ಧರಿಸಲಾಗುತ್ತದೆ.

(೨) ಉಪನಿಯಮ (೧)ರ ಅಡಿಯಲ್ಲಿ ತನ್ನ ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಸೂಚನೆ ನೀಡಿದ ಅಭ್ಯರ್ಥಿ ಅದನ್ನ ಹಿಂಪಡೆಯುವಂತಿಲ್ಲ.

(೩) ಉಪನಿಯಮ (೧)ರ ಅಡಿಯಲ್ಲಿ ಹಿಂತೆಗೆತದ ಸೂಚನೆಯನ್ನು ಕೊಡಮಾಡಿದ ಮೇಲೆ ಚುನಾವಣಾಧಿಕಾರಿಯು ಅದರ ಮೇಲೆ ಅದು ತನಗೆ ಸಲ್ಲಿಸಿದ ತಾರೀಖು ಮತ್ತು ಘಂಟೆಯನ್ನು ದಾಖಲಿಸುತ್ತಾನೆ.

**೩–ಎಫ್. ಸ್ಪರ್ಧೆ ಮತ್ತು ಸ್ಪರ್ಧೆಯಿಲ್ಲದ ಚುನಾವಣೆಯ ಕಾರ್ಯ ವಿಧಾನ** ಅಭ್ಯರ್ಥಿಯು ನಿಗದಿಪಡಿಸಿದ ಅವಧಿಯೊಳಗೆ ನಿಯಮ ೩–ಇ, ಉಪನಿಯಮ (೧) ರ ಅಡಿಯಲ್ಲಿ ಹಿಂತೆಗೆದುಕೊಂಡ ನಂತರ –

(ಎ) ಅಲ್ಲಿ ಒಬ್ಬನೇ ಒಬ್ಬ ಅಭ್ಯರ್ಥಿಯು ಸರಿಯಾದ ರೀತಿ ನಾಮಪತ್ರ ಸಲ್ಲಿಸಿದ್ದು– ತನ್ನ ನಾಮಪತ್ರವನ್ನು ಉಪ ನಿಯಮದಲ್ಲಿ ನಿರ್ದಿಷ್ಟ ಪಡಿಸಿದ ರೀತಿಯಲ್ಲಿ ಮತ್ತು ಸಮಂಯುದೊಳಗೆ ಹಿಂತೆಗೆದು ಕೊಂಡಿರದಿದ್ದರೆ, ಚುನಾವಣಾಧಿಕಾರಿಯು ಕೂಡಲೇ ಆ ಅಭ್ಯರ್ಥಿಯು ಯಥೋಚಿತವಾಗಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ – ಯಾವುದಾದರೂ ಆಗಲಿ ಆ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ ಎಂದು ಘೋಷಿಸುತ್ತಾನೆ.

(ಬಿ) ಸಮರ್ಪಕವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಸಂಖ್ಯೆ ಹಿಂತೆಗೆದು ಕೊಳ್ಳದಿರುವವರ ಸಂಖ್ಯೆಯು ಒಂದಕ್ಕಿಂತ ಹೆಚ್ಚಿದ್ದರೆ ಚುನಾವಣಾಧಿಕಾರಿಯು ಫಾರಂ 'ಡಿ' ಯನ್ನು ತಯಾರಿಸಿ, ಸಿಂಧುವಾದ ನಾಮಪತ್ರಗಳ ಪಟ್ಟಿಯನ್ನು ತಯಾರಿಸುತ್ತಾನೆ. ಅದರಲ್ಲಿ ಸಿಂಧುವಾದ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಹೆಸರುಗಳನ್ನು ಕ್ರಮಗತಿಯಲ್ಲಿ ಸಿದ್ದಪಡಿಸುತ್ತಾನೆ. ಅನಂತರ ಆ ಪಟ್ಟಿಯ ಪ್ರತಿಯನ್ನು ಮೆಡಿಕಲ್ ಕೌನ್ಸಿಲ್‌ನ ಸೂಚನಾ ಫಲಕದ ಮೇಲೆ ಅಂಟಿಸುತ್ತಾನೆ.

**೩–ಜಿ. ಮೆಡಿಕಲ್ ಕೌನ್ಸಿಲ್‌ನ ಕಛೇರಿಯಲ್ಲಿ ಮತದಾನವನ್ನು ನಡೆಸಲಾಗುವುದು –**

ಚುನಾವಣೆಯ ಮೂಲಕ ಸದಸ್ಯರ ಮತದಾನ ಮಾಡಬೇಕಾದ ಸಂದರ್ಭದಲ್ಲಿ – ಮತದಾನ ನಡೆಸುವ ತಾರೀಖು ಮತ್ತು ಸಮಯವನ್ನು ಸ್ಪಷ್ಟಪಡಿಸಿ ಅದು ಮೆಡಿಕಲ್ ಕೌನ್ಸಿಲ್‌ನ ಕಛೇರಿಯಲ್ಲಿ ನಡೆಯುತ್ತದೆ ಎಂಬ ಸೂಚನೆಯನ್ನು ಮೆಡಿಕಲ್ ಕೌನ್ಸಿಲ್‌ನ ಪ್ರತಿಯೊಬ್ಬ ಸದಸ್ಯನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ, ಚುನಾವಣೆ ಸಭೆ ನಡೆಯುವ ತಾರೀಖಿಗಿಂತ ಐದು ದಿನಗಳ ಮೊದಲು ಕಳುಹಿಸಿಕೊಡಬೇಕು. ಆ ಸೂಚನೆಯ ಪ್ರತಿಯನ್ನು ಚುನಾವಣಾಧಿಕಾರಿಯು ಮೆಡಿಕಲ್ ಕೌನ್ಸಿಲ್ ಕಛೇರಿಯ ಸೂಚನಾ ಫಲಕದ ಮೇಲೆ ಪ್ರಕಟಿಸುತ್ತಾನೆ.

**೩–ಹೆಚ್. ಚುನಾವಣೆ ನಡೆಸುವ ಕಾರ್ಯವಿಧಾನ–**

ಚುನಾವಣೆಯನ್ನು ಕೈಕೊಳ್ಳಲು ಕೆಳಕಂಡ ಕಾರ್ಯವಿಧಾನವನ್ನು ಅನುಸರಿಸಲಾಗುತ್ತದೆ. ಅವುಗಳೆಂದರೆ–

(೧) ಚುನಾವಣಾಧಿಕಾರಿಯು ಫಾರಂ ಡಿ ಯಲ್ಲಿ ಸರಿಯಾದ

ರೀತಿಯಲ್ಲಿ ಸೂಚಿಸಲ್ಪಟ್ಟ ಎಲ್ಲ ಅಭ್ಯರ್ಥಿಗಳ ಹೆಸರುಗಳನ್ನು ಓದುತ್ತಾರೆ.

(೨) ಮತ ಚಲಾಯಿಸುವುದಕ್ಕೆ ನಿಗದಿಪಡಿಸಿದ ಸ್ಥಳದಲ್ಲಿ ಚುನಾವಣಾಧಿ ಕಾರಿಯು ಮತ ಪೆಟ್ಟಿಗೆಯನ್ನು ಇರಿಸುತ್ತಾನೆ. ಅದರೊಳಕ್ಕೆ ಮತ ಪತ್ರಗಳನ್ನು ಒಳ ಸೇರಿಸುವಂತೆ ಮತ್ತು ಆ ಪೆಟ್ಟಿಗೆಯನ್ನು ತೆಗೆಯದೆ ಮತ ಪತ್ರಗಳನ್ನು ಹೊರತೆಗೆಯಲು ಬಾರದಂತೆ ರಚಿಸಲಾಗಿರುತ್ತದೆ.

(೩) ಮತ ಚಲಾಯಿಸುವ ಮುನ್ನ ಚುನಾವಣಾಧಿಕಾರಿಯು ಕೂಡಲೇ, ಅಲ್ಲಿ ಇರಬಹುದಾದ ಸದಸ್ಯರಿಗೆ ಮತ ಪೆಟ್ಟಿಗೆ ಖಾಲಿಯಿರುವುದನ್ನು ಅವರು ನೋಡಲು ಸೂಚಿಸುತ್ತಾನೆ. ನಂತರ ಅದಕ್ಕೆ ಬೀಗ ಹಾಕಿ ಅದರ ಮೇಲೆ ಮೊಹರನ್ನು ಒಡೆಯದೆ ತೆರೆಯಲು ಬಾರದಂತೆ ತನ್ನ ಮುದ್ರೆ ಹಾಕುತ್ತಾನೆ.

(೪) ಮತ ಚಲಾಯಿಸುವ ಆಶೆಯನ್ನು ವ್ಯಕ್ತಪಡಿಸುವ ಸದಸ್ಯರಿಗೆ, ಮೆಡಿಕಲ್ ಕೌನ್ಸಿಲ್ ಮೊಹರು ಒತ್ತಿದ ಮತ್ತು ಚುನಾವಣಾಧಿ ಕಾರಿಯ ಸಹಿ ಇರುವ ಮತಪತ್ರವನ್ನು ಕೊಡಲಾಗುತ್ತದೆ. ಅದರ ಮೇಲೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಮುದ್ರಿಸಲಾಗಿರುತ್ತದೆ; ಟೈಪು ಮಾಡಿರುತ್ತದೆ, ಇಲ್ಲವೆ ಬರೆಯಲಾಗಿರುತ್ತದೆ. ಮತಪತ್ರವನ್ನು ಸದಸ್ಯನಿಗೆ ಕೊಡುವಾಗ ಚುನಾವಣಾಧಿಕಾರಿಯು ಅದರಲ್ಲಿನ ಕ್ರಮ ಸಂಖ್ಯೆಯನ್ನು ಈ ಉದ್ದೇಶಕ್ಕಾಗಿ ಇರಿಸಿದ ಸದಸ್ಯನಿಗೆ ಸಂಬಂಧಿಸಿದ ಪ್ರತಿಯಲ್ಲಿ ಸದಸ್ಯರ ಹೆಸರಿನ ಎದುರಿಗೆ ನಮೂದಿಸುತ್ತಾನೆ.

(೫) ಉಪನಿಯಮ (೪)ರ ಅಡಿಯಲ್ಲಿ ಮತಪತ್ರ ನೀಡಲ್ಪಟ್ಟ ಸದಸ್ಯರು, ಮತಪತ್ರ ದೊರೆತ ಮೇಲೆ ಮತದಾನದ ಉದ್ದೇಶಕ್ಕಾಗಿ ವ್ಯವಸ್ಥೆ ಮಾಡಿದ ಸ್ಥಳಕ್ಕೆ ಹೋಗಿ ತಾನು ಮತಕೊಡಬೇಕೆಂಬ ಅಭ್ಯರ್ಥಿಯ ಹೆಸರಿನ ಮುಂದೆ ಗುರುತು (X) ಮಾಡುತ್ತಾನೆ. ನಂತರ ಅದನ್ನು ತಾನು ನೀಡಿದ ಮತ ಕಾಣಿಸದಂತೆ ಮತಪತ್ರವನ್ನು ಮಡಿಸಿ ಮತಪೆಟ್ಟಿಗೆಯೊಳಕ್ಕೆ ಹಾಕುತ್ತಾನೆ.

(೬) ಮತ ಚಲಾಯಿಸಿದ ಸದಸ್ಯರು, ಇನ್ನೂ ಮತಚಲಾಯಿಸಬೇಕಾದ ಸದಸ್ಯರ ಸಂಪರ್ಕಕ್ಕೆ ಬಾರದಂತೆ ಮಾಡುವ ವ್ಯವಸ್ಥೆಯನ್ನು ಚುನಾವಣಾಧಿಕಾರಿಯು ಮಾಡಿರುತ್ತಾನೆ.

(೭) ಸದಸ್ಯ ತನ್ನ ಮತಪತ್ರವನ್ನು ಅನುದ್ದಿಷ್ಟರಾಗಿ ಅದನ್ನು ಮತಪತ್ರವಾಗಿ ಬಳಕೆ ಮಾಡದ ರೀತಿಯಲ್ಲಿ ವಿರೂಪಗೊಳಿಸಿದ್ದಲ್ಲಿ ಅದನ್ನು ಚುನಾವಣಾಧಿಕಾರಿಗೆ ಮರಳಿ ಕೊಟ್ಟು, ತನ್ನ ಅನುದ್ದಿಷ್ಟನೆಯನ್ನು ಒಪ್ಪಿಕೊಂಡಲ್ಲಿ, ಮತ್ತೊಂದು ಮತಪತ್ರವನ್ನು ಕೊಡಬಹುದು. ಹಾಗೆ ಮರಳಿ ಕೊಟ್ಟ ಮತಪತ್ರವನ್ನು 'ಕೆಟ್ಟು ಹೋದ ರದ್ದು ಪಡಿಸಿದ' ಎಂದು ಚುನಾವಣಾಧಿಕಾರಿ ಗುರುತು ಮಾಡುತ್ತಾನೆ. ಮತಪತ್ರವನ್ನು ಪಡೆದ ಸದಸ್ಯ ಅದನ್ನು ಬಳಸಬಾರದೆಂದು ನಿರ್ಧರಿಸಿದರೆ, ಅದನ್ನು ಚುನಾವಣಾಧಿಕಾರಿಗೆ ಮರಳಿ ಕೊಡುತ್ತಾನೆ. ಹಾಗೆ ಮರಳಿ ಕೊಟ್ಟ ಮತಪತ್ರವನ್ನು 'ಹಿಂದುರುಗಿಸಿ ರದ್ದಾದ' ಎಂಬ ಗುರುತನ್ನು ಚುನಾವಣಾಧಿಕಾರಿ ಮಾಡುತ್ತಾನೆ. ಈ ಕಲಂ ಅಡಿಯಲ್ಲಿ ರದ್ದು ಪಡಿಸಿದ ಎಲ್ಲ ಮತ ಪತ್ರಗಳನ್ನು ಬೇರೆ ಲಕೋಟೆಯಲ್ಲಿ ಇರಿಸಲಾಗುತ್ತದೆ.

**೩. ೪ ಮತಗಳ ಎಣಿಕೆ–**

(೧) ಮತ ಚಲಾಯಿಸುವ ಅಭಿಲಾಷೆ ಹೊಂದಿ ಹಾಜರಿದ್ದ ಮತದಾರರು ಮತ ಚಲಾಯಿಸಿದ ಮೇಲೆ, ಚುನಾವಣಾಧಿಕಾರಿಯು ಅಲ್ಲಿ ಹಾಜರಿರುವ ಸದಸ್ಯರ ಎದುರಿನಲ್ಲಿ ಮತಪೆಟ್ಟಿಗೆಯನ್ನು ತೆರೆಯುತ್ತಾನೆ. ಪೆಟ್ಟಿಗೆಯಿಂದ ಹೊರತೆಗೆದ ಮತಪತ್ರಗಳ ಎಣಿಕೆ ಮಾಡುತ್ತಾನೆ. ಮತ್ತು ಅವುಗಳ ಪರಿಶೀಲನೆ ಮಾಡುತ್ತಾನೆ. ಅವುಗಳಲ್ಲಿ ತನ್ನ ಅಭಿಪ್ರಾಯದಲ್ಲಿ ಸಿಂಧುವಾದವುಗಳನ್ನು ಅಸಿಂಧುವಾದವುಗಳಿಂದ ಬೇರ್ಪಡಿಸುತ್ತಾನೆ. ಅಸಿಂಧುವಾದವುಗಳ ಮತಪತ್ರಗಳ ಮೇಲೆ 'ರದ್ದು ಮಾಡಿದ'ಎಂದು ಬರೆದು, ರದ್ದು ಮಾಡಿದ ಕಾರಣವನ್ನು ಬರೆದು, ಸಿಂಧುವಾದ ಎಲ್ಲ ಮತಪತ್ರಗಳನ್ನು ಕಟ್ಟಿ ಇಡುತ್ತಾನೆ.

(೨) ಚುನಾವಣಾಧಿಕಾರಿಯು ಮತಪತ್ರವನ್ನು ಕೆಳಕಂಡ ಕಾರಣಗಳಿಗಾಗಿ ರದ್ದು ಮಾಡುತ್ತಾನೆ.

ಎ) ಮತ ಚಲಾಯಿಸುವವನ ಯಾವುದೇ ಗುರುತು ಅಥವಾ ಬರವಣಿಗೆಯಿದ್ದರೆ

ಬಿ) ಅದರ ಮೇಲೆ ಯಾವುದೇ ಮತ ದಾಖಲಿಸದಿದ್ದರೆ,

ಸಿ) ಒಬ್ಬ ಅಭ್ಯರ್ಥಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಮತ ಚಲಾಯಿಸಿದ್ದರೆ,

ಡಿ) ಮತದ ಗುರುತನ್ನು ಯಾವ ಅಭ್ಯರ್ಥಿಗೆ ನೀಡಲಾಗಿದೆ ಎಂಬುದನ್ನು ಮಾಡಿದ ಗುರುತು ಅನುಮಾನಕ್ಕೆಡೆ ಮಾಡಿಕೊಟ್ಟರೆ, ಅಥವಾ

ಇ) ಅದು ಹೆಚ್ಚುವರಿ ಮತಪತ್ರವಾಗಿದ್ದರೆ : ಮತಪತ್ರದ ಮೇಲೆ ಮತವನ್ನು ಸೂಚಿಸುವ ಗುರುತು ಅಸ್ಪಷ್ಟವಾಗಿದ್ದರೆ ಅಥವಾ ನಿರ್ದಿಷ್ಟ ಅಭ್ಯರ್ಥಿಗೆ ಗುರುತನ್ನು ಒಂದಕ್ಕಿಂತ ಹೆಚ್ಚು ಬಾರಿ ಮಾಡಿ ಮತ ನಿರ್ದಿಷ್ಟ ಅಭ್ಯರ್ಥಿಗೆ ಮತಪತ್ರದ ಮೇಲೆ ಮಾಡಿದ ಗುರುತು ಎದ್ದುಕಾಣುವಂತಿದ್ದರೆ ಮತಪತ್ರವನ್ನು ತಿರಸ್ಕರಿಸಲಾಗದು.

(೩) ನಿಯಮದಡಿ ಚುನಾವಣಾಧಿಕಾರಿ ಯಾವುದೇ ಮತಪತ್ರವನ್ನು ತಿರಸ್ಕರಿಸುವ ಮೊದಲು ಪ್ರತಿಯೊಬ್ಬ ಅಭ್ಯರ್ಥಿಗೆ ಮತಪತ್ರವನ್ನು ವೀಕ್ಷಿಸಲು ಸಾಕಷ್ಟು ಸಮಯಾವಕಾಶವನ್ನು ನೀಡುತ್ತಾನೆಯೇ ಹೊರತು ಅದನ್ನು ಇಲ್ಲವೆ ಬೇರೆ ಮತಪತ್ರಗಳನ್ನು ಮುಟ್ಟಿ ನೋಡಲು ಅವಕಾಶ ನೀಡುವುದಿಲ್ಲ.

(೪) ಈ ನಿಯಮದಡಿ ತಿರಸ್ಕರಿಸಲ್ಪಡದಿರುವ ಪ್ರತಿಯೊಂದು ಮತಪತ್ರವನ್ನು ಚುನಾವಣಾಧಿಕಾರಿಯು ಸಿಂಧುವಾದ ಒಂದು ಮತವೆಂದು ಪರಿಗಣಿಸುತ್ತಾನೆ. ಮತ ಎಣಿಕೆ ಮುಕ್ತಾಯವಾದ ಮೇಲೆ ಚುನಾವಣಾಧಿಕಾರಿ ಪ್ರತಿಯೊಬ್ಬ ಅಭ್ಯರ್ಥಿ ಪಡೆದ ಒಟ್ಟು ಮತಗಳ ವಿವರಣಾ ಪತ್ರದಲ್ಲಿ ದಾಖಲಿಸುತ್ತಾನೆ ಮತ್ತು ಅದನ್ನು ಘೋಷಿಸುತ್ತಾನೆ.

(೫) ಅಂತಹ ಘೋಷಣೆ ಮಾಡಿದ ನಂತರ ಚುನಾವಣಾಧಿಕಾರಿಯು ತನ್ನದೇ ಪ್ರವರ್ತನೆದಿಂದ ಇಲ್ಲವೆ ಯಾವುದೇ ಅಭ್ಯರ್ಥಿಯ ಹೇಳಿಕೆಯಂತೆ ಮತದ ಮರುಎಣಿಕೆ ಮಾಡಬಹುದು.

ಚುನಾವಣಾಧಿಕಾರಿ ಮರುಎಣಿಕೆಯಲ್ಲಿ ಅದೇ ಮತಗಳನ್ನು ಒಂದಕ್ಕಿಂತ ಹೆಚ್ಚು ಬಾರಿ ಎಣಿಸುವ ಅನಿವಾರ್ಯತೆ ಇದೆ ಎಂಬುದಕ್ಕೆ ಇಲ್ಲಿ ಯಾವುದೇ ಅಂಶವಿರುವುದಿಲ್ಲ. ಉಪನಿಯಮದ ಅಡಿಯಲ್ಲಿ ಮತಗಳ ಮರುಎಣಿಕೆ ಮಾಡುವಾಗ ಚುನಾವಣಾಧಿಕಾರಿಯು ಉಪನಿಯಮ (೪) ರಲ್ಲಿ ಉಲ್ಲೇಖಿಸಿದ ವಿವರಣಾ ಪತ್ರಕ್ಕೆ ಅಂತಹ ಮರುಎಣಿಕೆಗೆ ಅಗತ್ಯವೆನಿಸಿದ ರೀತಿ ತಿದ್ದುಪಡಿಮಾಡಿ, ತಾನು ಮಾಡಿದ ತಿದ್ದುಪಡಿಯನ್ನು ಘೋಷಿಸುತ್ತಾನೆ.

(೬) ಉಪನಿಯಮ (೪) ಅಥವಾ ಉಪನಿಯಮ (೫)ರ ಅಡಿಯಲ್ಲಿ, ಪ್ರತಿಯೊಬ್ಬ ಅಭ್ಯರ್ಥಿ ಪಡೆದ ಒಟ್ಟು ಮತಗಳ ಸಂಖ್ಯೆಯನ್ನು ಪ್ರಕಟಿಸಿದ ಮೇಲೆ, ಚುನಾವಣಾಧಿಕಾರಿಯು ಅತಿ ಹೆಚ್ಚು ಸಿಂಧುವಾದ ಮತಗಳನ್ನು ಪಡೆದ ಅಭ್ಯರ್ಥಿಯನ್ನು ಯಥೋಚಿತ ವಾಗಿ ಆಯ್ಕೆಯಾಗಿದ್ದಾನೆ ಎಂದು ಘೋಷಿಸುತ್ತಾನೆ.

(೭) ಮತ ಎಣಿಕೆ ಮುಗಿದ ಮೇಲೆ, ಯಾವುದೇ ಅಭ್ಯರ್ಥಿಗಳ ನಡುವೆ ಮತಗಳು ಸಮನಾಗಿ ಬಂದಿರುವುದು ತೋರಿಬಂದರೆ, ಮತ್ತು ಒಂದು ಮತವನ್ನು ಯಾವುದೇ ಒಬ್ಬ ಅಭ್ಯರ್ಥಿಗೆ ಸೇರಿಸಿದರೆ ಆ ಅಭ್ಯರ್ಥಿ ಆಯ್ಕೆಯಾಗಿರುವುದನ್ನು ಘೋಷಿಸಬಹುದಾದರೆ, ಚುನಾವಣಾಧಿಕಾರಿಯು ಕೂಡಲೇ ಅಂತಹ ಅಭ್ಯರ್ಥಿಗಳನ್ನು ಲಾಟರಿ ಎತ್ತಿ ನಿರ್ಧರಿಸಿ, ಲಾಟರಿ ಯಾರ ಪರವಾಗಿ ಬೀಳುತ್ತದೋ ಅವರಿಗೆ ಒಂದು ಹೆಚ್ಚಿನ ಮತ ಬಿದ್ದಿದೆ ಎಂದು ಹೇಳುತ್ತಾನೆ. ಅನಂತರ ಲಾಟರಿ ಯಾರ ಕಡೆ ಬಿದ್ದಿದೆಯೋ ಆ ಅಭ್ಯರ್ಥಿ ಯಥೋಚಿತವಾಗಿ ಆಯ್ಕೆಯಾಗಿದ್ದಾನೆ ಎಂದು ಘೋಷಿಸುತ್ತಾನೆ.

(೮) ಅನಂತರ ಚುನಾವಣಾಧಿಕಾರಿಯು ಫಾರಂ ಎಫ್‌ನಲ್ಲಿ ಚುನಾವಣಾ ಪರಿಣಾಮವನ್ನು ತಯಾರಿಸಿ ದೃಢೀಕರಿಸುತ್ತಾನೆ.

**೩–ಜೆ. ನಡವಳಿಯ ದಾಖಲೆ :**

ಚುನಾವಣೆ ಮುಗಿದ ನಂತರ, ಚುನಾವಣಾಧಿಕಾರಿಯು ಕೂಡಲೇ ನಡವಳಿಯ ದಾಖಲೆ ಮಾಡುತ್ತಾನೆ.

(ಎ) ಚುನಾವಣೆಯ ನಡವಳಿಯ, ದಾಖಲೆಯನ್ನು ತಯಾರಿಸಿ ಅದಕ್ಕೆ ಸಹಿ ಹಾಕುತ್ತಾನೆ. ಅದರಲ್ಲಿ ಮಾಡಿದ ಪ್ರತಿಯೊಂದು ತಿದ್ದುಪಡಿಗೂ ತನ್ನ ಕಿರು ಸಹಿ ಮಾಡುತ್ತಾನೆ. ಅಲ್ಲದೆ ಚುನಾವಣೆ ಕಾಲದಲ್ಲಿ ಹಾಜರಿದ್ದ ಯಾವುದೇ ಸದಸ್ಯ ಅಂತಹ ದಾಖಲೆ ಮೇಲೆ ತನ್ನ ಸಹಿ ಹಾಕುವ ಬಯಕೆಯನ್ನು ವ್ಯಕ್ತಪಡಿಸಿದಲ್ಲಿ ಅದಕ್ಕೆ ಅವಕಾಶ ಮಾಡಿಕೊಡುತ್ತಾನೆ.

(ಬಿ) ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಆಯ್ಕೆಯಾದ ವ್ಯಕ್ತಿಯ ಹೆಸರನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಮಾಡಲು ಸರಕಾರಕ್ಕೆ ಕಳುಹಿಸಿಕೊಡಲಾಗುವುದು.

**೩–ಕೆ. ಸೀಲ್ ಮಾಡಿ ಚುನಾವಣಾ ಕಾಗದ ಪತ್ರಗಳ ಸುಪರ್ದು :**

(೧) ಅನಂತರ ಚುನಾವಣಾಧಿಕಾರಿಯು ಸದಸ್ಯರ ಗುರುತು ಮಾಡಿದ ಪಟ್ಟಿಯ ಪ್ರತಿ, ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದ ಮತಪತ್ರಗಳು ಅವು ಎಣಿಸಲ್ಪಟ್ಟಿರಲಿ ಇಲ್ಲವೆ ರದ್ದು ಮಾಡಲ್ಪಟ್ಟಿರಲಿ, – ಅವುಗಳನ್ನು ಬೇರೆ ಬೇರೆ ಲಕೋಟೆಯಲ್ಲಿರಿಸಿ, ಪ್ರತಿಯೊಂದು ಪಾಕೀಟನ್ನು ಮುಚ್ಚಿ ಸೀಲ್ ಮಾಡಲಾಗುವುದು. ಅವುಗಳ ಒಳಗೆ ಇರುವ ದಾಖಲೆಗಳ ವಿವರಣೆ, ಅವು ಯಾವ ಚುನಾವಣೆಗೆ ಸಂಬಂಧಿಸಿವೆ ಎಂಬುದನ್ನು ಮತ್ತು ಅದರ ತಾರೀಖು ದಾಖಲಿಸಲಾಗುವುದು.

(೨) ಈ ಪಾಕೀಟುಗಳನ್ನು ತೆರೆಯಲಾಗದು ಮತ್ತು ಅದರೊಳಗಿನ ವಸ್ತುಗಳನ್ನು ಪರಿಶೀಲಿಸಲಾಗದು ಅಥವಾ ರಾಜ್ಯ ಸರಕಾರ ಇಲ್ಲವೆ ಸಮರ್ಥ ಅಧಿಕಾರದ ನ್ಯಾಯಾಲಯದ ಆಜ್ಞೆಯಿಲ್ಲದೆ ಯಾವುದೇ ವ್ಯಕ್ತಿ ಅಥವಾ ಅಧಿಕಾರಶಾಹಿಗೆ ಹಾಜರುಪಡಿಸಲಾಗದು.

(೩) ಚುನಾವಣಾಧಿಕಾರಿಯು ತನ್ನ ಕಛೇರಿಯಲ್ಲಿ ಪಾಕೀಟುಗಳನ್ನು ಸುರಕ್ಷಿತವಾಗಿ ತನ್ನ ಸುಪರ್ದಿನಲ್ಲಿ ಚುನಾವಣೆ ಪರಿಣಾಮ ಘೋಷಣೆಯಾದ ತಾರೀಖಿನಿಂದ ಒಂದು ವರುಷ ಕಾಲ ಇರಿಸಿಕೊಳ್ಳುತ್ತಾನೆ. ಅನಂತರ ರಾಜ್ಯ ಸರಕಾರ ಅಥವಾ ಸಮರ್ಥ ಅಧಿಕಾರದ ನ್ಯಾಯಾಲಯದ ನಿರ್ದೇಶನ ಯಾವುದೂ ಬಾರದಿದ್ದರೆ ಅವುಗಳನ್ನು ನಾಶಪಡಿಸಲಾಗುವುದು.

**೩–ಎಲ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ತಮ್ಮ ಕಾರ್ಯಭಾರಕ್ಕೆ –**

ಈ ನಿಯಮದಡಿ ಆಯ್ಕೆಯಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಒಂದು ವೇಳೆ ಚುನಾಯಿತ ಅಧ್ಯಕ್ಷ ಅಥವಾ ಉಪಾಧ್ಯಕ್ಷರು ಇಲ್ಲದ ಸಂದರ್ಭದಲ್ಲಿ, ಮತ್ತು ಚುನಾಯಿತ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಅಧಿಕಾರ ಅವಧಿ ಮುಗಿದಿದ್ದಲ್ಲಿ ಅಥವಾ ಇನ್ನಿತರ ಸಂದರ್ಭದಲ್ಲಿ. ಕೂಡಲೇ ತಮ್ಮ ಕಾರ್ಯಭಾರವನ್ನು ಪ್ರಾರಂಭಿಸುತ್ತಾರೆ.

**೩–ಎಂ. ಚುನಾವಣೆ ಬಗ್ಗೆ ತಕರಾರು –**

(೧) ಸದಸ್ಯನ ಆಯ್ಕೆಯ ಸಿಂಧುತ್ವನ್ನು ಪ್ರಶ್ನಿಸಿ ತಕರಾರನ್ನು ರಾಜ್ಯ ಸರಕಾರಕ್ಕೆ ಚುನಾವಣೆಯಲ್ಲಿ ಭಾಗಿಯಾದ ಯಾವುದೇ ಅಭ್ಯರ್ಥಿ,

ರಾಜ್ಯ ಸರಕಾರ ತನ್ನ ಅಧಿಕೃತ ರಾಜ್ಯಪತ್ರದಲ್ಲಿ ಚುನಾವಣಾ ಪರಿಣಾಮ ಪ್ರಕಟಮಾಡಿದ ದಿನಾಂಕದಿಂದ ಹದಿನೈದು ದಿನದೊಳಗೆ ರಾಜ್ಯ ಸರಕಾರಕ್ಕೆ ಸಲ್ಲಿಸಬಹುದು.

(೨) ಉಪ ನಿಯಮ(೧)ರ ಅಡಿಯಲ್ಲಿ ಸಲ್ಲಿಸುವ ಪ್ರತಿಯೊಂದು ತಕರಾರು ಜೊತೆಗೆ ಅದರಲ್ಲಿ ಹೆಸರಿಸಲಾದ ಎಲ್ಲ ಪ್ರತಿವಾದಿಗಳ ಎಲ್ಲ ಪ್ರತಿಗಳು ಇರತಕ್ಕದ್ದು. ಅಂತಹ ಎಲ್ಲ ಪ್ರತಿಗಳನ್ನು ವಾದಿಯು ಅದು ತಕರಾರಿನ ನೈಜ ಪ್ರತಿಯೆಂದು ಸಹಿ ಮಾಡಿ ದೃಢೀಕರಿಸ ತಕ್ಕದ್ದು.

(೩) ವಾದಿಯು ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಯ ಆಯ್ಕೆ ಅಸಿಂಧು ಎಂದು ಘೋಷಿಸಬೇಕೆಂದು ಕೇಳುವುದಲ್ಲದೆ, ತನ್ನನ್ನು ಅಥವಾ ಬೇರೆ ಯಾವುದೇ ಅಭ್ಯರ್ಥಿಯು ಸಮರ್ಪಕವಾಗಿ ಆಯ್ಕೆ ಯಾಗಿದ್ದಾನೆ ಎಂದು ಘೋಷಿಸಲು ಕೇಳಿದ್ದರೆ ವಾದಿಯು ಪ್ರತಿವಾದಿಯಾಗಿಯೂ ಸೇರಿಕೊಳ್ಳುತ್ತಾನೆ. ವಾದಿ ಹೊರತುಪಡಿಸಿ ಉಳಿದೆಲ್ಲ ಅಭ್ಯರ್ಥಿಗಳು ಮತ್ತು ಆಯ್ಕೆಯಾದ ಅಭ್ಯರ್ಥಿ ಅಂತಹ ಘೋಷಣೆಯನ್ನು ಮಾಡಬೇಕೆಂದು ಕೇಳಿಕೊಂಡಿರದಿದ್ದರೆ ಹಾಗಾಗುತ್ತದೆ.

(೪) ಉಪ ನಿಯಮ (೧)ರ ಅಡಿಯಲ್ಲಿನ ತಕರಾರು

(ಎ) ವಾದಿಯು ತಾನು ಆಧರಿಸಿರುವ ವಸ್ತು ವಿವರಗಳ ಸಂಕ್ಷಿಪ್ತ ವಿವರಣೆಯನ್ನೊಳಗೊಂಡಿರಬೇಕು.

(ಬಿ) ಮನವಿಯ ಅನುಜತ್ವಕ್ಕಾಗಿ, ಸಿವಿಲ್ ಪ್ರೊಸೀಜರ್ ಕೋಡ್ ೧೯೦೮ (ಸೆಂಟ್ರಲ್ ಅಧಿನಿಯಮ V ೧೯೦೮) ರಲ್ಲಿ ಪ್ರಸ್ತಾಪಿಸಿದ ರೀತಿಯಲ್ಲಿ ಪರಿಶೀಲಿಸಿ, ದಾವೆದಾರ ಸಹಿ ಮಾಡಿರಬೇಕು.

(ಸಿ) ತಕರಾರಿಗೆ ಸೇರಿದ ಯಾವುದೇ ಅನುಸೂಚನೆ ಅಥವಾ ಅನುಬಂಧವನ್ನು ದಾವೆದಾರ ತಕರಾರಿನ ರೀತಿಯಲ್ಲಿ ಪರಿಶೀಲಿಸಿ ಸಹಿ ಮಾಡಿರಬೇಕು.

(೫) ದಾವೆದಾರನು ಕೆಳಕಂಡ ಯಾವುದೇ ಘೋಷಣೆಯ ಹಕ್ಕು ಕೋರಿಕೆ ಮಾಡಬಹುದು.

(ಎ) ಜಯಶಾಲಿಯಾದ ಅಭ್ಯರ್ಥಿ ಆಯ್ಕೆ ಅಸಿಂಧು;

(ಬಿ) ಜಯಶಾಲಿಯಾದ ಅಭ್ಯರ್ಥಿಯ ಆಯ್ಕೆ ಅಸಿಂಧು ಮತ್ತು ತಾನೇ ಸ್ವತ: ಅಥವಾ ಬೇರೆ ಯಾವುದೇ ಅಭ್ಯರ್ಥಿ ಸಮರ್ಪಕವಾಗಿ ಆಯ್ಕೆಯಾಗಿದ್ದಾರೆ.

**೩–೭. ಚುನಾವಣೆಯಲ್ಲಿ ಜಯಶಾಲಿಯಾದ ಅಭ್ಯರ್ಥಿ ಆಯ್ಕೆ ಅಸಿಂಧುವೆಂದು ಘೋಷಿಸಲು ಆಧಾರಗಳು –**

ಒಂದು ವೇಳೆ ರಾಜ್ಯ ಸರಕಾರದ ಅಭಿಪ್ರಾಯದಲ್ಲಿ

(ಎ) ಚುನಾವಣೆ ಪರಿಣಾಮ ವಸ್ತುಶ: ಪ್ರಭಾವಿತಗೊಂಡಿದೆ.

೧) ಮತ ನಿರಾಕರಣೆಯ ಬಗ್ಗೆ ಅಸಮರ್ಪಕವಾಗಿ ಮನ್ನಣೆ

೨) ಅಧಿನಿಯಮು ಅಥವಾ ಬೇರೆ ಯಾವುದೇ ನಿಯಮಗಳ ನಿಬಂಧನೆಯ ಅನುವರ್ತನೆ ಮಾಡದಿದ್ದಲ್ಲಿ ಅಥವಾ

(ಬಿ) ಯಾವುದೇ ಒಬ್ಬ ಅಭ್ಯರ್ಥಿಯ ನಾಮಪತ್ರವನ್ನು ತಪ್ಪಾಗಿ ರದ್ದು ಮಾಡಲಾಗಿದೆ ಅಥವಾ ಜಯಶಾಲಿಯಾದ ಅಭ್ಯರ್ಥಿಯ ಅಥವಾ ಬೇರಾವ ಅಭ್ಯರ್ಥಿ ತನ್ನ ನಾಮಪತ್ರವನ್ನು ಹಿಂತೆಗೆದುಕೊಳ್ಳದಿದ್ದರೂ ಅದನ್ನು ತಪ್ಪಾಗಿ ಸ್ವೀಕರಿಸಲಾಗಿದೆ. ರಾಜ್ಯ ಸರಕಾರವು ಜಯಶಾಲಿಯಾದ ಅಭ್ಯರ್ಥಿಯ ಚುನಾವಣೆ ಅಸಿಂಧು ಎಂದು ಘೋಷಿಸುತ್ತದೆ.

**೩–೩. ಜಯಶಾಲಿಯಾದ ಅಭ್ಯರ್ಥಿಯನ್ನು ಹೊರತುಪಡಿಸಿ ಬೇರೆ ಅಭ್ಯರ್ಥಿ ಆಯ್ಕೆಯಾಗಿದ್ದಾನೆ ಎಂದು ಘೋಷಿಸಲು ಆಧಾರ ನೀಡುವ ಅಂಶಗಳು** – ಚುನಾವಣೆ ತಕರಾರನ್ನು ಮಂಡಿಸಿದ ಯಾವುದೇ ವ್ಯಕ್ತಿ, ಚುನಾವಣೆಯಲ್ಲಿ ಜಯಶಾಲಿಯಾದ ಅಭ್ಯರ್ಥಿಯ ಪ್ರಶ್ನೆಯಲ್ಲದೆ, ತಾನೇ ಸ್ವತಃ ಅಥವಾ ಬೇರೆ ಯಾವುದೇ ಅಭ್ಯರ್ಥಿ ಸರಿಯಾದ ರೀತಿಯಲ್ಲಿ ಆಯ್ಕೆಯಾಗಿರುವುದಾಗಿ ಘೋಷಿಸಬೇಕು ಎಂದು ಹಕ್ಕು ಮಂಡಿಸುತ್ತಾನೆ. ರಾಜ್ಯ ಸರಕಾರವು ಅರ್ಜಿದಾರ ಅಥವಾ ಬೇರೆ ಯಾವುದೇ ಅಭ್ಯರ್ಥಿ ಸಿಂಧುವಾದ ಹೆಚ್ಚಿನ ಸಂಖ್ಯೆ ಮತಗಳನ್ನು ಪಡೆದಿದ್ದಾನೆ ಎಂದು ಅಭಿಪ್ರಾಯಪಟ್ಟರೆ, ರಾಜ್ಯ ಸರಕಾರ ಜಯಶಾಲಿಯಾದ ಅಭ್ಯರ್ಥಿಯ ಆಯ್ಕೆ ಅಸಿಂಧು ಎಂದು ಘೋಷಣೆ ಮಾಡುವುದಲ್ಲದೆ, ಅರ್ಜಿದಾರ ಅಥವಾ ಬೇರೆ ಇನ್ನಾವುದೇ ಅಭ್ಯರ್ಥಿ, ಯಾರೇ ಆಗಿರಲಿ ಸರಿಯಾದ ರೀತಿಯಲ್ಲಿ ಆಯ್ಕೆಯಾಗಿದ್ದಾನೆ ಎಂದು ಘೋಷಿಸಬಹುದು.

ಒಂದು ವೇಳೆ ಪ್ರತಿಯೊಬ್ಬ ಅಭ್ಯರ್ಥಿಯ ಚುನಾವಣೆ ಅಸಿಂಧುವಾಗಿ ಬಿಡುತ್ತಿದ್ದು, ಆತ ಜಯಶಾಲಿಯಾದ ಅಭ್ಯರ್ಥಿಯಾಗಿದ್ದು ಮತ್ತು ತಕರಾರು ಅರ್ಜಿ ಮೂಲಕ ಆತನ ಚುನಾವಣೆಯನ್ನು ಪ್ರಶ್ನಿಸಿದ್ದರೆ ಅರ್ಜಿದಾರ ಅಥವಾ ಬೇರೆ ಇತರ ಅಭ್ಯರ್ಥಿ ಸರಿಯಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸುವುದಿಲ್ಲ."

**೧. ಹೊಸ ಫಾರಂಗಳ ಸೇರ್ಪಡೆ** – ಮುಖ್ಯ ನಿಯಮಗಳ ಅನುಬಂಧದಲ್ಲಿ, ಕೆಳಕಂಡ ಫಾರಂಗಳನ್ನು ಫಾರಂ ೧ರ ಮೊದಲು ಸೇರಿಸಲಾಗುವುದು.

**ಅನುಬಂಧ**

**ಫಾರಂ ಎ**

**(ನಿಯಮ ೩–ಎ ನೋಡಿ)**

**ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ**

ನಡೆಸುವ ಚುನಾವಣೆ ಪ್ರಕಟಣೆಯನ್ನು ಈ ಕೆಳಕಂಡಂತೆ ನೀಡಲಾಗಿದೆ.

(೧) ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆಯನ್ನು ನಡೆಸಲಾಗುವುದು.

(೨) ನಾಮ ಪತ್ರಗಳನ್ನು ಅಪರಾಹ್ನ ೧೧ ಮತ್ತು ಮಧ್ಯಾಹ್ನ ೩ ಘಂಟೆಯ ಮಧ್ಯಂತರದಲ್ಲಿ ಅಭ್ಯರ್ಥಿ ಅಥವಾ ಆತನ ಸೂಚಕ ಅಥವಾ ಅನುಮೋದಕ ಚುನಾವಣಾಧಿಕಾರಿಯ ಕಛೇರಿಯಲ್ಲಿ ಯಾವುದೇ ದಿನ ______________ (ತಾರೀಖು)ನ ಒಳಗೆ ಸಲ್ಲಿಸಬಹುದು.

೩) ನಾಮಪತ್ರಗಳನ್ನು ಪರಿಶೀಲನೆಗೆ ______________ತಾರೀಖು -------------- ಘಂಟೆಗೆ -------------- (ಸ್ಥಳ) ತೆಗೆದುಕೊಳ್ಳಲಾಗುವುದು.

೪) ಅಭ್ಯರ್ಥಿಯು ಚುನಾವಣೆಯಿಂದ ಹಿಂತೆಗೆಯ ಬಯಸಿದಲ್ಲಿ ಅದನ್ನು ಅಭ್ಯರ್ಥಿ ಅಥವಾ ಅವರ ಸೂಚಕ ಇಲ್ಲವೆ ಅನುಮೋದಕ, ಅಭ್ಯರ್ಥಿಯ ಅಧಿಕೃತ ಪರವಾನಿಗೆಯನ್ನು ಲಿಖಿತರೂಪದಲ್ಲಿ ಪಡೆದಿದ್ದರೆ ಅವರು ಚುನಾವಣಾಧಿಕಾರಿಗೆ ಮಧ್ಯಾಹ್ನ _________ ಘಂಟೆಯೊಳಗೆ ಸಲ್ಲಿಸಬೇಕು.

೫) ನಾಮಪತ್ರ ಮತ್ತು ನಾಮಪತ್ರ ಹಿಂತೆಗೆದುಕೊಂಡ ಸೂಚನೆಗಳನ್ನು ಚುನಾವಣಾಧಿಕಾರಿಗೆ ಆತನ ಕಛೇರಿಯಲ್ಲಿ ಸಲ್ಲಿಸಬೇಕು.

೬) ಒಂದು ವೇಳೆ ಚುನಾವಣೆ ನಡೆಸಬೇಕಾದರೆ ಮತದಾನವು __________________ರಂದು ಕರ್ನಾಟಕ ಮೆಡಿಕಲ್ ಕೌನ್ಸಿಲ್ ಕಛೇರಿಯಲ್ಲಿ ನಡೆಯಲಿದ್ದು, ಅದಕ್ಕೆ ಪ್ರಕಟಣೆಯನ್ನು ಬೇರೆಯಾಗಿ ಕಳುಹಿಸಿಕೊಡಲಾಗುತ್ತದೆ.

ಸ್ಥಳ : _________ ______________

ತಾರೀಖು: _________ ಚುನಾವಣಾಧಿಕಾರಿ

**ಫಾರಂ ಬಿ**

**(ನಿಯಮ ೩ ಬಿ(೧) ನೋಡಿ)**

**ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಾಮಪತ್ರ**

ನಾವು ಈ ಮೂಲಕ ______________ (ಹೆಸರು ಮತ್ತು ಅಭ್ಯರ್ಥಿಯ ವಿವರ) ರನ್ನು ಅಧ್ಯಕ್ಷ / ಉಪಾಧ್ಯಕ್ಷ ಸ್ಥಾನದ ಚುನಾವಣೆಗೆ ನಾಮಕರಣ ಮಾಡುತ್ತಿದ್ದೇವೆ.

ನಾವು ಇಬ್ಬರೂ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಸದಸ್ಯರು ಎಂದು ಘೋಷಿಸುತ್ತೇವೆ.

ಸೂಚಕರ ಸಹಿ

ತಾರೀಖು: ___________

ಅನುಮೋದಕರ ಸಹಿ

ತಾರೀಖು: ___________

ನಾಮಪತ್ರಕ್ಕೆ ಒಪ್ಪಿಗೆ ಕೊಡುತ್ತೇನೆ.

ಅಭ್ಯರ್ಥಿಯ ಸಹಿ

ತಾರೀಖು: ___________

**ಫಾರಂ ಸಿ**

**(ನಿಯಮ ೩-ಇ(೧) ನೋಡಿ)**

**ಹಿಂಪಡೆಯುವುದಕ್ಕೆ ಪ್ರಸ್ತಾಪ**

**ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ**

ಗೆ,

ಚುನಾವಣಾಧಿಕಾರಿ

ಮೇಲ್ಕಂಡ ಚುನಾವಣೆಗೆ ಅಭ್ಯರ್ಥಿಯಾಗಿ ಸೂಚಿಸಲ್ಪಟ್ಟ ನಾನು ______________________

ಈ ಮೂಲಕ ನನ್ನ ನಾಮಪತ್ರವನ್ನು ಹಿಂಪಡೆಯುತ್ತಿದ್ದೇನೆಂದು ನೋಟಿಸ್ ಕೊಡುತ್ತೇನೆ.

ಸ್ಥಳ : ________ ______________

ತಾರೀಖು: _________ ಅಭ್ಯರ್ಥಿಯ ಸಹಿ.

ಈ ನೋಟಿಸ್ ನನಗೆ ನನ್ನ ಕಛೇರಿಯಲ್ಲಿ __________ ಘಂಟೆಗೆ) _______________(ತಾರೀಖು) _____________________ ಯವರಿಂದ ನೀಡಲ್ಪಟ್ಟಿತು

ತಾರೀಖು: _________ ಚುನಾವಣಾಧಿಕಾರಿ

ಪರ್ಯಾಯವಾಗಿ ಕೆಳಗೆ ಸೂಚಿಸಿರುವುದರಲ್ಲಿ ಯಾವುದು ಸರಿ ಎನಿಸುತ್ತದೆಯೋ ಅಂಶವನ್ನು ಸೇರಿಸಿ.

೧. ಅಭ್ಯರ್ಥಿ / ಗಳು

೨. ಇದನ್ನು ಸಲ್ಲಿಸಿದ ಅಭ್ಯರ್ಥಿಗಳನ್ನು ಸೂಚಿಸಿದ ವ್ಯಕ್ತಿಗೆ ಅಭ್ಯರ್ಥಿ ಬರವಣಿಗೆಯಲ್ಲಿ ಅಧಿಕಾರ ನೀಡಿರುವುದು

೩. ಇದನ್ನು ಸಲ್ಲಿಸಿದ ಅಭ್ಯರ್ಥಿಗಳ ಅನುಮೋದನೆ ಮಾಡಿದ ವ್ಯಕ್ತಿಗೆ ಅಭ್ಯರ್ಥಿ ಬರವಣಿಗೆಯಲ್ಲಿ ಅಧಿಕಾರ ನೀಡಿರುವುದು.

## ಫಾರಂ ಡಿ

**(ನಿಯಮ ೩-ಎಫ್ (ಬಿ) ನೋಡಿ)**

**ಮಾನ್ಯ ಮಾಡಲ್ಪಟ್ಟ ಅಭ್ಯರ್ಥಿಗಳ ಪಟ್ಟಿ**

**ಕರ್ನಾಟಕ ಮೆಡಿಕಲ್‌ಕೌನ್ಸಿಲ್‌ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ**

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ತಂದೆ/ಗಂಡನ ಹೆಸರು | ಅಭ್ಯರ್ಥಿಯ ವಿಳಾಸ |
|---|---|---|---|
| (೧) | (೨) | (೩) | (೪) |

ಸ್ಥಳ : ____________ ____________________

ತಾರೀಖು ____________ ಚುನಾವಣಾಧಿಕಾರಿ

**ಫಾರಂ ಇ**
**(ನಿಯಮ ೩ ಹೆಚ್ (೪) ನೋಡಿ)**
**ಮತ ಪತ್ರ**
**ಕರ್ನಾಟಕ ಮೆಡಿಕಲ್‌ಕೌನ್ಸಿಲ್**
**ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ**

| ಪಾರ್ಶ್ವಪ್ರತಿಯ ಮತಪತ್ರದ ಕ್ರಮ ಸಂಖ್ಯೆ | ಪಟ್ಟಿ | | |
|---|---|---|---|
| | ಅಭ್ಯರ್ಥಿಯ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಮತದಾರನ ಗುರುತು |
| ೧ | ೨ | ೩ | ೪ |

೧. ______________________________

೨. ______________________________

೩. ______________________________

೪. ______________________________

ಮತದಾರರಿಗೆ ಸೂಚನೆಗಳು

೧) ನಿಮಗೆ ಒಂದೇ ಒಂದು ಮತವಿದೆ

೨) ನಿಮ್ಮ ಮತ ನೀಡಬೇಕೆನಿಸಿದ ಅಭ್ಯರ್ಥಿಯ ಹೆಸರಿನ ಮುಂದೆ ಕ್ರಾಸ್ ಗುರುತನ್ನು (X) ಸ್ಪಷ್ಟವಾಗಿ ದಾಖಲಿಸಿ.

೩) ನೀವು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಮತ ಹಾಕಬಾರದು. ಹಾಗೆ ಮಾಡಿದರೆ ನಿಮ್ಮ ಮತ ಪತ್ರ ತಿರಸ್ಕರಿಸಲ್ಪಡುತ್ತದೆ.

೪) ನೀವು ನಿಮ್ಮ ಮತಕೊಡುತ್ತಿರುವ ಅಭ್ಯರ್ಥಿಗೆ ನೀಡುವ ಗುರುತು ಸ್ಪಷ್ಟವಾಗಿ, ಯಾವುದೇ ಅನುಮಾನಕ್ಕೆಡೆ ಮಾಡಿಕೊಡದಂತೆ ಗುರುತಿಸಲ್ಪಟ್ಟಿರಬೇಕು. ಒಂದು ವೇಳೆ ಗುರುತು ಯಾವ ಅಭ್ಯರ್ಥಿಗೆ ಮತ ಚಲಾಯಿಸಿದ್ದೀರಿ ಎಂದು ಸ್ಪಷ್ಟವಾಗಿಲ್ಲದಿದ್ದರೆ ಆ ಮತ ತಿರಸ್ಕರಿಸಲ್ಪಡುತ್ತದೆ.

೫) ಮೊಬೈಲ್ ಫೋನ್‌ಗಳನ್ನು ಮತಗಟ್ಟೆಯೊಳಗೆ ತರಲು ಅವಕಾಶವಿಲ್ಲ.

೬) ಮತಪತ್ರದಲ್ಲಿ ಗುರುತು ಹಾಕುವ ನಮ್ಮ ಲೇಖನಿಯನ್ನು ಬಳಸಿ.

## ಫಾರಂ ಎಫ್

## (ನಿಯಮ ೩-(ಲ) ನೋಡಿ)

## ಚುನಾವಣೆಯ ಆಯ್ಕೆ ಘೋಷಣೆ

## ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷ / ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಮಾನ್ಯ ಮಾಡಿದ ಮತಗಳ ಸಂಖ್ಯೆ |
|---|---|---|
| | | |

ಚಲಾಯಿಸಿದ ಮಾನ್ಯ ಮಾಡಿದ ಮತಗಳ ಒಟ್ಟು ಸಂಖ್ಯೆ: ____________

ಅಮಾನ್ಯ ಮಾಡಿದ ಮತಗಳ ಒಟ್ಟು ಸಂಖ್ಯೆ: ____________

ನಾನು ______________________ (ಹೆಸರು)

________________________________(ವಿಳಾಸ)

ಅಧ್ಯಕ್ಷ / ಉಪಾಧ್ಯಕ್ಷರಾಗಿ ಯಾಥೋವತ್ತಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸುತ್ತೇನೆ.

ಸ್ಥಳ :_____ ಚುನಾವಣಾಧಿಕಾರಿ

ತಾರೀಖು: ________

# ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ನಿಯಮಗಳು, ೧೯೭೯

## ಜಿಎಸ್‌ಆರ್ ೧೭೩

ಕರ್ನಾಟಕ ವೈದ್ಯಕೀಯ ನೋಂದಣಿ ೧೯೬೧ರ ಅಧಿನಿಯಮ (ಕರ್ನಾಟಕ ೧೯೬೧ರ ಅಧಿನಿಯಮ)ದ ವಿಭಾಗ ೩೧ರ ಉಪವಿಭಾಗ (೧)ಕ್ಕೆ ಅನುಗುಣವಾಗಿ ೧೯೬೩ರ ಕರ್ನಾಟಕ ವೈದ್ಯಕೀಯ ನೋಂದಣಿ ನಿಯಮಗಳ ತಿದ್ದುಪಡಿಯಾಗಿ ಕೆಳಕಂಡ ನಿಯಮಗಳ ಕರಡನ್ನು ಪ್ರಕಟಿಸಲಾಗಿದ್ದಿತು. ಅದು ಜನವರಿ ೧೧, ೧೯೭೯ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆ ಸಂಖ್ಯೆ ಹೆಚ್‌ಎಫ್‌ಡಬ್ಲ್ಯೂಎಂಎಸ್‌ಹೆಚ್ ೭೭ ತಾರೀಖು ೨ನೇ ಜನವರಿ ೧೯೭೯ (೫-ಜಿಎಸ್‌ಆರ್ ೧೬) ಭಾಗ ೪, ಸೆಕ್ಷನ್ ೨-ಸಿ (೧)ರಲ್ಲಿ ಪ್ರಕಟಣೆ ಎಂದು ಅದರ ಪ್ರಭಾವಕ್ಕೆ ಒಳಪಡುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆ ಇಲ್ಲವೆ ಸೂಚನೆಗಳನ್ನು ೩೧ ಜನವರಿ ೧೯೭೯ರಂದು ಅಥವಾ ಅದಕ್ಕೆ ಮೊದಲು ತಿಳಿಸಬೇಕೆಂದು ಕೋರಲಾಗಿದ್ದಿತು.

ಮೇಲೆ ಉಲ್ಲೇಖಿಸಿದ ರಾಜ್ಯ ಪತ್ರವನ್ನು ೧೧ ಜನವರಿ ೧೯೭೯ರಲ್ಲಿ ಸಾರ್ವಜನಿಕರಿಗೆ ಲಭಿಸುವಂತೆ ಮಾಡಲಾಗಿದ್ದಿತು. ಆದರೆ ಅದಕ್ಕೆ ಯಾವುದೇ ಆಕ್ಷೇಪಣೆಯಾಗಲೀ ಇಲ್ಲವೆ ತಿದ್ದುಪಡಿಯಾಗಲೀ ಬರಲಿಲ್ಲ.

ಆದುದರಿಂದ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧ (೧೯೬೧ರ ಕರ್ನಾಟಕ ಅಧಿನಿಯಮ ೩೪)ರ ವಿಭಾಗ ೩೧ರ ಉಪವಿಭಾಗ(೧) ನೀಡಿರುವ ಅಧಿಕಾರವನ್ನು ಬಳಸಿಕೊಂಡು ಕರ್ನಾಟಕ ಸರಕಾರವು ಕೆಳಕಂಡ ನಿಯಮಗಳನ್ನು ರೂಪಿಸಿದೆ.

೧) **ಶಿರೋನಾಮೆ ಮತ್ತು ಪ್ರಾರಂಭ** – (೧) ಈ ನಿಯಮಗಳನ್ನು ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ನಿಯಮಗಳು, ೧೯೭೯ ಎಂದು ಕರೆಯತಕ್ಕದ್ದು.

೨) ಅವು ಕೂಡಲೇ ಕಾರ್ಯರೂಪಕ್ಕೆ ಬರುತ್ತವೆ.

**೩) ನಿಯಮ ೪ರ ತಿದ್ದುಪಡಿ** – ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮಗಳ ನಿಯಮದಲ್ಲಿ (ಇನ್ನು ಮುಂದೆ ಮೇಲ್ಕಾಣಿಸಿದ ನಿಯಮಗಳು ಎಂದು ಉಲ್ಲೇಖಿಸಲಾಗುವುದು)

(೧) ಉಪ ನಿಯಮ (೧)ಕ್ಕೆ ಕೆಳಕಾಣಿಸಿದ ಉಪ ನಿಯಮವನ್ನು ಬದಲು ಮಾಡಲಾಗುತ್ತದೆ.

(೧) ಅಧಿನಿಯಮಕ್ಕೆ ಸಂಬಂಧಿಸಿದ ವಿಭಾಗ ೩ರ ಉಪ ವಿಭಾಗ(೨)ರ ಕಲಂ (ಎ)ನಲ್ಲಿ ಉಲ್ಲೇಖಿಸಿದಂತೆ ನೋಂದಣಿಗೊಂಡ ವೃತ್ತಿಪರ ವೈದ್ಯರಿಂದ ಸದಸ್ಯರ ಆಯ್ಕೆ ಮಾಡಬೇಕಾದರೆ, ರಿಜಿಸ್ಟ್ರಾರ್ ಅವರು ಚುನಾವಣಾಧಿಕಾರಿ ಯಾಗಿರುತ್ತಾರೆ. ಚುನಾವಣೆ ನಡೆಯುವ ವರುಷದಲ್ಲಿ ವಿಭಾಗ ೨೬ರ ಉಪವಿಭಾಗ(೧) ಕ್ಕೆ ಅನುಗುಣವಾಗಿ ಪ್ರಕಟಿಸಿದ ವೃತ್ತಿಪರ ವೈದ್ಯರ ಪಟ್ಟಿಯು, ನಿಯಮ ೩ರ ಉಪ ನಿಯಮ (೨)ರ ಕಲಂ (ಎ) ಅಧೀನದಲ್ಲಿ ಸದಸ್ಯರ ಚುನಾವಣೆಗಾಗಿ ಮಾಡಿದ ಪೂರ್ವ ಸಿದ್ಧತಾ ಚುನಾವಣಾ ಪಟ್ಟಿ ಎನಿಸುತ್ತದೆ.

(೨) ಉಪ ನಿಯಮ(೨)ರಲ್ಲಿನ ಶಬ್ಧ 'ಸಮಕಾಲಿಕವಾಗಿ' ಎಂಬುದನ್ನು ತೆಗೆದು ಹಾಕಲಾಗುತ್ತದೆ.

(೩) ಉಪನಿಯಮ (೩)ರಲ್ಲಿರುವ 'ರಾಜ್ಯ ಪತ್ರದಲ್ಲಿ ಪ್ರಕಟಗೊಂಡಂತೆ' ಎಂಬ ಶಬ್ಧಗಳನ್ನು ತೆಗೆದು ಹಾಕಲಾಗುತ್ತದೆ ಮತ್ತು ಕೊನೆಯಲ್ಲಿ ಕೆಳಕಂಡ ವ್ಯಾಕ್ಯವನ್ನು ಸೇರಿಸಲಾಗುತ್ತದೆ.

"ಮತದಾರರ ಪಟ್ಟಿಯನ್ನು ಪರಿಷ್ಕರಿಸುವಾಗ ಸೇರಿಸಿದ ಇಲ್ಲವೆ ತೆಗೆದುಹಾಕಿದ ವಿವರವನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಲಾಗುತ್ತದೆ."

**೩) ನಿಯಮ ೫ಕ್ಕೆ ತಿದ್ದುಪಡಿ** –ಮೇಲ್ಕಂಡ ನಿಯಮಗಳಲ್ಲಿನ ನಿಯಮ ೫ರ ಉಪನಿಯಮ (೧) ರಲ್ಲಿನ ಕೆಳಕಂಡ ಶಬ್ಧಗಳು, ಕಂಸಗಳು ಮತ್ತು ಸಂಖ್ಯೆಗಳನ್ನು ತೆಗೆದು ಹಾಕಲಾಗುತ್ತದೆ. "ಸರಕಾರ ನಿಶ್ಚಯಿಸಿದ ತಾರೀಖಿನಂದು" ಉದ್ದೇಶಿತ ನಿಯಮ ೪ರ ಉಪನಿಯಮ (೧) ಕ್ಕಾಗಿ

**೪) ನಿಯಮ ೬ಕ್ಕೆ ತಿದ್ದುಪಡಿ**– ಮೇಲ್ಕಂಡ ನಿಯಮಗಳಲ್ಲಿನ ನಿಯಮ ೬ರ ಉಪ ನಿಯಮ (೧)ರಲ್ಲಿನ ಶಬ್ಧಗಳು, ಕಂಸಗಳು ಮತ್ತು ಸಂಖ್ಯೆಗಳನ್ನು ತೆಗೆದು ಹಾಕಲಾಗುತ್ತದೆ.

'ಫಾರಂ ೧ರಲ್ಲಿ ನಿಯಮ ೪ರ ಉಪನಿಯಮ (೧)ರ ಉದ್ದೇಶಕ್ಕಾಗಿ ಸರಕಾರ ನಿಶ್ಚಯಿಸಿದ ತಾರೀಖು'

**೫) ನಿಯಮ ೮ಕ್ಕೆ ತಿದ್ದುಪಡಿ** – ಮೇಲ್ಕಂಡ ನಿಯಮಗಳಲ್ಲಿನ ನಿಯಮ ೮ರಲ್ಲಿನ "ಅಂತಿಮವಾಗಿ ಮತದಾರರ ಪಟ್ಟಿ' ಎಂಬ ಶಬ್ಧಗಳ ಬದಲು 'ಅಂತಿಮ ಮತದಾರರ ಪಟ್ಟಿ' ಎಂದು ಬದಲಿಸಲಾಗುತ್ತದೆ.

**೬) ಫಾರಂ ೧ನ್ನು ತೆಗೆದು ಹಾಕುವುದು** – ಮೇಲ್ಕಂಡ ನಿಯಮಗಳಿಗೆ ಲಗತ್ತಿಸಿದ ಫಾರಂ–೧ನ್ನು ತೆಗೆದು ಹಾಕಲಾಗುತ್ತದೆ.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ಪತ್ರಿಕೆ

ಭಾಗ IV –ಎ ಬೆಂಗಳೂರು, ಮಂಗಳವಾರ, ಸೆಪ್ಟಂಬರ್ ೧೬,
೨೦೦೩ ನಂ. ೧೧೦೬ (ಭಾದ್ರಪದ ೨೫, ಶಕ ವರ್ಷ ೧೯೨೫)

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

ಸಂಖ್ಯೆ ಸಂವ್ಯಶಾಇ ೪೧ ಶಾಸನ ೨೦೦೨, ಬೆಂಗಳೂರು, ದಿನಾಂಕ
೧೬ನೇ ಸೆಪ್ಟಂಬರ್, ೨೦೧೩

ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ಅಧಿನಿಯಮಕ್ಕೆ ೨೦೦೩ರ ಸೆಪ್ಟಂಬರ್ ೧೨ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳಿವಳಿಕೆಗಾಗಿ ಇದನ್ನು ೨೦೦೩ರ ಕರ್ನಾಟಕ ಅಧಿನಿಯಮ ಸಂಖ್ಯೆ ೪೩ ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

ಕರ್ನಾಟಕ ಅಧಿಸೂಚನೆ ಸಂಖ್ಯೆ ೨೦೦೩ರ ೪೩ (ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಸೆಪ್ಟಂಬರ್ ೧೬, ೨೦೦೩ರಂದು ಮೊದಲು ಪ್ರಕಟಗೊಂಡಿತು.

# ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ನಿಯಮಗಳು ೨೦೦೩)

## (ರಾಜ್ಯಪಾಲರ ಒಪ್ಪಿಗೆಯನ್ನು ಸೆಪ್ಟಂಬರ್ ೧೨, ೨೦೦೩ ರಂದು ಪಡೆಯಿತು)

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧ರ ತಿದ್ದುಪಡಿಗಾಗಿ ಅಧಿನಿಯಮ

ಈ ಕೆಳಕಂಡ ಉದ್ದೇಶ್ಯಕ್ಕಾಗಿ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧ (ಕರ್ನಾಟಕ ಅಧಿನಿಯಮ ೧೯೬೧ರ ೩೪) ವನ್ನು ಮತ್ತೆ ತಿದ್ದುಪಡಿ ಮಾಡುವುದು ಸಮಯೋಚಿತವಾಗಿದೆ :

ಅದು ಭಾರತ ಪ್ರಜಾಪ್ರಭುತ್ವದ ಐವತ್ನಾಲ್ಕನೆಯ ವರುಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದ ಕಾನೂನಾಗಿ ಪರಿಣಮಿಸಲಿ.

**೧. ಕಿರು ಶಿರೋನಾಮೆ ಮತ್ತು ಮತ್ತು ಪ್ರಾರಂಭ,**

(೧) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ ನಿಯಮಗಳು), ೨೦೦೩ ಎಂದು ಕರೆಯಲಾಗುತ್ತದೆ.

(೨) ಅದು ರಾಜ್ಯ ಸರಕಾರ ಪ್ರಕಟಣೆ ಮಾಡಿದ ದಿನದಿಂದ ಕಾರ್ಯರೂಪಕ್ಕೆ ಬರುವುದು. ಅಧಿನಿಯಮದ ಬೇರೆ ಬೇರೆ ನಿಬಂಧನೆಗಳಿಗೆ ಬೇರೆ ಬೇರೆ ತಾರೀಖುಗಳನ್ನು ನಿರ್ಧರಿಸಬಹುದು.

**೨. ವಿಭಾಗ ೩ರ ತಿದ್ದುಪಡಿ –**

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧ (ಕರ್ನಾಟಕ ಅಧಿನಿಯಮ ೧೯೬೧ರ ೩೪) (ಇನ್ನು ಮುಂದೆ ಅದನ್ನು ಪ್ರಮುಖ ಅಧಿನಿಯಮವೆಂದು ಉಲ್ಲೇಖಿಸಲಾಗುವುದು)

(೧) ಉಪವಿಭಾಗ (೨) ಕಲಂ (ಬಿ) (ಸಿ) ಮತ್ತು (ಡಿ) ಕೆಳಕಾಣಿಸಿದುದರಿಂದ ಬದಲಾಯಿಸಲಾಗುವುದು.

"(ಬಿ) ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ ೧೯೯೭ (ಕರ್ನಾಟಕ ಅಧಿನಿಯಮ ೧೯೪೪ರ ೪೪)ರ ವಿಭಾಗ ೨ರ ಅನುಕ್ರಮವಾಗಿ ಕಲಂ (ಎಂ) ಮತ್ತು (ಎನ್) ವ್ಯಾಖ್ಯಾನಿಸಿದಂತೆ

ಮತ್ತು ಈ ಅಧಿನಿಯಮದಡಿ ನೋಂದಣಿಯಾಗಿರುವ 'ಶಿಕ್ಷಕರು' ಮತ್ತು 'ವಿಶ್ವವಿದ್ಯಾಲಯ ಶಿಕ್ಷಕರು' ತಮ್ಮ ಮಧ್ಯದಿಂದ ನಾಲ್ಕು ಸದಸ್ಯರನ್ನು ಆಯ್ಕೆಮಾಡಬೇಕು.

(ಸಿ) ನೋಂದಣಿಯಾದ ವೃತ್ತಿ ಪರ ವೈದ್ಯರಿಂದ ರಾಜ್ಯ ಸರಕಾರವು ನಾಲ್ಕು ಜನರನ್ನು ನಾಮಕರಣ ಮಾಡಬೇಕು.

(ಡಿ) ಕರ್ನಾಟಕ ದಂತ ವೈದ್ಯಕೀಯ ಪರಿಷತ್ತು, ಕರ್ನಾಟಕ ಫಾರ್ಮಸಿ ಪರಿಷತ್ತು, ಕರ್ನಾಟಕ ನರ್ಸಿಂಗ್ ಪರಿಷತ್ತು, ಕರ್ನಾಟಕ ಆಯುರ್ವೇದಿಕ್ ಮತ್ತು ಹೋಮಿಯೋಪಥಿ ಪರಿಷತ್ತುಗಳ ಸದಸ್ಯರಿಂದ ಒಂದು ವರುಷದ ಅವಧಿಗೆ ಸರದಿಯಂತೆ ಒಬ್ಬ ಸದಸ್ಯರನ್ನು ರಾಜ್ಯ ಸರಕಾರವು ನಾಮಕರಣ ಮಾಡಬೇಕು.

**(೨) ಉಪವಿಭಾಗ (೩) ರಲ್ಲಿ**

(i) ಶಬ್ಧಗಳು, ಕಂಸಗಳು ಮತ್ತು ಅಕ್ಷರಗಳಿಂದ "ಕಲಂ (ಎ)"ಯನ್ನು ಶಬ್ಧಗಳು, ಕಂಸಗಳು ಮತ್ತು ಅಕ್ಷರಗಳಿಂದ "ಕಲಂ (ಸಿ)"ಯೆಂದು ಬದಲಿಸಲ್ಪಡುವುದು.

(ii) ಶಬ್ಧಗಳು, ಕಂಸಗಳು ಮತ್ತು ಅಕ್ಷರಗಳಿಂದ ಕಲಂ (ಎ), (ಬಿ) ಮತ್ತು"ಸಿ"ಗೆ ಬದಲಾಗಿ ಶಬ್ಧಗಳು, ಕಂಸಗಳು ಮತ್ತು ಅಕ್ಷರಗಳು "ಕಲಂಗಳು (ಎ) ಮತ್ತು (ಬಿ) ಎಂದು ಬದಲಿಸಲ್ಪಡುವುದು"

**೩. ವಿಭಾಗ ೫ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೫ರಲ್ಲಿ "ವೈದ್ಯಕೀಯ ಪರಿಷತ್ತಿನ ಸದಸ್ಯರು ತಮ್ಮ ಮಧ್ಯದಿಂದ" ಎಂಬ ಶಬ್ಧಗಳ ನಂತರ ಶಬ್ಧಗಳು, ಕಂಸಗಳು ಅಕ್ಷರಗಳು ಮತ್ತು ಅಂಕೆಗಳಿಂದ "ವಿಭಾಗ (೩)ರ ಉಪವಿಭಾಗ (೨)ರ ಕಲಂ (ಡಿ)ಯಲ್ಲಿ ಉಲ್ಲೇಖಿಸಿದ ಸದಸ್ಯರಾಗಿಲ್ಲದ ಸದಸ್ಯರು" ಎಂದು ಬದಲಿಸಲ್ಪಡುವುದು.

**೪) ವಿಭಾಗ ೬ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೬ರ ಕೊನೆಯಲ್ಲಿ ಕೆಳಕಂಡ ನಿಬಂಧನೆಯನ್ನು ಸೇರಿಸಲಾಗುವುದು.

"ಕೌನ್ಸಿಲ್‌ನ ಚುನಾಯಿತ ಸದಸ್ಯನ ಸ್ಥಾನ ತೆರವಾಗಿದ್ದು, ಸದಸ್ಯತ್ವದ

ಉಳಿದ ಅವಧಿ ಆರು ತಿಂಗಳಿಗಿಂತ ಕಡಿಮೆಯಿದ್ದರೆ, ಖಾಲಿಸ್ಥಾನವನ್ನು ತುಂಬಲು ಚುನಾವಣೆ ನಡೆಸಲಾಗುವುದಿಲ್ಲ."

**೫) ವಿಭಾಗ ೮ರ ತಿದ್ದುಪಡಿ :**

ಪ್ರಧಾನ ಅಧಿನಿಯಮ ವಿಭಾಗ ೮ರ (೧) ಕಲಂ (ಬಿ)ಯಲ್ಲಿನ "ಸಂಬಂಧಿಸಿದ ವಿಶ್ವವಿದ್ಯಾಲಯದ ಮೆಡಿಕಲ್ ಫ್ಯಾಕಲ್ಟಿಯ ಸದಸ್ಯನಾಗಿ ಮುಂದುವರೆಯದಿದ್ದರೆ" ಎಂಬ ಶಬ್ಧಗಳ ಬದಲು "ಶಿಕ್ಷಕನಾಗಿ ಮುಂದುವರೆಯದಿದ್ದರೆ ಅಥವಾ ಯಾವುದೇ ವಿಶ್ವವಿದ್ಯಾಲಯದ ಶಿಕ್ಷಕನಾಗಿ ಮುಂದುವರೆಯದಿದ್ದರೆ ಅಥವಾ "ನೋಂದಣಿಯಾದ ಒಬ್ಬ ವೃತ್ತಿಪರ ವೈದ್ಯನಾಗಿ ಮುಂದುವರೆಯದಿದ್ದರೆ" ಎಂಬ ಶಬ್ಧಗಳಿಂದ ಬದಲಾಯಿಸಲಾಗುವುದು.

(ii) ಕಲಂ (ii) ರಲ್ಲಿನ ಶಬ್ಧಗಳು, ಕಂಸಗಳು ಮತ್ತು ಅಕ್ಷರ "ಕಲಂ (ಎ) ಅಥವಾ (ಸಿ)"ಎಂಬುದಕ್ಕೆ "ಕಲಂ (ಎ)" ಎಂಬ ಶಬ್ಧ, ಕಂಸಗಳು ಮತ್ತು ಅಕ್ಷರದಿಂದ ಬದಲಾಯಿಸಲಾಗುವುದು.

**೬) ವಿಭಾಗ ೬ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೯ರಲ್ಲಿ ಕೆಳಕಂಡ ನಿಬಂಧನೆಯನ್ನು ಸೇರಿಸಿಕೊಳ್ಳಲಾಗುವುದು.

"ವಿಭಾಗ ೩ರ ಉಪವಿಭಾಗ (೨)ರ ಕಲಂ (ಡಿ)ಅಡಿಯಲ್ಲಿ ನಾಮಕರಣ ಮಾಡಿದ ಸದಸ್ಯ, ಮೆಡಿಕಲ್ ಕೌನ್ಸಿಲ್‌ನ ಸಭೆಗಳಲ್ಲಿ ಭಾಗವಹಿಸಿದರೂ, ಅಂತಹ ಸಭೆಯಲ್ಲಿ ಮತ ಚಲಾಯಿಸುವ ಅಧಿಕಾರ ಹೊಂದಿರುವುದಿಲ್ಲ".

**೭) ವಿಭಾಗ ೧೩ರ ತಿದ್ದುಪಡಿ :**

ಪ್ರಮುಖ ಅಧಿನಿಯಮ ವಿಭಾಗ ೧೨ರಲ್ಲಿ (ಎ) ಉಪವಿಭಾಗ (೧) ರಲ್ಲಿನ

(i) 'ಹದಿನೈದು ರೂಪಾಯಿಗಳ ಶುಲ್ಕ' ಎಂಬ ಶಬ್ಧಗಳಿಗೆ ಬದಲಾಗಿ 'ಸೂಚಿಸಿದ ಶುಲ್ಕ' ಎಂಬ ಶಬ್ಧಗಳಿಂದ ಬದಲಾಯಿಸಲಾಗುವುದು.

(ii) ನಿಬಂಧನೆಯಲ್ಲಿನ 'ಎರಡು ರೂಪಾಯಿಗಳ ಶುಲ್ಕ' ಎಂಬ ಶಬ್ಧಗಳಿಗೆ ಬದಲಾಗಿ 'ಸೂಚಿಸಿದ ಶುಲ್ಕ' ಎಂಬ ಶಬ್ಧಗಳಿಂದ ಬದಲಾಯಿಸಲಾಗುವುದು.

(ಬಿ) ಉಪವಿಭಾಗ (೩)ರಲ್ಲಿ ಶಬ್ಧಗಳು, ಸಂಖ್ಯೆಗಳು ಮತ್ತು ಕಂಸಗಳಿಗೆ "ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್, ೧೯೭೩ (ಕೇಂದ್ರ ಅಧಿನಿಯಮ ೧೯೭೪ರ ೨)" ಎಂಬುದರಿಂದ ಬದಲಾಯಿಸಲಾಗುವುದು.

**೮) ವಿಭಾಗ ೧೫ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೫ರಲ್ಲಿ (೧) ಶಿರೋನಾಮೆಯಲ್ಲಿನ ಶಬ್ಧಗಳಾದ "ದುರ್ನಡತೆಗೆ" ಯನ್ನು "ದುರ್ನಡತೆ, ಇತರ" ಎಂಬ ಶಬ್ಧಗಳಿಂದ ಬದಲಾಯಿಸಲಾಗುವುದು.

(೨) ಉಪವಿಭಾಗ (೧)ರಲ್ಲಿ

(i) ಶಬ್ಧಗಳಾದ "ಯಾವುದೇ ದುರ್ನಡತೆ, ಉದಾಸೀನತೆ, ಅಸಮರ್ಥತೆ ಅಥವಾ ವೈದ್ಯಕೀಯ ನೀತಿಮತ್ತೆಯ ನಿಯಮಾವಳಿಯ ಭಂಗ" ಎಂಬುದರಿಂದ ಬದಲಾಯಿಸಲಾಗುವುದು.

(ii) ಶಬ್ಧಗಳು, ಸಂಖ್ಯೆಗಳು ಮತ್ತು ಕಂಸಗಳು "ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್, ೧೮೯೮ (ಕೇಂದ್ರ ಅಧಿನಿಯಮಗಿ ೧೮೯೮) ಎಂಬ "ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್, ೧೯೭೩ (ಕೇಂದ್ರ ಅಧಿನಿಯಮ V ೧೯೭೪)' ರಿಂದ ಬದಲಾಯಿಸಲಾಗುವುದು

**೯. ವಿಭಾಗ ೧೬ಕ್ಕೆ ತಿದ್ದುಪಡಿ :**

ಪ್ರಮುಖ ಅಧಿನಿಯಮ ೧೬ನೇ ವಿಭಾಗದಲ್ಲಿ, ಕಲಂ (ಸಿ) ನಂತರ ಕೆಳಕಂಡ ಕಲಂನ್ನು ಸೇರ್ಪಡೆ ಮಾಡಲಾಗುವುದು.

"(ಡಿ) ಯಾವುದೇ ಹೆಸರಿನಿಂದ ಕರೆಯಲ್ಪಡುವ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ಸಲಹಾ ಕೇಂದ್ರಗಳು, ಪಾಲಿಕ್ಲಿನಿಕ್‌ಗಳು, ಕ್ಲಿನಿಕ್‌ಗಳು ಮತ್ತು ಆರೈಕೆ ಕೇಂದ್ರಗಳು, ವೈದ್ಯಕೀಯ ಪ್ರಾಕ್ಟೀಸ್ ಕೈಕೊಳ್ಳುವ ಸರಕಾರಿ ಆಸ್ಪತ್ರೆಗಳಿಗೆ ಸೇರಿದ ವೈದ್ಯಕೀಯ ಸಂಸ್ಥೆಗಳ ಪರಿಶೀಲನೆ. ಅಂತಹ ಪರಿಶೀಲನೆಯನ್ನು ಬರವಣಿಗೆಯಲ್ಲಿ ನೀಡದ ಯಾವುದೇ ದೂರು ಇಲ್ಲದಿದ್ದರೆ ಖಾಸಗಿ ಅಥವಾ ಸರಕಾರಿ ಆಸ್ಪತ್ರೆ ಅಥವಾ ಮೆಡಿಕಲ್ ಕಾಲೇಜಿನ ಬೋಧನಾ ಆಸ್ಪತ್ರೆಯ ಪರಿಶೀಲನೆ ಕೈಕೊಳ್ಳಲಾಗದು.

**೧೦. ವಿಭಾಗ ೧೮ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೧೮, ಉಪವಿಭಾಗ (೧)ರಲ್ಲಿ 'ಅಂತಹ ಎಲ್ಲ ವಿಭಾಗಗಳಲ್ಲಿ ಮೆಡಿಕಲ್ ಕೌನ್ಸಿಲ್‌ಗೆ ಮೌಲ್ಯಮಾಪಕರಿರುತ್ತಾರೆ.' ಎಂಬ ಶಬ್ಧಗಳಿಗೆ ಬದಲಾಗಿ 'ಮೆಡಿಕಲ್ ಕೌನ್ಸಿಲ್ ಅಂತಹ ವಿಚಾರಣೆಗಳಲ್ಲಿ ಒಬ್ಬ ಮೌಲ್ಯ ಮಾಪಕನ ಸಹಾಯವನ್ನು ಪಡೆಯಬಹುದು' ಶಬ್ಧಗಳಿಂದ ಬದಲಿಸಲ್ಪಡುವುದು.

**೧೧. ವಿಭಾಗ ೧೯ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೧೯ರಲ್ಲಿ (೧) ಉಪವಿಭಾಗ (೧)ರಲ್ಲಿನ' ಪ್ರತಿವರುಷದ ಡಿಸೆಂಬರ್ ಮೂವತ್ತೊಂದನೇ ತಾರೀಖು ಅಥವಾ ಅದಕ್ಕೂ ಮೊದಲು ನವೀಕರಿಸಿದ ಶುಲ್ಕವಾಗಿ ಎರಡು ರೂಪಾಯಿಗಳು' ಶಬ್ಧಗಳಿಗೆ ಬದಲಾಗಿ 'ನಿಗದಿಪಡಿಸಿದ ಶುಲ್ಕವನ್ನು ನಿಗದಿಪಡಿಸಿದ ದಿನ ಅಥವಾ ಅದರ ಮೊದಲು' ಎಂಬ ಶಬ್ಧಗಳಿಂದ ಬದಲಿಸಲ್ಪಡುವುದು.

(೨) ಉಪವಿಭಾಗ (೧)ರ ನಂತರ ಸೇರಿಸಲಾಗುವುದು

"ಮೆಡಿಕಲ್ ಕೌನ್ಸಿಲ್ ಮಾನ್ಯ ಮಾಡಿದ ಸಂಘ ಅಥವಾ ಸಂಸ್ಥೆ ಆಯೋಜಿಸಿದ ೧೦೦ ಘಂಟೆಗಳಿಗಿಂತ ಕಡಿಮೆಯಿಲ್ಲದ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ ಎಂಬ ಪ್ರಮಾಣ ಪತ್ರವನ್ನು ನೋಂದಾಯಿತ ವೃತ್ತಿಪರ ವೈದ್ಯ ಹಾಜರುಪಡಿಸದಿದ್ದಲ್ಲಿ ನೋಂದಣಿಯ ನವೀಕರಣವನ್ನು ಮಾಡಲಾಗುವುದಿಲ್ಲ."

**೧೨. ವಿಭಾಗ ೨೩ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೨೩ರಲ್ಲಿನ ಶಬ್ಧಗಳು, ಸಂಖ್ಯೆಗಳು ಮತ್ತು ಕಂಸಗಳು "ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್ ೧೮೯೮ (ಕೇಂದ್ರ ಅಧಿನಿಯಮ" ೧೮೯೮ರ) ಎಂಬುದಕ್ಕೆ 'ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್ ೧೯೭೩ (ಕೇಂದ್ರ ಅಧಿನಿಯಮ V, ೧೯೭೪ರ) ಎಂಬ ಶಬ್ಧಗಳು, ಸಂಖ್ಯೆಗಳು ಮತ್ತು ಕಂಸಗಳಿಂದ ಬದಲಿಸಲಾಗುತ್ತದೆ.

**೧೩. ವಿಭಾಗ ೨೬ರ ತಿದ್ದುಪಡಿ :**

ಪ್ರಮುಖ ಅಧಿನಿಯಮದ ವಿಭಾಗ ೨೬ರಲ್ಲಿನ ಉಪವಿಭಾಗ ೧ರಲ್ಲಿನ ಶಬ್ಧಗಳು "ಅಧಿಕೃತ ರಾಜ್ಯಪತ್ರದಲ್ಲಿ" ಎಂಬುದಕ್ಕೆ ಬದಲಾಗಿ "ವೈದ್ಯಕೀಯ ಪರಿಷತ್ತಿನ ಕಛೇರಿಯ ಸೂಚನಾಫಲಕದ ಮೇಲೆ" ಎಂಬ ಶಬ್ಧಗಳಿಂದ ಬದಲಾಯಿಸಲಾಗುವುದು.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

### ಪ್ರಕಟಣೆ

### (೧೩ನೇ ಫೆಬ್ರವರಿ ೨೦೧೨ರ ರಾಜ್ಯ ಪತ್ರ ಭಾಗ IVಎ ಸಂಖ್ಯೆ ೧೧೦ರಲ್ಲಿ ಪ್ರಕಟಿತ)

ಕರ್ನಾಟಕ ವೈದ್ಯಕೀಯ ನೋಂದಣಿ ತಿದ್ದುಪಡಿ ೨೦೦೩ರ ಅಧಿನಿಯಮ (೨೦೦೩ರ ಕರ್ನಾಟಕ ಅಧಿನಿಯಮ ೪೩)ಯ ವಿಭಾಗ ೧ರ ಉಪವಿಭಾಗ (೩) ಕೊಡಮಾಡಿದ ಅಧಿಕಾರವನ್ನು ಬಳಸಿ ಕರ್ನಾಟಕ ಸರಕಾರವು ೨೦೧೨ರ ಮಾರ್ಚ್ ೧ನ್ನು ಮೇಲೆ ಸೂಚಿಸಿದ ವಿಧಿಯ ಎಲ್ಲ ಷರತ್ತುಗಳು ಜಾರಿಗೆ ಬರುವ ತಾರೀಖು ಎಂದು ಪ್ರಕಟಿಸಿದೆ.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

**ಭಾಗ IV–ಎ ಬೆಂಗಳೂರು, ಗುರುವಾರ, ಏಪ್ರಿಲ್ ೬, ೨೦೧೭ ನಂ. ೩೫೩ (ಚೈತ್ರ ೧೬, ಶಕ ವರ್ಷ ೧೯೩೯)**

**ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

ಸಂಖ್ಯೆ ಸಂವ್ಯಶಾಇ ೫ ಶಾಸನ ೨೦೧೭, ಬೆಂಗಳೂರು, ದಿನಾಂಕ ೧೬–೦೪ ೨೦೧೭

ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ ಮಸೂದೆ ೨೦೧೭ಕ್ಕೆ ೨೦೧೭ರ ಏಪ್ರಿಲ್ ತಿಂಗಳ ೦೩ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳಿವಳಿಕೆಗಾಗಿ ಇದನ್ನು ೨೦೧೭ರ ಕರ್ನಾಟಕ ಅಧಿನಿಯಮ ಸಂಖ್ಯೆ ೧೯ ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

ಕರ್ನಾಟಕ ಅಧಿನಿಯಮ ಸಂಖ್ಯೆ ೧೯, ೨೦೧೭ ೬, ಏಪ್ರಿಲ್ ೨೦೧೭ ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿತ) ಈ ಅಧಿನಿಯಮ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧ನ್ನು ಮತ್ತೆ ತಿದ್ದುಪಡಿ ಮಾಡಲು

ಕೆಳಗೆ ಕಾಣಿಸಿದ ಉದ್ದೇಶಕ್ಕಾಗಿ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧ನ್ನು ಮತ್ತೆ ತಿದ್ದುಪಡಿ ಮಾಡುವ ಅವಶ್ಯಕತೆ ಕಂಡುಬಂದಿದ್ದು, ಅದನ್ನು ಭಾರತ ಗಣರಾಜ್ಯದ ಅರವತ್ತೆಂಟನೆಯ ವರುಷದಲ್ಲಿ ಅದು ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಅಧಿನಿಯಮವಾಗಿ ಮಾಡಲಾಗಿದೆ.

# ಕರ್ನಾಟಕ ಅಧಿನಿಯಮ ಸಂ. ೨೦೧೭ರ ೧೯

(ಕರ್ನಾಟಕ ರಾಜ್ಯ–ವಿಶೇಷದಲ್ಲಿ ಏಪ್ರಿಲ್ ೬, ೨೦೧೭ರಲ್ಲಿ ಮೊದಲು ಪ್ರಕಟಿತ)

ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ಅಧಿನಿಯಮ ೨೦೧೭ (ರಾಜ್ಯಪಾಲರ ಒಪ್ಪಿಗೆಯನ್ನು ಏಪ್ರಿಲ್ ೩, ೨೦೧೭ರಂದು ಪಡೆದಿದೆ.)

**೧. ಶಿರೋನಾಮೆ ಮತ್ತು ಪ್ರಾರಂಭ :**

(೧) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ಅಧಿನಿಯಮ ೨೦೧೭ ನಿಯಮ ಳನ್ನು ಇನ್ನು ಮುಂದೆ ಎಂದು ಉಲ್ಲೇಖಿಸಲಾಗುತ್ತದೆ.

(೨) ಅದು ಕೂಡಲೇ ಕಾರ್ಯರೂಪಕ್ಕೆ ಬರುತ್ತದೆ.

**೨. ವಿಭಾಗ ೩ರ ತಿದ್ದುಪಡಿ**

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧ (ಕರ್ನಾಟಕ ಅಧಿನಿಯಮ ೧೯೬೧ರ ೩೪ (ಇನ್ನುಮುಂದೆ ಪ್ರಮುಖ ಅಧಿನಿಯಮ ಎಂದು ಉಲ್ಲೇಖಿಸಲಾಗುವುದು) ಅದರ

(i) 'ಹದಿನೈದು' ಶಬ್ಧಕ್ಕೆ ಬದಲಾಗಿ 'ಹದಿನೇಳು' ಎಂದು ಸೇರಿಸಲಾಗುವುದು.

(ii) ಕಲಂ (ಎ)ಗೆ ಕೆಳಕಂಡಂತೆ ಸೇರಿಸಲಾಗುವುದು.

(ಎ) ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾದ ವೃತ್ತಿಪರ ವೈದ್ಯರ ಮಧ್ಯದಿಂದ ರಾಜ್ಯದ ಕಂದಾಯ ವಿಭಾಗಗಳ ಪ್ರತಿಯೊಂದರಿಂದ ಇಬ್ಬರು ಸದಸ್ಯರ ಆಯ್ಕೆ ಮಾಡಬೇಕು.

(iii) ಕಲಂ (ಬಿ)ಯಲ್ಲಿ 'ನಾಲ್ಕು ಸದಸ್ಯರು' ಎಂಬ ಶಬ್ಧಗಳ ನಂತರ, 'ಪ್ರತಿಯೊಂದು ಕಂದಾಯ ವಿಭಾಗದಿಂದ ಒಬ್ಬರು' ಎಂಬ ಶಬ್ಧಗಳನ್ನು ಸೇರಿಸಲಾಗುವುದು ಮತ್ತು (iii) ಕಲಂ (ಸಿ)ಯಲ್ಲಿ 'ನಾಲ್ಕು ಸದಸ್ಯರು' ಎಂಬ ಶಬ್ಧಗಳ ನಂತರ 'ಪ್ರತಿಯೊಂದು ಕಂದಾಯ ವಿಭಾಗದಿಂದ ಒಬ್ಬರು ಎಂಬ ಶಬ್ಧಗಳನ್ನು ಸೇರಿಸಲಾಗುವುದು.

**೩. ವಿಭಾಗ ೧೯ರ ಬದಲಾವಣೆ :**

ಪ್ರಮುಖ ಅಧಿನಿಯಮ ವಿಭಾಗ ೧೯ರಲ್ಲಿ ಕೆಳಕಂಡ ಬದಲಾವಣೆಯನ್ನು ಮಾಡಲಾಗುವುದು.

**೧೯. ನೋಂದಣಿ ನವೀಕರಣ :**

(೧) ಪ್ರತಿಯೊಬ್ಬ ವೃತ್ತಿಪರ ವೈದ್ಯ ಐದು ವರ್ಷಗಳಿಗೊಮ್ಮೆ ತನ್ನ ನೋಂದಣಿಯನ್ನು ನಿಗದಿಪಡಿಸಿದ ಶುಲ್ಕದೊಂದಿಗೆ ಮೆಡಿಕಲ್ ಕೌನ್ಸಿಲ್‌ಗೆ ನೀಡಿ ನವೀಕರಿಸಿಕೊಳ್ಳಬೇಕು. ನೋಂದಣಿ ನವೀಕರಣಕ್ಕಾಗಿ ಅರ್ಜಿದಾರ ತಾನು ಮುಂದುವರಿದ ವೈದ್ಯಕೀಯ ಶಿಕ್ಷಣದ ಕಾರ್ಯಕ್ರಮದಲ್ಲಿ ಭಾಗವಹಿಸಿ ಇಲ್ಲವೆ ಹಾಜರಾಗಿ ಕನಿಷ್ಠ ಮೂವತ್ತು ಮಾನ್ಯತಾ ಅಂಕಗಳನ್ನು ಪಡೆದಿದ್ದೇನೆ ಎಂಬುದಕ್ಕೆ ಸಾಕ್ಷಿ ನೀಡುವ ಪುರಾವೆಯನ್ನು ಸಾದರಪಡಿಸಬೇಕು (ಒಂದು ಮಾನ್ಯತಾ ಅಂಕ=ನಾಲ್ಕು ಘಂಟೆಗಳ ಮುಂದುವರೆದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮ.) ಹಿಂದಿನ ಐದು ವರ್ಷಗಳ ಕಾಲಾವಧಿಯಲ್ಲಿ ಪ್ರತಿವರುಷ ಆರಕ್ಕಿಂತ ಕಡಿಮೆಯಿಲ್ಲದಂತೆ ಮಾನ್ಯತಾ ಅಂಕಗಳನ್ನು ಯಾವುದೇ ಮಾನ್ಯತೆ ಪಡೆದ ವೈದ್ಯಕೀಯ ಸಮ್ಮೇಳನ ಅಥವಾ ಸೆಮಿನಾರ್ ಅಥವಾ ಕಮ್ಮಟ ಅಥವಾ ಕರ್ನಾಟಕ ಮೆಡಿಕಲ್ ಕೌನ್ಸಿಲ್ ಮಾನ್ಯ ಮಾಡಿದ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಪಡೆದಿರಬೇಕು.

(೨) ಉಪವಿಭಾಗ (೧)ರ ಅಡಿಯಲ್ಲಿ ವೃತ್ತಿ ಪರ ವೈದ್ಯ ತನ್ನ ನೋಂದಣಿಯನ್ನು ನವೀಕರಣಗೊಳಿಸದಿದ್ದರೆ ವಿಭಾಗ ೧೩ರ ಉಪವಿಭಾಗ (೧)ರ ಅಡಿಯಲ್ಲಿ ವೃತ್ತಿಪರ ವೈದ್ಯನಾಗಿ ಉಳಿಯುವುದಿಲ್ಲ. ರಿಜಿಸ್ಟ್ರಾರ್ ಅಂತಹ ವೃತಿಪರ ವೈದ್ಯರ ಹೆಸರನ್ನು ವಿಭಾಗ ೧೨ರ ಅಡಿಯಲ್ಲಿ ಕಾಯ್ದಿರಿಸಿರುವ ರಿಜಿಸ್ಟರ್‌ನಿಂದ ತೆಗೆದುಹಾಕುತ್ತಾರೆ.

ಅಂತಹ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಸೂಚನೆ ನೀಡಿದಂತೆ ಕೆಲವೊಂದು ವೃತ್ತಿಪರ ವೈದ್ಯರು ಭಾಗಿಯಾಗದಿರುವ ಬಗ್ಗೆ ವಿನಾಯತಿ ಪಡೆದಿರಬಹುದು.

ಅಲ್ಲದೆ ಹಾಗೆ ತೆಗೆದು ಹಾಕಿದ ಹೆಸರನ್ನು ರಿಜಿಸ್ಟರ್‌ನಲ್ಲಿ ನವೀಕರಣ ಶುಲ್ಕ ಪಾವತಿ ಮಾಡಿದ ನಂತರ ಪುನಃ ಸೇರ್ಪಡೆ ಮಾಡಬಹುದು. ಉಪವಿಭಾಗ (೧)ರಲ್ಲಿ ನಿಗದಿಪಡಿಸಿದಂತೆ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಅಗತ್ಯ.

ವಿವರಣೆ : 'ಸಿಎಂಇ' ಎಂದರೆ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮ ಅಥವಾ ವೃತ್ತಿಪರರ ವೈದ್ಯಕೀಯ ಸಮ್ಮೇಳನ ಅಥವಾ ಸೆಮಿನಾರ್ ಅಥವಾ ಕಮ್ಮಟ. ರಾಜಧಾನಿಯಲ್ಲಿನ ಮೆಡಿಕಲ್ ಕೌನ್ಸಿಲ್ ಅಥವಾ ವಿಭಾಗೀಯ ಕೇಂದ್ರ ಸ್ಥಳ ಅಥವಾ ಜಿಲ್ಲಾ ಕೇಂದ್ರ ಅಥವಾ ಮೆಡಿಕಲ್ ಕಾಲೇಜುಗಳ ಬೋಧನಾ ಆಸ್ಪತ್ರೆಗಳು ಅಥವಾ ಕರ್ನಾಟಕ ಮೆಡಿಕಲ್ ಕೌನ್ಸಿಲ್ ನಡೆಸುತ್ತಿರುವ ಯಾವುದೇ ಸಂಸ್ಥೆ. ಇದನ್ನು ಹಮ್ಮಿಕೊಂಡಿರಬಹುದು ಅಥವಾ ಮಾನ್ಯ ಮಾಡಿರಬಹುದು.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

**ಭಾಗ IV–ಎ ಬೆಂಗಳೂರು, ಶನಿವಾರ, ಆಗಸ್ಟ್, ೩೧, ೨೦೧೯**

**ನಂ. ೭೩೫ (ಭಾದ್ರಪದ ೯, ಶಕ ವರ್ಷ ೧೯೪೦)**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ**

**ಪ್ರಕಟಣೆ**

ಸಂಹೆಚ್.ಎಫ್‌ಡಬ್ಲ್ಯೂ, ಆರ್‌ಜಿಯು ೨೦೧೭ ಬೆಂಗಳೂರು ತಾರೀಖು ೩೧-೮-೨೦೧೯

ಕರ್ನಾಟಕ ವೈದ್ಯಕೀಯ ನೋಂದಣಿ ನಿಯಮಗಳು ೧೯೬೩ಕ್ಕೆ ಮತ್ತೆ ತಿದ್ದುಪಡಿ ಮಾಡಲು ಕೆಳಕಂಡ ನಿಯಮಗಳ ಕರಡನ್ನು ರೂಪಿಸಿದೆ. ಅದನ್ನು ಕಾರ್ಯಗತ ಮಾಡಲು ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ ೧೯೬೧ (ಕರ್ನಾಟಕ ಅಧಿನಿಯಮ ೧೯೬೧ರ ೩೪)ರ ವಿಭಾಗ ೩೧ ರಿಂದ ದತ್ತವಾಗಿರುವ ಅಧಿಕಾರ ಬಳಸಲು ಕರ್ನಾಟಕ ಸರ್ಕಾರ ಅಪೇಕ್ಷಿಸಿದೆ. ಸಂ. ಹೆಚ್‌ಎಫ್‌ಡಬ್ಲ್ಯೂ ೦೭ ಆರ್‌ಜಿಯು ೨೦೧೭, ತಾರೀಖು ೨೧, ಜನವರಿ ೨೦೧೯ ಭಾಗ ಖಗಿ ಎ ಕರ್ನಾಟಕ ರಾಜ್ಯಪತ್ರ ತಾರೀಖು ೨೪ ಜನವರಿ ೨೦೧೯ರಂದು ಪ್ರಕಟಮಾಡಿ, ಅದರ ಪ್ರಭಾವಕ್ಕೆ ಒಳಪಡುವ ವ್ಯಕ್ತಿಗಳಿಂದ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟವಾದ ತಾರೀಖಿನಿಂದ ೧೫ ದಿನಗಳ ಒಳಗೆ ಸಲ್ಲಿಸಲು ಆಹ್ವಾನಿಸಿದ್ದಿತು.

ಆ ರಾಜ್ಯಪತ್ರವು ಸಾರ್ವಜನಿಕರಿಗೆ ೨೪ ಜನವರಿ ೨೦೧೯ರಂದು ದೊರೆತಿದ್ದಿತು. ಅದಕ್ಕೆ ಆಕ್ಷೇಪಣೆಗಳು/ಸೂಚನೆಗಳನ್ನು ರಾಜ್ಯ ಸರಕಾರ ಪಡೆಯಿತು. ನಂತರ ಆ ಆಕ್ಷೇಪಣೆ/ಸೂಚನೆಗಲನ್ನು ಕೂಲಂಕುಷವಾಗಿ ಪರಿಶೀಲಿಸಿ, ಅವುಗಳಿಗೆ ವಿವರವಾದ ವಿವರಣೆಗಳನ್ನು ನೀಡಿ ಅವುಗಳನ್ನು ತಿರಸ್ಕರಿಸುವ ನಿರ್ಣಯವನ್ನು ರಾಜ್ಯ ಸರಕಾರ ಕೈಕೊಂಡಿತು.

ಈಗ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, ೧೯೬೧ರ (ಕರ್ನಾಟಕ ಅಧಿನಿಯಮ ೧೯೬೧ರ ೩೪) ವಿಭಾಗ ೩೧ ಕೊಡಮಾಡುವ ಅಧಿಕಾರವನ್ನು ಬಳಕೆಮಾಡಿ ಕೆಳಕಂಡಂತೆ ರೂಪಿಸಿದೆ.

## ನಿಯಮಗಳು

**೧. ಶಿರೋನಾಮೆ ಮತ್ತು ಪ್ರಾರಂಭ –**

(೧) ಈ ನಿಯಮಗಳನ್ನು ಕರ್ನಾಟಕ ಮೆಡಿಕಲ್ ನೋಂದಣಿ/ತಿದ್ದುಪಡಿ ನಿಯಮಗಳು ೨೦೧೮ ಎಂದು ಕರೆಯಬಹುದು.

(೨) ಅವು ಅಧಿಕೃತ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನದಿಂದ ರೂಢಿಗೆ ಬರುತ್ತದೆ.

**೨. ನಿಯಮ ೪ರ ತಿದ್ದುಪಡಿ –**

ಕರ್ನಾಟಕ ವೈದ್ಯಕೀಯ ನೋಂದಣಿ ೧೯೬೩ರ ನಿಯಮ ೪ರಲ್ಲಿನ (ಇದನ್ನು ಇನ್ನು ಮುಂದೆ ನಿಯಮಗಳು ಎಂದು ಕರೆಯಬಹುದು.)

(i) ಉಪನಿಯಮ (೧)ನ್ನು ಕೆಳಕಂಡಂತೆ ಬದಲಿಸಲಾಗುತ್ತದೆ.

"(೧) ೩ನೇ ಅಧಿನಿಯಮ ಉಪವಿಭಾಗ(೨) ರ ಕಲಂ (ಎ) ಮತ್ತು ಕಲಂ(ಬಿ)ಯಲ್ಲಿ ಸೂಚಿಸಿರುವಂತೆ ನೋಂದಣಿಯಾದ ವೃತ್ತಿಪರ ವೈದ್ಯರ ಪಟ್ಟಿಯಿರುತ್ತದೆ. ಸಹಕಾರಿ ಸೊಸೈಟಿಗಳ ವಿಭಾಗದ ಅಡಿಶನಲ್ ರಿಜಿಸ್ಟಾರ್ ಅಥವಾ ಜಾಯಿಂಟ್ ರಿಜಿಸ್ಟಾರ್ ಹುದ್ದೆಗಿಂತ ಕೆಳಗಿಲ್ಲದ ಅಧಿಕಾರಿ, ಅಥವಾ ಕೆಎಎಸ್ ಅಧಿಕಾರಿ (ಸೀನಿಯರ್ ಸ್ಕೇಲ್) ಚುನಾವಣಾಧಿಕಾರಿಯಾಗಿರುತ್ತಾರೆ.

೧. (ಎ) ಚುನಾವಣೆಗಳು ನಡೆಯುವ ವರುಷದಲ್ಲಿ ಅಧಿನಿಯಮದ ೨೬ನೇ ವಿಭಾಗದ ಉಪವಿಭಾಗದ (೧) ಪ್ರಕಾರ ಪ್ರಕಟಣೆಗೊಂಡ ವೃತ್ತಿಪರ ವೈದ್ಯರ ಪಟ್ಟಿಯು ಅಧಿನಿಯಮ ೩, ಉಪವಿಭಾಗ (೨)ಕ್ಕೆ ಅನುಗುಣವಾಗಿ ಸದಸ್ಯರ ಚುನಾವಣೆಗಾಗಿ ಪೂರ್ವಭಾವಿ ಚುನಾವಣಾ ಹೆಸರುಗಳ ಪಟ್ಟಿಯಾಗಿರುತ್ತದೆ.

ಮೆಡಿಕಲ್ ಕೌನ್ಸಿಲ್ ಪಟ್ಟಿಯಲ್ಲಿ ನಮೂದಿಸಲ್ಪಟ್ಟ ಹೆಸರುಗಳ ಪ್ರಕಾರ ಪ್ರತಿ ಕಂದಾಯ ವಿಭಾಗವಾರು ಕಾಯ್ದಿರಿಸಿದ ಬೇರೆ ಚುನಾವಣಾ ಹೆಸರುಗಳ ಪಟ್ಟಿ ಅದಾಗಿರಬೇಕು."

(ii)ಉಪನಿಯಮ (೨)ರಲ್ಲಿ 'ಇಷ್ಟಪಡಲಾಗುವುದು' ಎಂಬ ಶಬ್ದಗಳ

ನಂತರ "ಚುನಾವಣಾ ಪ್ರಕ್ರಿಯೆಗೆ ಮೊದಲು ಪ್ರತಿಯೊಂದು ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಮೆಡಿಕಲ್ ಕೌನ್ಸಿಲ್‌ನ ಸೂಚನಾಫಲಕ ಮತ್ತು ಅದರ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು" ಎಂಬುದನ್ನು ಸೇರಿಸ ಲಾಗುವುದು, ಮತ್ತು

(iii) ಉಪನಿಯಮ(೩)ರಲ್ಲಿ 'ಅಧಿಕೃತ ಗೆಜೆಟ್' ಎಂಬ ಶಬ್ಧಗಳಿಗೆ "ಅಧಿಕೃತ ಗೆಜೆಟ್ ಅಥವಾ ಮೆಡಿಕಲ್ ಕೌನ್ಸಿಲ್ ಸೂಚನಾಫಲಕದ ಮೇಲೆ ಮತ್ತು ಅಧಿಕೃತ ವೆಬ್‌ಸೈಟ್ ಮೇಲೆ ಎಂಬ ಶಬ್ಧಗಳಿಂದ ಬದಲಿಸ ಲಾಗುವುದು."

**೩. ನಿಯಮ ೫೮ ತಿದ್ದುಪಡಿ :**

ಮೇಲ್ಕಂಡ ನಿಯಮಗಳ, ನಿಯಮ ೫೮ ಉಪನಿಯಮ (೧)ರಲ್ಲಿ ಕೆಳಕಂಡ ಅಂಶಗಳನ್ನು ಸೇರಿಸಿ ಬದಲಾಯಿಸಲಾಗುವುದು.

"ಅಧಿನಿಯಮದ ವಿಭಾಗ ೩೮ ಉಪವಿಭಾಗ(೨)ರ ಕಲಂ(ಬಿ) ಯಲ್ಲಿ ಉಲ್ಲೇಖಿಸಿದಂತೆ, ಮೆಡಿಕಲ್ ಕೌನ್ಸಿಲ್ ಅಥವಾ ವಿಶ್ವವಿದ್ಯಾಲಯ ಶಿಕ್ಷಕರ ಅಡಿಯಲ್ಲಿ ನೊಂದಾಯಿಸಿದ ಮೆಡಿಕಲ್ ಫ್ಯಾಕಲ್ಟಿ ಸದಸ್ಯರು ಮತ್ತು ವೈದ್ಯಕೀಯ ಶಿಕ್ಷಕರಿಂದ ಸದಸ್ಯರ ಆಯ್ಕೆ ಮಾಡಬೇಕಾದರೆ ರಿಜಿಸ್ಟ್ರಾರ್ ಅವರು ಕಾಯಿದೆ ಬದ್ಧವಾಗಿ ಸ್ಥಾಪಿತವಾದ ವಿಶ್ವವಿದ್ಯಾಲಯಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಅಧಿನಿಯಮ ೧೯೫೬ರ ಅಡಿಯಲ್ಲಿ ಘೋಷಿಸಲ್ಪಟ್ಟ ಡೀಮ್ಡ್ ವಿಶ್ವವಿದ್ಯಾಲಯಗಳೂ ಸೇರಿದಂತೆ, ಅವರಿಗೆ ಪತ್ರ ಬರೆದು, ಆಯಾ ಕಂದಾಯ ವಿಭಾಗದಲ್ಲಿರುವ ವಿಶ್ವವಿದ್ಯಾಲಯಗಳ ಮೆಡಿಕಲ್ ಫ್ಯಾಕಲ್ಟಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಇರುವ ಸದಸ್ಯರ ಹೆಸರುಗಳನ್ನು ಕಳುಹಿಸಿಕೊಡುವಂತೆ ಕೋರುತ್ತಾರೆ. ಅದು ದೊರೆತ ನಂತರ ಸದಸ್ಯರ ಹೆಸರುಗಳನ್ನು ಅಕಾರಾತ್ಮಕವಾಗಿ ವ್ಯವಸ್ಥೆ ಮಾಡುತ್ತಾರೆ. ಅಂತಹ ಪಟ್ಟಿ ಕಂದಾಯ ವಿಭಾಗಕ್ಕೆ ಅನುಗುಣವಾದ ಚುನಾವಣೆ ಉದ್ದೇಶದ ಪ್ರಾಥಮಿಕ ಮತದಾರರ ಪಟ್ಟಿ ಎನಿಸುತ್ತದೆ. ಇದು ಅಧಿನಿಯಮ ವಿಭಾಗ ೩೮ ಉಪವಿಭಾಗ (೨)ರಕಲಂ (ಬಿ)ಕ್ಕೆ ಅನುಗುಣವಾಗಿರುತ್ತದೆ.

ಇದನ್ನು ಅಧಿಕೃತ ಗೆಜೆಟ್ ಅಥವಾ ಮೆಡಿಕಲ್ ಕೌನ್ಸಿಲ್ ಸೂಚನಾ ಫಲಕ ಅಥವಾ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ."

**೪. ನಿಯಮ ೬ರ ತಿದ್ದುಪಡಿ:**

ಮೇಲ್ಕಂಡ ನಿಯಮಗಳ ೬ನೇ ನಿಯಮದ ಉಪನಿಯಮ(೧)ರಲ್ಲಿನ 'ಅಧಿಕೃತ ಗೆಜೆಟ್' ಎಂಬ ಶಬ್ಧಕ್ಕೆ 'ಅಧಿಕೃತ ಗೆಜೆಟ್ ಅಥವಾ ಮೆಡಿಕಲ್ ಕೌನ್ಸಿಲ್ ಸೂಚನಾ ಫಲಕ ಅಥವಾ ಅಧಿಕೃತ ವೆಬ್ ಸೈಟ್' ಎಂಬ ಶಬ್ಧಗಳಿಂದ ಬದಲಿಸಲಾಗುವುದು.

**೫. ನಿಯಮ ೭ರ ತಿದ್ದುಪಡಿ :**

ಮೇಲ್ಕಂಡ ನಿಯಮಗಳ ೭ನೇ ಕಲಂ(ಡಿ) ಯಲ್ಲಿ ಕೆಳಕಂಡ ಅಂಶಗಳನ್ನು ಸೇರಿಸಿ ಬದಲಾಯಿಸಲಾಗುವುದು. "(ಡಿ) ಚುನಾವಣೆಯ ತಾರೀಖು ಮತ್ತು ಸಮಯ ಹಾಗೂ ಮತದಾನ ಮಾಡುವ ಸ್ಥಳ."

**೬. ನಿಯಮ ೮ರ ಬದಲಾವಣೆ:**

ಮೇಲ್ಕಂಡ ನಿಯಮಗಳ ೮ನೇ ನಿಯಮದಲ್ಲಿ ಕೆಳಕಂಡ ಅಂಶಗಳನ್ನು ಸೇರಿಸಿ ಬದಲಾಯಿಸಲಾಗುವುದು.

"೮. ಚುನಾವಣೆಯಲ್ಲಿ ಸದಸ್ಯನಾಗುವ ಅರ್ಹತೆ : ಪ್ರಕಟಗೊಂಡ ಪ್ರತಿ ಕಂದಾಯ ವಿಭಾಗಕ್ಕೆ ಅನುಕ್ರಮವಾಗಿ ನಿಯಮ ೪, ೫ ಮತ್ತು ೬ರ ಅಡಿಯಲ್ಲಿ ಅಂತಿಮ ಚುನಾವಣಾ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಯಾಗಿರುವ ಪ್ರತಿಯೊಬ್ಬ ವ್ಯಕ್ತಿ. ಅಧಿನಿಯಮ ವಿಭಾಗ ೭ರ ಅಡಿಯಲ್ಲಿ ಅನರ್ಹನಾಗಿರದಿದ್ದಲ್ಲಿ, ಸಂಬಂಧಿಸಿದ ಕಂದಾಯ ವಿಭಾಗದ ಚುನಾವಣಾ ಕ್ಷೇತ್ರದಿಂದ ಸದಸ್ಯನಾಗಿ ಆಯ್ಕೆಯಾಗಲು ಅರ್ಹ."

**೭. ನಿಯಮ ೯ರ ತಿದ್ದುಪಡಿ:**

ಮೇಲ್ಕಂಡ ನಿಯಮ ೯ರ

(i) ಉಪನಿಯಮ (೨) ರಲ್ಲಿ "ಸಂಬಂಧಿಸಿದ ಚುನಾವಣಾ ಕ್ಷೇತ್ರ" ಎಂಬ ಶಬ್ಧಗಳಿಗೆ ಪರ್ಯಾಯವಾಗಿ "ಮತ್ತು ಸಂಬಂಧಿಸಿದ ಕಂದಾಯ ವಿಭಾಗಗಳು" ಎಂಬುದನ್ನು ಸೇರಿಸಲಾಗುವುದು.

(ii) ಉಪನಿಯಮ (೩) ರಲ್ಲಿ ಕೆಳಕಂಡ ನಿಬಂಧನೆಯನ್ನು ಸೇರ್ಪಡೆ ಮಾಡಲಾಗುವುದು. ಅದು,

(iii) ಒಂದು ಕಂದಾಯ ವಿಭಾಗದ ಮತದಾರ ತಾನು ಮತದಾರ ಎಂದು ಸೇರ್ಪಡೆಯಾಗಿರುವ ಕಂದಾಯ ವಿಭಾಗವನ್ನು ಹೊರತು ಪಡಿಸಿ, ಬೇರೆ ಯಾವುದೇ ಕಂದಾಯ ವಿಭಾಗದ ಯಾವುದೇ ಅಭ್ಯರ್ಥಿಯ

ನಾಮಪತ್ರವನ್ನು ಸೂಚನೆ ಅಥವಾ ಅನುಮೋದನೆ ಮಾಡುವುದಾಗಲೀ ಮಾಡುವಂತಿಲ್ಲ."

(iv) ಉಪನಿಯಮ (೪)ರಲ್ಲಿ "ಕೌನ್ಸಿಲ್‌ಗೆ ಆಯ್ಕೆಯಾದರೆ" ಶಬ್ಧಗಳನ್ನು ಮತ್ತು "ಕೌನ್ಸಿಲ್‌ಗೆ ಆಯ್ಕೆಯಾದರೆ ಮತ್ತು ತಾನು ನಾಮಪತ್ರ ಸಲ್ಲಿಸ ಬೇಕೆಂದಿರುವ ಕಂದಾಯ ವಿಭಾಗದ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಯಾಗಿದ್ದರೆ' ಎಂಬ ಶಬ್ಧಗಳನ್ನಾಗಿ ಬದಲಾಯಿಸಲಾಗುವುದು.

(v) ಉಪನಿಯಮ (೫)ರಲ್ಲಿನ 'ಮಧ್ಯಾಹ್ನದ ೧೨ ಘಂಟೆಯವರೆಗೆ' ಎಂಬ ಶಬ್ಧಗಳು, ಸಂಖ್ಯೆ ಮತ್ತು ಅಕ್ಷರಗಳ ಬದಲಾಗಿ 'ಸಂಜೆ ೫ ಘಂಟೆಯವರೆಗೆ' ಎಂಬ ಶಬ್ಧಗಳು, ಸಂಖ್ಯೆ ಮತ್ತು ಅಕ್ಷರಗಳನ್ನಾಗಿ ಬದಲಾಯಿಸಲಾಗುವುದು.

(vi) ಉಪನಿಯಮ(೬)ರ ನಂತರ ಕೆಳಕಾಣಿಸುವುದನ್ನು ಸೇರಿಸ ಲಾಗುವುದು.

"(೭) ನಿರ್ದಿಷ್ಟಪಡಿಸಿದ ಸಮಯ ಮತ್ತು ತಾರೀಖಿನೊಳಗೆ ಚುನಾವಣಾ ಕ್ಷೇತ್ರ ಮತ್ತು ಕಂದಾಯ ವಿಭಾಗಕ್ಕೆ ಅನುಗುಣವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಒಟ್ಟು ಸಂಖ್ಯೆ ಮತ್ತು ಹೆಸರುಗಳನ್ನು ಮೆಡಿಕಲ್ ಕೌನ್ಸಿಲ್‌ನ ಅಧಿಕೃತ ವೆಬ್‌ಸೈಟ್ ಮೇಲೆ ಪ್ರಕಟಿಸಲಾಗುವುದು. ಮತ್ತು ಮೆಡಿಕಲ್ ಕೌನ್ಸಿಲ್‌ನ ಸೂಚನಾ ಫಲಕದ ಮೇಲೆ ಪ್ರಕಟಿಸಲಾಗುವುದು."

**೮. ನಿಯಮ ೧೦ರ ತಿದ್ದುಪಡಿ:**

ಮೇಲ್ಕಂಡ ನಿಯಮ ೧೦ರ ಉಪನಿಯಮ (೧) ರಲ್ಲಿನ "ಐವತ್ತು ರೂಪಾಯಿಗಳನ್ನು ನಗದಾಗಿ" ಎಂಬ ಶಬ್ಧಗಳಿಗೆ ಬದಲಾಗಿ "ಮೆಡಿಕಲ್ ಕೌನ್ಸಿಲ್ ರಿಜಿಸ್ಟ್ರಾರ್ ಅವರ ಹೆಸರಿನಲ್ಲಿ ತೆಗೆದ ಐದು ನೂರು ರೂಪಾಯಿಗಳ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ" ಎಂಬುದಾಗಿ ಬದಲಿಸಲಾಗುವುದು.

**೯. ನಿಯಮ ೧೧ರ ತಿದ್ದುಪಡಿ:**

ಮೇಲ್ಕಂಡ ನಿಯಮಗಳ ೧೧ನೇ ನಿಯಮದಲ್ಲಿನ ಶಬ್ಧ, ಸಂಖ್ಯೆಗಳು, ಮತ್ತು ಅಕ್ಷರಗಳು,"ಮಧ್ಯಾಹ್ನ ೧೨ಕ್ಕೆ"ಎಂಬುದನ್ನು ತೆಗೆದುಹಾಕಲಾಗುವುದು.

**೧೦. ನಿಯಮ ೧೨ರ ತಿದ್ದುಪಡಿ:**

ಮೇಲ್ಕಂಡ ನಿಯಮಗಳ ೧೨ನೇ ನಿಯಮದಲ್ಲಿನ "ಆ ತಾರೀಖಿನ

ಮಧ್ಯಾಹ್ನ ೧೨ನ್ನು ದಾಟದಂತೆ" ಎಂಬ ಶಬ್ಧಗಳು, ಸಂಖ್ಯೆಗಳು, ಮತ್ತು ಅಕ್ಷರಗಳಿಗೆ ಬದಲಾಗಿ "ತಾರೀಖು ಮತ್ತು ಸಮಯದ ಮೊದಲು" ಎಂಬ ಶಬ್ಧಗಳನ್ನು ಸೇರಿಸಲಾಗುವುದು.

**೧೧. ನಿಯಮ ೧೩ರ ತಿದ್ದುಪಡಿ:**

ಮೇಲ್ಕಂಡ ನಿಯಮಗಳ ೧೩ನೇ ನಿಯಮದ ಉಪನಿಯಮ(೩)ರ "ಅಧಿಕೃತ ಗೆಜೆಟ್" ಎಂಬ ಶಬ್ಧಗಳ ನಂತರ "ಅಥವಾ ಅವರು ಸ್ಪರ್ಧಿಸುವ ಕಂದಾಯ ವಿಭಾಗವನ್ನು ಸೂಚಿಸಿ ಮೆಡಿಕಲ್ ಕೌನ್ಸಿಲ್‌ನ ಅಧಿಕೃತ ವೆಬ್‌ಸೈಟ್ ಮತ್ತು ಸೂಚನಾ ಫಲಕದಲ್ಲಿ' ಎಂಬ ಶಬ್ಧಗಳನ್ನು ಸೇರಿಸಲಾಗುವುದು.

**೧೨. ನಿಯಮ ೧೪ರ ತಿದ್ದುಪಡಿ:**

'ಮೇಲ್ಕಂಡ ನಿಯಮಗಳ, ೧೪ನೇ ನಿಯಮದಲ್ಲಿ ಕೆಳಕಾಣಿಸಿದುದನ್ನು ಸೇರಿಸಲಾಗುವುದು.

**೧೪. ಮತಪತ್ರಗಳ ತಯಾರಿಕೆ**

(೧) ಪ್ರತಿಯೊಂದು ಕಂದಾಯ ವಿಭಾಗದಲ್ಲಿನ ಚುನಾವಣೆಗೆ ಬಳಸುವ ಮತಪತ್ರಗಳಲ್ಲಿ ಸ್ವೀಕರಿಸಿ ಮಾನ್ಯ ಮಾಡಿದ ಎಲ್ಲಾ ಅಭ್ಯರ್ಥಿಗಳ ಹೆಸರುಗಳನ್ನು ಪ್ರತಿ ಕಂದಾಯ ವಿಭಾಗ ಒಳಗೊಂಡಿರುತ್ತದೆ. ಕಂದಾಯ ವಿಭಾಗವಾರು ಹೆಸರುಗಳು ಅಕಾರಾದಿಯಾಗಿ ಇರಿಸಲ್ಪಟ್ಟಿರುತ್ತವೆ. ಒಂದು ವೇಳೆ ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಒಂದೇ ಹೆಸರು ಹೊಂದಿದ್ದರೆ, ಅವರ ಹೆಸರಿನ ಮುಂದೆ ಪರಿಣಿತಿ ಅಥವಾ ವಾಸಸ್ಥಳ ಇಲ್ಲವೆ ಬೇರೆ ರೀತಿಯಲ್ಲಿ ಸೇರಿಸಿ ವ್ಯತ್ಯಾಸವನ್ನು ಗುರುತಿಸಬೇಕು.

(೨) ಮತಪತ್ರವು ಮೆಡಿಕಲ್ ಕೌನ್ಸಿಲ್‌ನ ಅಧಿಕೃತ ಮೊಹರನ್ನು ಹೊಂದಿರಬೇಕು. ಅದರಲ್ಲಿ ಯಾವುದೇ ಅನುಕ್ರಮ ಸಂಖ್ಯೆ ಇರಬಾರದು. ಮತಪತ್ರದ ಪಾರ್ಶ್ವ ಪ್ರತಿಗಳು ಅನುಕ್ರಮ ಸಂಖ್ಯೆಯನ್ನು ಹೊಂದಿರಬೇಕು.

**೧೩. ನಿಯಮ ೧೫ರ ಬದಲಾವಣೆ:**

ಮೇಲ್ಕಂಡ ನಿಯಮಗಳ ೧೫ನೇ ನಿಯಮಕ್ಕೆ ಕೆಳಕಾಣಿಸಿದ ಅಂಶಗಳನ್ನು ಪರ್ಯಾಯವಾಗಿ ಸೇರಿಸಲಾಗವುದು.

**೧೫. ಚುನಾವಣಾ ವಿಧಾನ:**

ವಿಷಯ ಅಥವಾ ಸನ್ನಿವೇಶ ಬೇರೆ ಏನನ್ನೂ ಸೂಚಿಸದಿದ್ದರೆ, ಕೆಳಕಂಡ ವಿಧಾನಗಳು ಮೆಡಿಕಲ್ ಕೌನ್ಸಿಲ್‌ನ ಸದಸ್ಯರನ್ನು ಆಯ್ಕೆ ಮಾಡುವ ಚುನಾವಣೆಗೆ ಅನ್ವಯವಾಗುತ್ತವೆ.

(i) ಕಂದಾಯ ವಿಭಾಗದ ವ್ಯಾಪ್ತಿಯಲ್ಲಿನ ಸರಿಯಾದ ಸ್ಥಳಗಳಲ್ಲಿ ಮತದಾನ ಕೇಂದ್ರಗಳನ್ನು ವ್ಯವಸ್ಥೆ ಮಾಡಬೇಕು. ಚುನಾವಣಾಧಿಕಾರಿ ಪ್ರತಿಯೊಂದು ಕೇಂದ್ರಕ್ಕೂ ಮತದಾರರನ್ನು ಹಂಚಿಕೆ ಮಾಡಬೇಕು.

(ii) ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಕೆಳಕಂಡಂತೆ ಪ್ರಕಟಣೆ ನೀಡಬೇಕು.

ಎ. ಚುನಾವಣೆಯ ಹೆಸರು

ಬಿ. ಸ್ಪರ್ಧಿಸಿರುವ ಅಭ್ಯರ್ಥಿಗಳ ಹೆಸರುಗಳು

ಸಿ. ಮತದಾನದ ಕಾಲಾವಧಿ ಮತ್ತು

ಡಿ. ಯಾವ ವಿಭಾಗಕ್ಕೆ ಅದು ಸಂಬಂಧಿಸಿದೆ.

(iii) ಪ್ರತಿಯೊಂದು ಮತದಾನ ಕೇಂದ್ರಕ್ಕೆ ಎಲೆಕ್ಷನ್ ಅಧಿಕಾರಿಯನ್ನು ಚುನಾವಣಾಧಿಕಾರಿ ನೇಮಿಸಿರುತ್ತಾರೆ. ಕೇಂದ್ರ ಉಸ್ತುವಾರಿ ಹೊತ್ತ ಎಲೆಕ್ಷನ್ ಅಧಿಕಾರಿ ಕೇಂದ್ರದಲ್ಲಿ ಸಿಸ್ತನ್ನು ಕಾಪಾಡಬೇಕು. ಮತದಾರನಲ್ಲದೆ ಬೇರೆಯವರು ಮತದಾನ ಕೇಂದ್ರದೊಳಕ್ಕೆ ಬರುವ ಪರವಾನಗಿ ಇರುವುದಿಲ್ಲ. ಫೋಟೊ ಇರುವ ಮಾನ್ಯ ಮಾಡಿದ ಗುರುತಿನ ಪತ್ರವನ್ನು ಪರಿಶೀಲಿಸುವ ಕಾರ್ಯವನ್ನು ಮಾಡಬೇಕು.

(iv) ಮತದಾನಕ್ಕೆ ನಿರ್ಧರಿಸಿದ ಸಮಯದ ಪ್ರಾರಂಭದ ಮೊದಲು ಮತ್ತು ಮುಕ್ತಾಯದ ನಂತರ ತನ್ನ ಮತದಾನ ಮಾಡಲು ಯಾವುದೇ ಮತದಾರನಿಗೆ ತನ್ನ ಮತ ಚಲಾಯಿಸಲಿಕ್ಕೆ ಮತದಾನ ಕೇಂದ್ರದೊಳಕ್ಕೆ ಪ್ರವೇಶ ಮಾಡಲು ಅವಕಾಶ ಮಾಡಿಕೊಡಬಾರದು.

(v) ನಿಯಮಿತ ಕಾಲಮಿತಿಯೊಳಗೆ ಮತದಾರರು ತಮ್ಮ ಮತವನ್ನು ದಾಖಲಿಸಲು ಅನುಕೂಲವಾಗುವಂತೆ ವಿಭಾಗಗಳ ಸಂಖ್ಯೆಯನ್ನು ಎಲೆಕ್ಷನ್ ಅಧಿಕಾರಿ ನಿರ್ಧರಿಸಿದಂತೆ ಪ್ರತಿಯೊಂದು ಮತದಾನ ಕೇಂದ್ರ ಹೊಂದಿರಬೇಕು.

(vi) ಮತದಾನ ಪ್ರಾರಂಭಿಸುವ ಮೊದಲು ಎಲೆಕ್ಷನ್ ಅಧಿಕಾರಿ ಅಭ್ಯರ್ಥಿಗಾಗಲೀ ಅಥವಾ ಕೇಂದ್ರದಲ್ಲಿ ಇರುವ ಅವರ ಅಧಿಕೃತ ಏಜೆಂಟ್ ಅವರಿಗಾಗಲೀ ಮತದಾನ ಪೆಟ್ಟಿಗೆಗಳು ಖಾಲಿ ಇರುವುದನ್ನು ತೋರಿಸಿ, ನಂತರ ಅದಕ್ಕೆ ಬೀಗ ಹಾಕಿ ಅವರೆದುರಿನಲ್ಲಿ ಸೀಲ್ ಮಾಡಿ ಬಳಸಬೇಕು.

(vii) ಪ್ರತಿ ಮತದಾರ, ಮತದಾನ ಕೇಂದ್ರದೊಳಗೆ ಪ್ರವೇಶಿಸಿದ ನಂತರ ಎಲೆಕ್ಷನ್ ಅಧಿಕಾರಿಯು ಮತದಾರನ ಹೆಸರು ಮತ್ತಿತರ ವಿವರಗಳನ್ನು ಪರಿಶೀಲಿಸಿ ಮತಪತ್ರವನ್ನು ನೀಡುವ ಮೊದಲು ಮತದಾರನ ಗುರುತನ್ನು ಜಾಗರೂಕತೆಯಿಂದ ದೃಢಪಡಿಸಿಕೊಳ್ಳುತ್ತಾನೆ.

(viii)ತಾನೇ ನಿರ್ದಿಷ್ಟ ಮತದಾರ ಎಂಬ ಒಬ್ಬ ವ್ಯಕ್ತಿ ಮತಪತ್ರಿಕೆಯನ್ನು ಕೇಳಿದಾಗ, ಬೇರೊಬ್ಬ ವ್ಯಕ್ತಿ ತಾನೇ ಮತದಾರ ಎಂದು ಆಗಲೇ ಮತ ಚಲಾಯಿಸಿದ್ದರೆ, ಎಲೆಕ್ಷನ್ ಅಧಿಕಾರಿ ಅವರ ಗುರುತಿನ ಬಗ್ಗೆ ಕೇಳುವ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಬಂದಲ್ಲಿ, ಮತಪತ್ರವನ್ನು ನೀಡಬೇಕು. ಅಂತಹ ಸನ್ನಿವೇಶದಲ್ಲಿ ಕೊಡ ಮಾಡಿದ ಮತಪತ್ರ ಕ್ರಮಗತಿಯಲ್ಲಿ, ಚುನಾವಣಾ ಕೇಂದ್ರದಲ್ಲಿ ಬಳಕೆ ಮಾಡಿದ ಮತ ಪತ್ರಿಗಳ ಕಟ್ಟಿನಲ್ಲಿ ಕೊನೆಯದಾಗಿರಬೇಕು.

(ix) 'ಟೆಂಡರ್ಡ್ (ನಿವೇದಿಸು) ಮತಪತ್ರ' ಎಂಬ ಶಬ್ಧಗಳನ್ನು ಮತಪತ್ರಿಕೆಯ ಹಿಂಬದಿಯಲ್ಲಿ ಬರೆದು ಅದನ್ನು ಎಲೆಕ್ಷನ್ ಅಧಿಕಾರಿಯಿಂದ ದೃಢೀಕರಿಸಲ್ಪಡಬೇಕು. ಈ ಟೆಂಡರ್ಡ್ ಮತಪತ್ರವನ್ನು ಮತ ಹಾಕುವ ವಿಭಾಗದಲ್ಲಿ ಮತ ಚಲಾಯಿಸಿದ ಮೇಲೆ ಅದನ್ನು ಮತಪೆಟ್ಟಿಗೆಯಲ್ಲಿ ಹಾಕದೇ, ಎಲೆಕ್ಷನ್ ಅಧಿಕಾರಿಗೆ ಕೊಡಬೇಕು. ಅದನ್ನು ಆತ ಬೇರೊಂದು ಲಕೋಟೆಯಲ್ಲಿ ಇಟ್ಟು ಮೇಲೆ ಸಮರ್ಪಕವಾಗಿ ಗುರುತು ಮಾಡುತ್ತಾನೆ.

(x) ಮತದಾರನಿಗೆ ಮತಪತ್ರವನ್ನು ಕೊಡುವ ಮೊದಲು ಮತದಾರ ಪಟ್ಟಿಯಲ್ಲಿರುವ ಮತದಾರನ ಸಂಖ್ಯೆಯನ್ನು ಪಾರ್ಶ್ವ ಪ್ರತಿಯಲ್ಲಿ ನಮೂದಿಸಬೇಕು. ಆ ಪಾರ್ಶ್ವಪ್ರತಿಯ ಮೇಲೆ ಮತದಾರ ಸಹಿ ಮಾಡಬೇಕು. ಅದನ್ನು ನೀಡುವ ಅಧಿಕಾರಿ ಮತದಾರನ ತೋರು ಬೆರಳ ಮೇಲೆ ಗುರುತಿನ ಶಾಹಿಯನ್ನು ಹಚ್ಚುತ್ತಾನೆ. ತನ್ನ ಬಳಿ ಇರುವ ಮತದಾರ ಪಟ್ಟಿಯಲ್ಲಿ ಮತ ಪತ್ರಿಕೆ ನೀಡಿದ ಮತದಾರನ ಸಂಖ್ಯೆ ಎದುರು ಗುರುತು ಮಾಡುತ್ತಾನೆ.

ಎ. ಮತಪತ್ರವನ್ನು ಪಡೆದ ಮೇಲೆ ಮತದಾರ, ಮತದಾನ ಮಾಡುವ ಯಾವುದೇ ಒಂದು ವಿಭಾಗಕ್ಕೆ ಹೋಗಿ ಅಲ್ಲಿ ತನ್ನ ಮತ ಚಲಾಯಿಸುತ್ತಾನೆ. ಅದರ ನಂತರ ಎಲೆಕ್ಷನ್ ಅಧಿಕಾರಿಯ ಮುಂದಿರಿಸಿರುವ ಮತ ಪೆಟ್ಟಿಗೆಯಲ್ಲಿ ಮತಪತ್ರವನ್ನು ಹಾಕುತ್ತಾನೆ.

ಬಿ. ಯಾವುದೇ ರೀತಿ ತಡಮಾಡದೇ ಪ್ರತಿಯೊಬ್ಬ ಮತದಾರ ಮತ ಚಲಾಯಿಸಿ ಮತದಾನ ಕೇಂದ್ರದಿಂದ ಮತಪೆಟ್ಟಿಗೆಯಲ್ಲಿ ಮತ ಪತ್ರ ಹಾಕಿದ ನಂತರ ಹೊರ ನಡೆಯುತ್ತಾನೆ.

ಸಿ. ಮತದಾರ ತನ್ನ ಮತಪತ್ರವನ್ನು ಅನುದ್ದಿಶ್ಯವಾಗಿ ಕೆಡಿಸಿದರೆ, ಆತನಿಗೆ ಮತ್ತೊಂದು ಮತಪತ್ರವನ್ನು ಕೊಡಬೇಕು. ಕೆಟ್ಟು ಹೋದ ಮತಪತ್ರ ಮತ್ತು ಅದರ ಪಾರ್ಶ್ವಪ್ರತಿಗಳನ್ನು ಎಲೆಕ್ಷನ್ ಅಧಿಕಾರಿ ಕ್ಯಾನ್ಸಲ್ ಮಾಡಬೇಕು ಮತ್ತು

ಡಿ. ಮತದಾನ ಕೇಂದ್ರಕ್ಕೆ ಪ್ರತಿಯೊಬ್ಬ ಅಭ್ಯರ್ಥಿ ತನ್ನ ಏಜೆಂಟ್‌ನನ್ನು ನಿಯಮಿಸಬಹುದು. ಅದನ್ನು ಬರವಣಿಗೆಯಿಂದ ಆತ ದೃಢೀಕರಿಸಬೇಕು. ಆ ಏಜೆಂಟ್ ಅಧಿಕಾರ ಪತ್ರವನ್ನು ಎಲೆಕ್ಷನ್ ಅಧಿಕಾರಿಗೆ ನೀಡಬೇಕು. ಅದನ್ನಾಧರಿಸಿ ಆತ ಮತದಾನಕೇಂದ್ರದಲ್ಲಿ ಇರುವುದಕ್ಕೆ ಪರವಾನಗಿ ದೊರೆಯುತ್ತದೆ.

**೧೪. ನಿಯಮ ೧೬ರ ಬದಲಾವಣೆ:**

ಮೇಲ್ಕಂಡ ನಿಯಮಗಳ ನಿಯಮ ೧೬ಕ್ಕೆ ಕೆಳಕಂಡ ಅಂಶಗಳನ್ನು ಸೇರ್ಪಡೆ ಮಾಡಲಾಗುವುದು.

**೧೬. ಮತಗಳ ಪರಿಶೀಲನೆ ಮತ್ತು ಎಣಿಕೆ:**

೧. ಅಸಿಂಧುವಾದ ಮತಪತ್ರಗಳನ್ನು ತಿರಸ್ಕರಿಸಿದ ಮೇಲೆ ಚುನಾವಣಾಧಿಕಾರಿಯು

(i) ಉಳಿದ ಮತಪತ್ರಗಳನ್ನು ೨೫ ಅಥವಾ ೫೦ರ ಕಟ್ಟಿನಂತೆ ವ್ಯವಸ್ಥೆ ಮಾಡಿ, ಪ್ರತಿಯೊಬ್ಬ ಅಭ್ಯರ್ಥಿ ಬೇರೆ ಬೇರೆಯಾಗಿ ಪಡೆದ ಮತಗಳ ಸಂಖ್ಯೆಯನ್ನು ಎಣಿಸುತ್ತಾನೆ.

(ii) ಎಣಿಕೆ ಮಾಡಿ, ಪ್ರತಿಯೊಂದು ಕಟ್ಟಿನಲ್ಲಿ ಪಡೆದಿರುವ ಮತಗಳ ಸಂಖ್ಯೆಯನ್ನು ದಾಖಲಿಸುತ್ತಾನೆ.

(iii) ಪ್ರತಿಯೊಬ್ಬ ಅಭ್ಯರ್ಥಿ ಪಡೆದಿರುವ ಮತಗಳ ಸಂಖ್ಯೆಯನ್ನು ಒಟ್ಟುಗೂಡಿಸುತ್ತಾನೆ. ಆಯ್ಕೆಯಾಗಬೇಕಾದರೆ ಅಭ್ಯರ್ಥಿಗಳ ಸಂಖ್ಯೆಯನ್ನಾಧರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮತ ಪಡೆದಿರುವ ಅಭ್ಯರ್ಥಿ ಆಯ್ಕೆಯಾದುದನ್ನು ಘೋಷಿಸುತ್ತಾನೆ.

೨. ಚುನಾವಣಾಧಿಕಾರಿಯು ತಾನು ನಿಗದಿಪಡಿಸಿದ ದಿನ ಮತ್ತು ಸಮಯ ಹಾಗೂ ಸ್ಥಳದಲ್ಲಿ ಪರಿಶೀಲನೆ ಮತ್ತು ಮತಗಳ ಎಣಿಕೆಗೆ ಹಾಜರಾಗುತ್ತಾನೆ.

೩. ಮತಗಳ ಎಣಿಕೆಯ ಕಾಲದಲ್ಲಿ ಯಾವುದೇ ಅಭ್ಯರ್ಥಿ ಸ್ವತಃ ಇಲ್ಲವೆ ಆತನ ಅಧಿಕೃತ ಪ್ರತಿನಿಧಿ ಹಾಜರಿರಬಹುದು.

೪. ಚುನಾವಣಾ ಅಧಿಕಾರಿಯು ತನಗೆ ಸರಿ ಎನಿಸಿದ ರೀತಿಯಲ್ಲಿ ಮತಗಳ ಎಣಿಕೆಗೆ ತನಗೆ ಸಹಾಯ ಮಾಡಲು ಅಗತ್ಯವೆನಿಸಿದಷ್ಟು ಮೆಡಿಕಲ್ ಕೌನ್ಸಿಲ್ ಕಛೇರಿಯ ಸಿಬ್ಬಂದಿಯನ್ನು ಪರಿಶೀಲಕರು ಎಂದು ನಾಮಕರಣ ಮಾಡಬಹುದು.

೫. ಕೆಳಕಂಡ ಅಂಶಗಳು ಕಂಡಲ್ಲಿ ಚುನಾವಣಾಧಿಕಾರಿಯು ಮತಪತ್ರಗಳನ್ನು ತಿರಸ್ಕರಿಸುತ್ತಾನೆ.

- ಎ. ಅದು ಚುನಾವಣಾಧಿಕಾರಿಯ ಕಿರುಸಹಿ ಅಥವಾ ಮೊಹರು ಸಹಿಯನ್ನು ಹೊಂದಿರದಿದ್ದರೆ ಅಥವಾ
- ಬಿ. ಮತದಾರ ತನ್ನ ಹೆಸರಿನ ಸಹಿಮಾಡಿ ಅಥವಾ ಒಂದು ಶಬ್ಧ ಬರೆದು ಇಲ್ಲವೆ ಏನಾದರೂ ಗುರುತುಮಾಡಿ, ಮತಪತ್ರ ತನ್ನದು ಎಂದು ಗುರುತಿಸುವಂತೆ ಮಾಡಿದ್ದರೆ, ಅಥವಾ
- ಸಿ. ಅದರ ಮೇಲೆ ಯಾವುದೇ ಮತ ಚಲಾಯಿಸಿರದಿದ್ದರೆ ಅಥವಾ
- ಡಿ. ಮತದಾರ ನೀಡಬೇಕಾದ ಮತಗಳ ಸಂಖ್ಯೆಗೂ ಮತ್ತು ಆತ ದಾಖಲಿಸಬೇಕಾದ ಮತಗಳ ಸಂಖ್ಯೆಗೂ ತಾಳೆಯಾಗದಿದ್ದರೆ, ಅಥವಾ
- ಇ. ಮತದಾರ ಯಾವುದೇ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತ ನೀಡಿದ್ದರೆ, ಅಥವಾ
- ಎಫ್. ಒಂದು ಅಥವಾ ಹೆಚ್ಚು ಮತಗಳನ್ನು ನೀಡಿದ ಕಾರಣದಿಂದಾಗಿ ಅಸ್ಪಷ್ಟತೆ ಇದ್ದಲ್ಲಿ ಅದು ಅಸಿಂಧು. ಅದೇ ಮತಪತ್ರದ ಮೇಲೆ ಒಂದಕ್ಕಿಂತ ಹೆಚ್ಚು ಮತ ಕೊಡಬೇಕಾಗಿದ್ದಲ್ಲಿ, ಮತದಾರ ಗುರುತು ಮಾಡಿರುವುದು ಯಾವ ಅಭ್ಯರ್ಥಿಗೆ ಸೇರಬೇಕು ಎಂಬುದರ ನಿರ್ಧಾರ ಅನುಮಾನಕ್ಕೆ ಎಡೆಮಾಡಿಕೊಟ್ಟಿದ್ದರೆ ಆ ಮತ– ಇಡೀ ಮತ ಪತ್ರವಲ್ಲ– ಅಸಿಂಧುವಾಗುತ್ತದೆ.

೬. ಯಾವುದೇ ಮತಪತ್ರ ನಿರ್ದಿಷ್ಟ ಬೇಡಿಕೆಗೆ ಅನುಗುಣವಾಗಿಲ್ಲವೆಂದು ತಕರಾರು ಮಾಡಿದರೆ ಇಲ್ಲವೆ ಮತಪತ್ರದ ಬಗ್ಗೆ ಚುನಾವಣಾಧಿಕಾರಿ ತಕರಾರು ಮಾಡಿದರೆ, ಅದರ ಬಗ್ಗೆ ಚುನಾವಣಾಧಿಕಾರಿಯು ಕೂಡಲೇ ನಿರ್ಧಾರ ಕೈಕೊಳ್ಳುವನು, ಆತನ ನಿರ್ಣಯವೇ ಅಂತಿಮ.

**೧೫. ನಿಯಮ ೧೮ಕ್ಕೆ ತಿದ್ದುಪಡಿ:**

ಮೇಲ್ಕಂಡ ನಿಯಮಗಳ ೧೮ನೇ ನಿಯಮ 'ಅಧಿಕೃತ ರಾಜ್ಯಪತ್ರ' ಎಂಬ ಶಬ್ಧಗಳ ನಂತರ ಅಥವಾ ಮೆಡಿಕಲ್ ಕೌನ್ಸಿಲ್‌ನ ಸೂಚನಾಫಲಕ ಮತ್ತು ಮೆಡಿಕಲ್ ಕೌನ್ಸಿಲ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ' ಎಂಬ ಶಬ್ಧಗಳನ್ನು ಸೇರಿಸಲಾಗುವುದು.

**೧೬. ಬದಲಾಯಿಸುವ ನಿಯಮ ೪೩:**

ಮೇಲ್ಕಂಡ ನಿಯಮಗಳಲ್ಲಿನ ೪೩ನೇ ನಿಯಮಕ್ಕೆ ಕೆಳಕಂಡುದುದನ್ನು ಸೇರಿಸಬೇಕು.

**೪೩. ನೊಂದಣಿ ನವೀಕರಣ :**

ಅಧಿನಿಯಮದ ಅಡಿಯಲ್ಲಿ ನೋಂದಾಯಿತರಾದ ಪ್ರತಿಯೊಬ್ಬ ವೃತ್ತಿಪರ ವೈದ್ಯ ನವೀಕರಣ ಶುಲ್ಕ ಒಂದು ಸಾವಿರ ರೂಪಾಯಿಗಳೊಡನೆ ಪ್ರತಿ ಐದು ವರುಷಕ್ಕೊಮ್ಮೆ ಡಿಸೆಂಬರ್ ೩೧ರಂದು ಅಥವಾ ಅದಕ್ಕೂ ಮೊದಲು ತಮ್ಮ ಹೆಸರನ್ನು ದಾಖಲೆಯಲ್ಲಿ ಮುಂದುವರಿಸುವುದಕ್ಕೆ ಮೆಡಿಕಲ್ ಕೌನ್ಸಿಲ್‌ಗೆ ಅರ್ಜಿ ಸಲ್ಲಿಸಬೇಕು.

**೧೭. ಹೊಸ ನಿಯಮಗಳು ೪೩ ಎ ಮತ್ತು ೪೩ಬಿ ಸೇರ್ಪಡೆ:**

ಮೇಲ್ಕಂಡ ನಿಯಮಗಳ ೪೩ನೇ ನಿಯಮದ ನಂತರ, ಕೆಳಕಂಡ ಬದಲಿಸಿದ ನಿಯಮಗಳನ್ನು ಸೇರಿಸಬೇಕು.

**೪೩–ಎ ಸಿ.ಎಂ.ಇ ಗೆ ಮಾನ್ಯತೆ**

೧) ಸಿ.ಎಂ.ಇ ಗಳಿಗೆ ಮಾನ್ಯತೆ ಮತ್ತು ಒಪ್ಪಿಗೆ ನೀಡುವುದು ಮತ್ತು ಮಾನ್ಯತಾ ಅಂಕಗಳನ್ನು ನೀಡುವುದು ಮೆಡಿಕಲ್ ಕೌನ್ಸಿಲ್‌ನ ಏಕೈಕ ವಿವೇಚನೆಗೆ ಸೇರಿದ್ದು. ಅದು ಶಿಕ್ಷಕ ವೃಂದದ ರಚನೆ, ಭಾಗವಹಿಸುವುದು, ಉಪನ್ಯಾಸಕರ ಸ್ಥಾನಮಾನ, ಸಿಎಂಇ ಅಥವಾ ಸಮ್ಮೇಳನದಲ್ಲಿ ಮಂಡಿಸುವ ಲೇಖನಗಳ ವಿಷಯಗಳ ಗುಣಮಟ್ಟ ಮತ್ತು ವಿಷಯವನ್ನು ಅವಲಂಬಿಸಿದೆ.

೨) ಯಾವುದೇ ವೃತ್ತಿಪರ ಸಂಸ್ಥೆ ಅಥವಾ ಮಂಡಳಿ ಅಥವಾ ಶಿಕ್ಷಕ ಸಂಸ್ಥೆ ಸಿಎಂಇಗಳನ್ನು ಆಯೋಜಿಸಬಹುದು. ಅವುಗಳ ಒಪ್ಪಿಗೆ ಮತ್ತು ಮಾನ್ಯತೆಗೆ ಮೆಡಿಕಲ್ ಕೌನ್ಸಿಲ್‌ಗೆ ಅರ್ಜಿ ಸಲ್ಲಿಸಬೇಕು. ಸಂಸ್ಥೆಯ

ವಿಶ್ವಾಸಾರ್ಹತೆಯನ್ನು ಪರಿಶೀಲಿಸಿ, ಆ ಸಂಸ್ಥೆಗಳಿಗೆ ಸಿಎಂಇಗಳನ್ನು ಸಂಘಟಿಸಲು. ಮಾನ್ಯತೆಯ ಪ್ರಮಾಣ ಪತ್ರವನ್ನು ನೀಡಬಹುದು,

೩) ಅಸೋಸಿಯೇಶನ್ ಅಥವಾ ಸಂಸ್ಥೆಯ ಅಧಿಕಾರಿವರ್ಗ ಫಾರಂ– ಜಿ. ಯಲ್ಲಿ ಮೆಡಿಕಲ್ ಕೌನ್ಸಿಲ್‌ಗೆ ಅರ್ಜಿ ಸಲ್ಲಿಸುತ್ತದೆ. ಅರ್ಜಿಯಲ್ಲಿ ಸಿಎಂಇ ಅಥವಾ ಸಮ್ಮೇಳನದಲ್ಲಿನ ಉಪನ್ಯಾಸಕರ ಹೆಸರು, ಹುದ್ದೆ ಮತ್ತು ದೇಶ ಹಾಗೂ ಉಪನ್ಯಾಸದ ವಿಷಯವನ್ನು ಒಳಗೊಂಡ ಸಂಪೂರ್ಣ ಕಾರ್ಯಕ್ರಮ ವನ್ನು ಹೊಂದಿರತಕ್ಕದ್ದು.

೪) ಮೆಡಿಕಲ್ ಕೌನ್ಸಿಲ್‌ಗೆ ಮಾನ್ಯತಾ ಅಂಕಗಳಿಗೆ ಅರ್ಜಿ ಸಲ್ಲಿಸುವಾಗ ಪ್ರತಿಯೊಬ್ಬ, ಉಪನ್ಯಾಸಕರಿಗೆ ನೀಡುವ ಕಾಲಾವಧಿ, ಉಪನ್ಯಾಸದ ವಿಷಯವನ್ನು ನಮೂದಿಸಬೇಕು.

೫) ನಿಯಮಿತವಾಗಿ ಸಿಎಂಇಗಳನ್ನು ಸಂಘಟಿಸುವ ಮಾನ್ಯತೆ ತಡೆದ ಸಂಸ್ಥೆಗಳು ಮೆಡಿಕಲ್ ಕೌನ್ಸಿಲ್‌ನ ಒಪ್ಪಿಗೆಯನ್ನು ಪಡೆಯುತ್ತವೆ. ಸಿಎಂಇಯ ತಾರೀಖು ಮತ್ತು ಸಮಯವನ್ನು ಕಡೆಯ ಪಕ್ಷ ಹದಿನೈದು ದಿನಗಳಿಗಿಂತ ಮುಂಚೆ ತಿಳಿಸಿದಲ್ಲಿ ಮೆಡಿಕಲ್ ಕೌನ್ಸಿಲ್ ಸಿಎಂಎಗೆ ವೀಕ್ಷಕರನ್ನು ಕಳುಹಿಸಿ ಕೊಡಲು ಅನುಕೂಲವಾಗುತ್ತದೆ.

೬) ಪ್ರತಿನಿಧಿಗಳಿಗೆ ಅಸೋಸಿಯೇಶನ್ ಅಥವಾ ಸಂಸ್ಥೆ ಪ್ರಮಾಣ ಪತ್ರವನ್ನು ಸಿಎಂಇಯಲ್ಲಿ ಹಾಜರಾಗಿ ಸಿಎಂಇ ಅಥವಾ ಸಮ್ಮೇಳನ ಅಥವಾ ಕಮ್ಮಟ ಮುಗಿದ ನಂತರವೇ ಪ್ರಮಾಣ ಪತ್ರವನ್ನು ಕೊಡಬಹುದೇ ವಿನ: ಸಿಎಂಇ, ಅಥವಾ ಸಮ್ಮೇಳನ ಅಥವಾ ಕಮ್ಮಟಕ್ಕೆ ನೋಂದಣಿ ಮಾಡಿಕೊಳ್ಳು ತ್ತಿರುವಾಗ ಕೊಡಲಾಗದು.

೭) ಅಸೋಸಿಯೇಷನ್ ಅಥವಾ ಸಂಸ್ಥೆ ಪ್ರತಿನಿಧಿಗಳ ಅಭಿಪ್ರಾಯಗಳ ದಾಖಲೆಯನ್ನು, ಮತ್ತು ಸಿಎಂಇ ಅಥವಾ ಸಮ್ಮೇಳನ ಅಥವಾ ಕಮ್ಮಟದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಪಟ್ಟಿಯನ್ನು ಐದು ವರುಷಗಳ ಕಾಲ ಇಟ್ಟುಕೊಳ್ಳಬೇಕು.

೮) ಒಂದು ವೇಳೆ ನೀಡಿದ ಪ್ರಮಾಣ ಪತ್ರ ಸುಳ್ಳೆಂದು ಮೆಡಿಕಲ್ ಕೌನ್ಸಿಲ್ ಗಮನಕ್ಕೆ ಬಂದರೆ, ಮಾನ್ಯತಾ ಪ್ರಮಾಣ ಪತ್ರ ನೀಡುವ ಅಸೋಸಿಯೇಷನ್ ಅಥವಾ ಸಂಸ್ಥೆಯ ಮಾನ್ಯತಾ ಸರ್ಟಿಫಿಕೇಟನ್ನು ರದ್ದು ಮಾಡಲಾಗುವುದು.

೯) ಅವಶ್ಯಕವೆನಿಸಿದರೆ, ಮೆಡಿಕಲ್ ಕೌನ್ಸಿಲ್ ಮತ್ತಷ್ಟು ವಿವರಗಳನ್ನು ನೀಡಲು ಕೇಳಬಹುದು ಅಥವಾ ಮಾನ್ಯತೆ ಕೊಡುವ ಮೊದಲು ಅರ್ಜಿ ಸಲ್ಲಿಸಿದ ಸಂಸ್ಥೆಯನ್ನು ತಪಾಸಣೆ ಮಾಡಬಹುದು.

೧೦) ಒಂದು ವೇಳೆ ಸಿಎಂಇಯನ್ನು ಮಾನ್ಯತೆಯಿಲ್ಲದ ಸಂಸ್ಥೆಯೊಡನೆ ಆಯೋಜಿಸಿದಲ್ಲಿ, ಅದಕ್ಕಾಗಿ ಅರ್ಜಿಯನ್ನು ಮಾನ್ಯತೆ ಪಡೆದಿರುವ ಅಸೋಸಿಯೇಶನ್ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸಬೇಕು. ಅಲ್ಲದೆ ನೋಂದಣಿ ಶುಲ್ಕವನ್ನು ಮಾನ್ಯತೆ ಪಡೆದ ಸಂಸ್ಥೆಯ ಹೆಸರಿನಲ್ಲಿ ಸಂಗ್ರಹಿಸಬೇಕು.

**೪೩–ಬಿ. ಮಾನ್ಯತಾ ಅಂಕಗಳ ನೀಡಿಕೆ:**

**೧) ಆನ್ ಲೈನ್–ಮುಂದುವರೆದ ವೈದ್ಯ ಶಿಕ್ಷಣ (ಸಿಎಂಇ) :** ಕರ್ನಾಟಕ ರಾಜ್ಯದಲ್ಲಿ ನೆಲೆಸಿರುವ ವೈದ್ಯರಿಗೆ, ಐದು ವರುಷಗಳ ಸಂಪೂರ್ಣ ಅವಧಿಯಲ್ಲಿ (ಐದು ವರುಷಗಳಲ್ಲಿ ಗರಿಷ್ಠ ೬) ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ನೀಡಿದ ಶೇ. ೨೦ ರವರೆಗಿನ ಆನ್‌ಲೈನ್ ಸಿಎಂಇಗಳನ್ನು ಪರಿಗಣಿಸಲಾಗುವುದು. ರಾಜ್ಯದ ಹೊರಗೆ ಅಥವಾ ಹೊರ ದೇಶಗಳಲ್ಲಿ ನೆಲೆಸಿರುವ ವೈದ್ಯರಿಗೆ, ಶೇ ೧೦೦ ರಷ್ಟು ಆನ್ ಲೈನ್ ಮಾನ್ಯತಾ ಅಂಕಗಳನ್ನು ಅಥವಾ ಅವರು ಭಾಗವಹಿಸಿದ ಅದಕ್ಕೆ ಸಮನಾದ ಸಿಎಂಇ ಗಳಿಗೆ ನೀಡಲಾಗುವುದು. ಮೆಡಿಕಲ್ ಕೌನ್ಸಿಲ್ ತಾನೇ ಆನ್ ಲೈನ್–ಸಿಎಂಇ ಕಾರ್ಯಕ್ರಮವನ್ನು ಪ್ರಾರಂಭಿಸುವ ಕಾಲದವರೆಗೂ, ಸಂಸ್ಥೆಗಳು ಆಯೋಜಿಸುವ ಒಂದೊಂದು ಆನ್‌ಲೈನ್ ಸಿಎಂಇಯನ್ನು ಪರಿಗಣಿಸಿ ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ನೀಡುವುದು.

೨) ಕೆಳಕಂಡ ಪರಿಮಾಣ ಸೂತ್ರ ಹೊರರಾಜ್ಯ ಅಥವಾ ದೇಶದಲ್ಲಿ ಆಯೋಜಿಸಿದ ಸಮ್ಮೇಳನಗಳು ಮತ್ತು ಸಂಶೋಧನಾ ಬರವಣಿಗೆ ಮತ್ತು ಪುಸ್ತಕಗಳ ಪ್ರಕಟಣೆಗಳಿಗೆ ಅನ್ವಯವಾಗುತ್ತದೆ.

i) ಮಾನ್ಯ ಮಾಡಿದ ಪರಿಣಿತ ಅಸೋಸಿಯೇಶನ್‌ಗಳು ಎಂದರೆ ಅಸೋಸಿಯೇಶನ್ ಆಫ್ ಫಿಜಿಸಿಯನ್ಸ್ ಆಫ್ ಇಂಡಿಯ, ಅಸೋಸಿಯೇಶನ್ ಆಫ್ ಸರ್ಜನ್ಸ್ ಆಫ್ ಇಂಡಿಯ, ಫೆಡರೇಷನ್ ಆಫ್ ಆಬ್ಸ್ಟೆಟ್ರಿಕ್ಸ್ ಅಂಡ್ ಗೈನಕಾಲಜಿ ಸೊಸೈಟಿ ಆಫ್ ಇಂಡಿಯ ಮುಂತಾದ ಸಂಸ್ಥೆಗಳು ವ್ಯವಸ್ಥೆ ಮಾಡಿದ ರಾಷ್ಟ್ರೀಯ ಸಮ್ಮೇಳನಗಳಿಗೆ ಗರಿಷ್ಠ ೪ ಅಂಕಗಳು

ii) ಬೇರೆ ಇತರ ಸಮ್ಮೇಳನ ಅಥವಾ ಕಮ್ಮಟಕ್ಕೆ ಗರಿಷ್ಠ ೨ ಅಂಕಗಳು

iii) ಪಠ್ಯ ಪುಸ್ತಕ ಪ್ರಕಟಣೆಗೆ ಗರಿಷ್ಠ ೪ ಅಂಕಗಳು ಮತ್ತು ತಮ್ಮ ಪರಿಣಿತಿ ವಿಷಯಕ್ಕೆ ಸಂಬಂಧಿಸಿದ ಇತರ ಪುಸ್ತಕಗಳಿಗೆ ಗರಿಷ್ಠ ೩ ಅಂಕಗಳು

iv) ಇಂಡೆಕ್ಸ್ ಆದ ಜರ್ನಲ್‌ಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಸಮ್ಮೇಳನಗಳಲ್ಲಿ ಪ್ರಕಟಿಸಿದ ಸ್ವಂತಿಕೆಯ ಸಂಶೋಧನಾ ಬರವಣಿಗೆಗೆ ಗರಿಷ್ಠ ೨ ಅಂಕಗಳು.

v) ಪರದೇಶ ಸಮ್ಮೇಳನಗಳು ಮತ್ತು ಆನ್ ಲೈನ್ ಮನ್ನಣೆ ಅಂಕಗಳು ತುಂಬ ವ್ಯತ್ಯಾಸ ಹೊಂದಿವೆ. – ಸಮ್ಮೇಳನ ಅಥವಾ ಸಿಎಂಇ ಒಳಗೊಂಡ

ವಿಷಯ ಮತ್ತು ವಿಶ್ವಾಸಾರ್ಹತೆಯನ್ನು ನೋಡಿ ಗರಿಷ್ಠ ೩ ಅಂಕಗಳನ್ನು ನೀಡಲಾಗುವುದು.

೩) ಮೆಡಿಕಲ್ ಕಾಲೇಜುಗಳು ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿನ ವೈದ್ಯಕೀಯ ಶಿಕ್ಷಕರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಆರು ತಿಂಗಳ ಒಂದು ಟರ್ಮ್‌ಗೆ ೨ ಮಾನ್ಯತಾ ಅಂಕಗಳನ್ನು ಪಡೆಯುತ್ತಾರೆ. ಅದರ ಬಗ್ಗೆ ಸಂಸ್ಥೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಹಾಜರು ಪಡಿಸಬೇಕು.

೪) ವಿಶ್ವವಿದ್ಯಾಲಯ ಅಥವಾ ಸರಕಾರ ಅಥವಾ ಆರೋಗ್ಯ ಸೇವೆಗಳ ನಿರ್ದೇಶಕರು ವೈದ್ಯಕೀಯ ಅಧಿಕಾರಿಗಳಿಗೆ ವ್ಯವಸ್ಥೆ ಮಾಡುವ ಎಲ್ಲ ಅಧಿಕೃತ ತರಬೇತಿ ಕಾರ್ಯಕ್ರಮಗಳಿಗೆ  ಸೂಚಿತ ಗುಣಮಟ್ಟದಂತೆ ಮಾನ್ಯತೆ ನೀಡಿದ ಅಂಕಗಳನ್ನು ನೀಡಲಾಗುವುದು. ವಿಶ್ವವಿದ್ಯಾಲಯ ಅಥವಾ ಸರಕಾರ ಅಥವಾ ಆರೋಗ್ಯ ಸೇವೆಗಳ ನಿರ್ದೇಶಕರು ತರಬೇತಿಗೆ ಪೂರ್ವಭಾವಿಯಾಗಿ, ಮಾನ್ಯತಾ ಅಂಕಗಳನ್ನು ದೊರಕಿಸಲು ವಿವರಗಳನ್ನು ಮೆಡಿಕಲ್ ಕೌನ್ಸಿಲ್‌ಗೆ ತಿಳಿಸಿರಬೇಕು.

೫) ಸಿಎಂಇ ವ್ಯವಸ್ಥೆ ಮಾಡಿದ ಸಂಸ್ಥೆ ಸೂಚಿಸಲ್ಪಟ್ಟ ಮೊಬಲಗನ್ನು ಮೆಡಿಕಲ್ ಕೌನ್ಸಿಲ್‌ನಲ್ಲಿ ಠೇವಣಿ ಮಾಡಬೇಕು. ಬಾಕಿಯನ್ನು ತೀರಿಸಿದ ನಂತರವೇ ಮುಂದಿನ ಸಿಎಂಇಯನ್ನು ವ್ಯವಸ್ಥೆ ಮಾಡಲು ಸಂಸ್ಥೆಗೆ ಪರವಾನಿಗೆ ಕೊಡಲಾಗುವುದು.

೬) ಆನ್-ಲೈನ್ ಅರ್ಜಿಯನ್ನು ಒಂದು ತಿಂಗಳು ಪೂರ್ವಭಾವಿಯಾಗಿ ಮಾಡಬೇಕು. ಕನಿಷ್ಠ ಹದಿನೈದು ದಿನಗಳು ಪೂರ್ವಭಾವಿಯಾಗಿ ಅರ್ಜಿ ಸಲ್ಲಿಸುವುದು ಅಗತ್ಯ. ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಈ ಕಾಲಮಿತಿಯನ್ನು ಮನ್ನಾ ಮಾಡುವ ಅಧಿಕಾರ ಸಿಎಂಇ ಸಮಿತಿಯ ಸದಸ್ಯರು ಹೊಂದಿರುತ್ತಾರೆ.

ಅರವತ್ತೈದು ವರುಷ ವಯೋಮಾನವನ್ನು ಮುಗಿಸಿದ ವೈದ್ಯರು ಮತ್ತು ಕೆಳಗೆ ನಮೂದಿಸಿರುವ ವರ್ಗಗಳು ತಮ್ಮ ನೋಂದಣಿಯನ್ನು ನವೀಕರಿಸಲು ಮಾನ್ಯತಾ ಅಂಕಗಳನ್ನು ಗಳಿಸುವುದರಿಂದ ವಿನಾಯತಿ ಪಡೆದಿರುತ್ತಾರೆ.

i) ಸಚಿವರು ಅಥವಾ ವಿಧಾನ ಸಭೆ ಸದಸ್ಯರು ಅಥವಾ ವಿಧಾನ ಪರಿಷತ್ತು ಸದಸ್ಯರು ಅಥವಾ ಪಾರ್ಲಿಮೆಂಟ್ ಸದಸ್ಯರು

ii) ಭಾರತ ಆಡಳಿತ ಸೇವೆಗಳು

iii) ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ, ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧೀನದಲ್ಲಿ ಕೆಲಸ ಮಾಡುವ ನಿರ್ದೇಶಕರು, ಕುಲಸಚಿವರು, ಉಪ-ಕುಲಸಚಿವರು ಮತ್ತು  ಸಹಾಯಕ ಕುಲಸಚಿವರು.

iv) ಡೀನ್ ಅಥವಾ ನಿರ್ದೇಶಕರು, ವೈದ್ಯಕೀಯ ಅಧೀಕ್ಷಕರು ಮತ್ತು ಮೆಡಿಕಲ್ ಕಾಲೇಜು ಪ್ರಾಂಶುಪಾಲರು.

v) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ವೈದ್ಯಕೀಯ ಶಿಕ್ಷಣದ ಜಂಟಿ ನಿರ್ದೇಶಕರು ಅಥವಾ ಉಪ ನಿರ್ದೇಶಕರು.

vi) ಆರೋಗ್ಯ ಸೇವೆಗಳ ನಿರ್ದೇಶಕರು, ಜಂಟಿ ನಿರ್ದೇಶಕರು, ಅಥವಾ ಉಪ ನಿರ್ದೇಶಕರು, ಅಥವಾ ಜಿಲ್ಲಾ ಆರೋಗ್ಯ ಅಧಿಕಾರಿ ಮತ್ತು ಜಿಲ್ಲಾ ಶಸ್ತ್ರಜ್ಞ.

vii) ಸೇನಾ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ವೈದ್ಯರು.

viii) ಕರ್ನಾಟಕ ಸರಕಾರದಿಂದ ಬೇರೆ ರಾಜ್ಯಗಳು ಅಥವಾ ದೇಶಗಳಿಗೆ ಎರವಲು ಸೇವೆಗೆ ಕಳಿಸಲ್ಪಟ್ಟವರು ಮತ್ತು

ix) ವಿಶೇಷ ಸನ್ನಿವೇಶಗಳಲ್ಲಿ, ಮೆಡಿಕಲ್ ಕೌನ್ಸಿಲ್‌ನ ಶಿಫಾರಿಸಿನಂತೆ ಮೆಡಿಕಲ್ ಬೋರ್ಡಿನ ಅಧ್ಯಕ್ಷರಿಗೆ ಮಾನ್ಯತಾ ಅಂಕಗಳನ್ನು ದೊರಕಿಸಿಕೊಳ್ಳುವಲ್ಲಿ ವಿನಾಯಿತಿ ಕೊಡಬಹುದು.

**೧೮ ನಿಯಮ ೪೭ಕ್ಕೆ ತಿದ್ದುಪಡಿ :** ಮೇಲ್ಕಂಡ ನಿಯಮಗಳ ೪೭ನೇ ನಿಯಮದಲ್ಲಿ (i) ಕಲಂ (೧)ರಲ್ಲಿನ 'ರೂಪಾಯಿ ಹದಿನೈದು' ಎಂಬ ಶಬ್ದಗಳನ್ನು 'ರೂಪಾಯಿ ಎರಡು ಸಾವಿರ' ಎಂಬ ಶಬ್ದಗಳಿಂದ ಬದಲಾಯಿಸಲಾಗುವುದು.

(ii) ಕಲಂ ೨ರಲ್ಲಿನ 'ರೂಪಾಯಿ ಎರಡು' ಎಂಬ ಶಬ್ದಗಳನ್ನು 'ರೂಪಾಯಿ ಎರಡು ಸಾವಿರ' ಎಂಬ ಶಬ್ದಗಳಿಂದ ಬದಲಾಯಿಸಲಾಗುವುದು.

(iii) ಕಲಂ (೩)ರಲ್ಲಿನ

ಎ) 'ವಾರ್ಷಿಕ' ಶಬ್ದವನ್ನು ತೆಗೆದುಹಾಕಲಾಗುತ್ತದೆ : ಮತ್ತು

ಬಿ) 'ಎರಡು ರೂಪಾಯಿಗಳು' ಎಂಬ ಶಬ್ದಗಳನ್ನು 'ಎರಡು ಸಾವಿರ ರೂಪಾಯಿಗಳು' ಎಂಬ ಶಬ್ದಗಳಿಂದ ಬದಲಿಸಲಾಗುತ್ತದೆ. ಮತ್ತು (iv) ಕಲಂ (೪)ರಲ್ಲಿನ 'ಮೂರು ರೂಪಾಯಿಗಳು' ಎಂಬ ಶಬ್ದಗಳನ್ನು 'ಸಾವಿರ ರೂಪಾಯಿಗಳು' ಎಂಬ ಶಬ್ದಗಳಿಂದ ಬದಲಾಯಿಸ ಲಾಗುತ್ತದೆ.

**೧೯ ಫಾರಂ ಜಿ ಸೇರ್ಪಡೆ :** ಮೇಲ್ಕಂಡ ನಿಯಮಗಳಲ್ಲಿನ ಫಾರಂ ಎಫ್ ನಂತರ ಕೆಳಕಂಡ ಫಾರಂ ಅನ್ನು ಸೇರ್ಪಡೆ ಮಾಡಲಾಗುವುದು.

**ಫಾರಂ ಜಿ**

# ಸಿಎಂಇ, ಮುಂತಾದವುಗಳ ಮಾನ್ಯತೆಗಾಗಿ ಅರ್ಜಿ

(ನಿಯಮ ೪೩–ಎಯ ಉಪನಿಯಮ (೩) ನೋಡಿ)

**ಗೆ,**

**ಅಧ್ಯಕ್ಷರು/ಛೇರ್ಮನ್**

**ಸಿ.ಎಂ.ಇ. ಮಾನ್ಯಾತಾ ಸಮಿತಿ**

**ಕರ್ನಾಟಕ ಮೆಡಿಕಲ್‌ಕೌನ್ಸಿಲ್ ಬೆಂಗಳೂರು**

ಮಾನ್ಯರೇ,

ವಿಷಯ : **ಮಾನ್ಯತೆ ಮಾಡಿದ ಪ್ರಮಾಣ ಪತ್ರ ನೀಡಿಕೆ**

ಸಿಎಂಇ/ಸೆಮಿನಾರ್,,,,,,,,,,,,,,,,,,,,,,,,, ವಿಷಯ.... ತಾರೀಖು

ನಮ್ಮ ಸಂಸ್ಥೆಯು ಸಿಎಂಇ ಕಾರ್ಯಕ್ರಮಗಳು ಕಮ್ಮಟಗಳು/ ಸೆಮಿನಾರ್‌ಗಳನ್ನು ವೈದ್ಯರ ಜ್ಞಾನವನ್ನು ಮೇಲ್ದರ್ಜೆಗೇರಿಸಲು ವ್ಯವಸ್ಥೆ ಮಾಡಲು ಅಪೇಕ್ಷಿಸಿದೆ. ನಾವು ನಿರ್ದಿಷ್ಟ ಗುರಿಯಿರಿಸಿದ ವೈದ್ಯರನ್ನು ಒಳಗೊಳ್ಳುವಂತೆ ಮೇಲ್ಕಂಡ ಕಾರ್ಯಕ್ರಮಗಳನ್ನು ಯೋಜಿಸಿ ಕಾರ್ಯಗೊಳಿಸಬಲ್ಲ ಸಾಮರ್ಥ್ಯವನ್ನು ತೋರಿಸಿದ್ದೇವೆ. ನಮ್ಮ ಸಂಸ್ಥೆಯ ಸಂಕ್ಷಿಪ್ತ ವಿವರಗಳು ಹೀಗಿವೆ.

೧. ಸಂಸ್ಥೆಯ ಹೆಸರು..........................................................

೨. ಎಂಸಿಐನಿಂದ ಮಾನ್ಯತೆ ಪಡೆದ ಸಂಸ್ಥೆ (ಮೆಡಿಕಲ್ ಕಾಲೇಜುಗಳಿಗೆ ಅನ್ವಯ).....................................

೩. ಅಸೋಸಿಯೇಷನ್ ಹೆಸರು..................................................

೪. ಅಸೋಸಿಯೇಶನ್ ನೋಂದಣಿ ಸಂಖ್ಯೆ......................................

ನಮ್ಮ ಸಂಸ್ಥೆಗೆ ಮಾನ್ಯತಾಪತ್ರ ನೀಡಬೇಕಾಗಿ ನಾನು ಕೋರುತ್ತೇನೆ.

ಧನ್ಯವಾದಗಳು

ಗೌರವಾದರಗಳೊಂದಿಗೆ

ನಿಮ್ಮ ನಂಬಿಕೆಯ

ಸಹಿ

ಹೆಸರು..................

ಅಧಿಕೃತ ಮುದ್ರೆ

ಗಮನಿಸಿ : ಅರ್ಜಿಯನ್ನು ಸಂಸ್ಥೆಯ ಅಧಿಕೃತ ಲೆಟರ್‌ಹೆಡ್ ಮೇಲೆ ಮಾಡಬೇಕು

## ಕರ್ನಾಟಕ ವೈದ್ಯಕೀಯ ಪರಿಷತ್ತು

16/6 ಮಿಲ್ಲರ್‌ಟ್ಯಾಂಕ್ ಬಂಡ್ ಏರಿಯಾ, ವಸಂತನಗರ

ಬೆಂಗಳೂರು 560 052

**E mail:** karmedi_council@yahoo.co.in

**Website:** www.karnatakamedicalcouncil.com